ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ

ಸಂಪುಟ 8 ● ಸಂಚಿಕೆ 7 ● ಡಿಸೆಂಬರ್ 2025 ● ಬೆಲೆ ರೂ. 18/-

ವಿಳುಮ

VENMAI ಕನ್ನಡ ಮಾಸಿಕ

ಕನ್ನಡ ಮಾಸಿಕ

ಆಸಕ್ತಿ

ವಿಶೇಷಾಂಕ


RAMRAJ
CULTURE CLUB®
MATCHING DHOTIS • SHIRTS
Where Heritage Meets Harmony
CULTURE CLUB
FUSION
Available at Ramraj Cotton Showrooms and All Leading Textile Shops
Shop online at www.ramrajcotton.in
SCAN QR CODE
FOR STORE LOCATION

ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ

ಯಾವುದರಲ್ಲಿ ನಮಗೆ ಹೆಚ್ಚು ಆಸಕ್ತಿ ಇದೆ ಎಂದು ಅರಿತು
ಆ ದಿಸೆಯಲ್ಲಿ ಅಭಿವೃದ್ಧಿ ಹೊಂದಲು ಪ್ರಯತ್ನಿಸಿ
ಜೀವನದಲ್ಲಿ ಮುಂದೆ ಬರಲು ದಾರಿ ತೋರಿಸುವ

ಆಸಕ್ತಿ
ವಿಶೇಷಾಂಕ

ಎನ್ನುವ ಈ
ಉಪಯುಕ್ತ
ಸಂಚಿಕೆಯನ್ನು
ನಿಮಗೆ ನೀಡಲು
ನಾವು ತುಂಬಾ
ಹೆಮ್ಮೆ ಪಡುತ್ತೇವೆ.

ಗೌರವಾನ್ವಿತರಿಗೆ...

ನಮಸ್ಕಾರ.

ಮಕ್ಕಳು ಸ್ವಾಭಾವಿಕವಾಗಿಯೇ ಕಲಿಯಲು ಕುತೂಹಲ ತೋರಿಸುತ್ತಾರೆ. ಪ್ರತಿದಿನ ಹೊಸ ವಿಷಯಗಳನ್ನು ನೋಡಿನೋಡಿ ಕಲಿಯುವಾಗ, ಅವರು ಆರೋಗ್ಯಕರವಾಗಿ ಬೆಳೆಯುತ್ತಾರೆ. ಕುತೂಹಲದಿಂದ ಸದಾ ಪ್ರಶ್ನೆಗಳನ್ನು ಕೇಳುವ ಮಕ್ಕಳು ಮುಂದೆ ಸಮರ್ಥ ವ್ಯಕ್ತಿಗಳಾಗಿ ಬೆಳೆಯುತ್ತಾರೆ.

ಕುತೂಹಲವು ಮಾನವನ ನೈಸರ್ಗಿಕ ಭಾವನೆ. ನಮಗೆ ಯಾವುದರಲ್ಲಿ ಹೆಚ್ಚು ಆಸಕ್ತಿ ಇದೆ ಎಂಬುದು ಮುಖ್ಯ. ಪ್ರತಿಯೊಂದು ವಯಸ್ಸಿನಲ್ಲೂ ಕುತೂಹಲವು ಕಲಿಕೆಯ ಪ್ರಕ್ರಿಯೆಯ ಒಂದು ಪ್ರಮುಖ ಭಾಗವಾಗಿದೆ. ಇದು ನಮ್ಮ ಜೀವನವನ್ನು ಉತ್ಸಾಹಭರಿತವಾಗಿಸುತ್ತದೆ. ಇದು ಮನಸ್ಸನ್ನು ಉತ್ತೇಜಿಸಲು ಮತ್ತು ಅದನ್ನು ಯೌವ್ವನದಿಂದ ಇರಿಸಲು ಸಹಾಯ ಮಾಡುತ್ತದೆ. ಆಸಕ್ತಿಯಿಲ್ಲದ ಜೀವನದಲ್ಲಿ, ಎಲ್ಲವೂ ಶೀಘ್ರದಲ್ಲೇ ನೀರಸವಾಗುತ್ತದೆ.

ನಾವು ಯಾವುದರ ಬಗ್ಗೆ ಆಸಕ್ತರಾಗಿದ್ದೇವೆಯೋ ಅದೇ ನಮ್ಮ ಜೀವನದ ಪರಿಣಿತಗಳನ್ನು ನಿರ್ಧರಿಸುತ್ತದೆ. ಉತ್ಸಾಹವು ಪ್ರತಿ ದಿನವನ್ನೂ ಆಸಕ್ತಿದಾಯಕವಾಗಿಸಲು ಅಡಿಪಾಯವಾಗಿದೆ. ಒಳ್ಳೆಯ ವಿಷಯಗಳಲ್ಲಿ ಉತ್ಸುಕರಾಗಿರುವ ಜನರು ತೃಪ್ತಿಕರ ಜೀವನವನ್ನು ನಡೆಸುತ್ತಾರೆ. ಕೆಟ್ಟ ವಿಷಯಗಳ ಬಗ್ಗೆ ಉತ್ಸುಕರಾಗಿರುವವರು ಅದರ ಪರಿಣಾಮಗಳನ್ನು ಅನುಭವಿಸುತ್ತಾರೆ. ಉತ್ಸಾಹವು ಒಂದು ರೀತಿಯ ವೈಜ್ಞಾನಿಕ ಕುತೂಹಲವೇ ಆಗಿದೆ. ಹೊಸ ವಿಷಯಗಳನ್ನು ಕಲಿಯುವ, ಅರ್ಥ ಮಾಡಿಕೊಳ್ಳುವ ಮತ್ತು ಅವು ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬುದನ್ನು ತಿಳಿದುಕೊಳ್ಳುವ ಬಯಕೆ ಮೂಲಭೂತವಾಗಿದೆ.

ಸಂಬಂಧಗಳ ನಡುವೆ ಅವರು ತಮ್ಮ ಬಗ್ಗೆ ಯೋಚಿಸುವುದಕ್ಕಿಂತ ಇತರರ ಬಗ್ಗೆ ಯೋಚಿಸುವುದರತ್ತ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಾರೆ. ಪತ್ರಿಕೆಗಳು ಮತ್ತು ದೂರದರ್ಶನಗಳಲ್ಲಿನ ಪ್ರಮುಖ ಸುದ್ದಿಗಳಿಗಿಂತ ಅವರು ಗಾಸಿಪ್‌ನಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿರುತ್ತಾರೆ. ಬೌದ್ಧಿಕ ಕಾರ್ಯಕ್ರಮಗಳಿಗೆ ಸಾರ್ವಜನಿಕರಿಂದ ಹೆಚ್ಚಿನ ಬೆಂಬಲ ಸಿಗುವುದಿಲ್ಲ. ಜ್ಞಾನದ ಹುಡುಕಾಟವನ್ನು ಉತ್ತೇಜಿಸುವ ರಸಪ್ರಶ್ನೆ ಕಾರ್ಯಕ್ರಮ ಬಂದಾಗ, ವಿದ್ಯಾರ್ಥಿಗಳು ಅದನ್ನು ವೀಕ್ಷಿಸಲು ಆಸಕ್ತಿ ವಹಿಸುವುದಿಲ್ಲ. ಹೆಚ್ಚು ಗ್ಲಾಮರ್ ಮತ್ತು ಸಂಬಂಧದ ಸಮಸ್ಯೆಗಳನ್ನು ತೋರಿಸುವ ಕಾರ್ಯಕ್ರಮಗಳು ಟಿವಿಯಲ್ಲಿ ಹೆಚ್ಚಿನ ಟಿಆರ್‌ಪಿಗಳನ್ನು ಪಡೆಯುತ್ತವೆ. ಈ ಆಸಕ್ತಿ ಸಮಾಜದಲ್ಲಿಯೂ ಪ್ರತಿಧ್ವನಿಸುತ್ತದೆ. ಕೆಲಸ ಮಾಡಲು ಆಸಕ್ತಿ ಹೊಂದಿರುವ ಸಮಾಜವು ಅಭಿವೃದ್ಧಿಯ ಹಾದಿಯಲ್ಲಿ ಸಾಗುತ್ತದೆ. ಆದರೆ ಮೋಜು ಮಾಡಲು ಹೆಚ್ಚು ಆಸಕ್ತಿ ಹೊಂದಿರುವ ಸಮಾಜವು ಅವನತಿಯ ಹಾದಿಯಲ್ಲಿ ಸಾಗುವುದು ಅನಿವಾರ್ಯ.

ಕುತೂಹಲವು ಅದ್ಭುತವಾದ ಮಾಂತ್ರಿಕ ಕೀಲಿಕೈ. ಅದು ಯಾವುದೇ ಕಠಿಣವಾದ ಬಾಗಿಲನ್ನೂ ಸುಲಭವಾಗಿ ತೆರೆಯಬಲ್ಲದು. ಕುತೂಹಲ ಇರುವವರಿಗೆ ಮಾತ್ರ ತಿಳಿಯದಿರುವುದೂ ತಿಳಿಯುತ್ತದೆ. ಅವರು ಹೊಸ ವಿಷಯಗಳನ್ನು ಕಲಿಯಲು ಪ್ರಯತ್ನಿಸುತ್ತಾರೆ. ಅವರು ನಿರಂತರವಾಗಿ ಪ್ರಶ್ನೆಗಳನ್ನು ಕೇಳುತ್ತಾರೆ. ಅವರು ತಮ್ಮ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವ

ಮತ್ತು ತಮ್ಮ ಗುರಿಗಳನ್ನು ಪೂರ್ಣಗೊಳಿಸುವ ಬಗ್ಗೆ ಗಂಭೀರವಾಗಿರುತ್ತಾರೆ ಮತ್ತು ಸವಾಲುಗಳನ್ನು ಎದುರಿಸಲು ಸದಾ ಸಿದ್ಧರಾಗಿರುತ್ತಾರೆ. ಅವರು ತಮಗೆ ತಿಳಿದಿಲ್ಲದ ಹೊಸ ವಿಷಯಗಳನ್ನು ಕಲಿಯಲು ಸಹ ಸಿದ್ಧರಿರುತ್ತಾರೆ. ಇದು ಪ್ರಾಮಾಣಿಕ ಕುತೂಹಲ. ಇದು ಒಬ್ಬ ವ್ಯಕ್ತಿಯನ್ನು ತನ್ನ ಆಸಕ್ತಿಯ ಕ್ಷೇತ್ರದಲ್ಲಿ ಪರಿಣಿತನನ್ನಾಗಿ ಮಾಡುತ್ತದೆ. ಉತ್ತಮ ಉದ್ಯೋಗಿ, ಉತ್ತಮ ಉದ್ಯಮಿ, ಉತ್ತಮ ಶಿಕ್ಷಕ, ಉತ್ತಮ ರಾಜಕಾರಣಿ, ಉತ್ತಮ ವಿದ್ವಾಂಸ, ಉತ್ತಮ ಭಾಷಣಕಾರ, ಇವೆಲ್ಲವೂ ಅವರಿಗೆ 'ಶ್ರೇಷ್ಠ' ಎಂಬ ವಿಶೇಷಣವನ್ನು ತಂದು ಕೊಡುತ್ತವೆ.

ಕುತೂಹಲವೇ ಇಲ್ಲದಿರುವ ಗುಣವು ನಮ್ಮನ್ನು ಹಿಂದೆ ತಳ್ಳಬಹುದು. ಯಾವುದೇ ವಯಸ್ಸಿನ ವ್ಯತ್ಯಾಸವಿಲ್ಲದೆ, ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚು ಸಮಯ ಕಳೆಯುವ ಜನರು ಈಗ ಹೆಚ್ಚುತ್ತಿದ್ದಾರೆ. ಅವರು ದಿನಕ್ಕೆ ನಾಲ್ಕೈದು ಗಂಟೆಗಳಾದರೂ ಇಂಟರ್ನೆಟ್ ಅನ್ನು ಸರ್ಚ್ ಮಾಡುತ್ತಾರೆ. ಅನೇಕ ಜನರು ಆಸಕ್ತಿಯಿಂದ ಮಾಡುವ ಈ ಸಮಯದ ಹೂಡಿಕೆಯು ಅವರು ಏನಾದರೂ ಹೊಸದನ್ನು ಕಲಿಯಲು ಯಾವುದೇ ರೀತಿಯಲ್ಲೂ ಸಹಾಯ ಮಾಡುವುದಿಲ್ಲ. ಅದಕ್ಕೆ ವಿರುದ್ಧವಾಗಿ, ಇದು ಅವರಲ್ಲಿ ವ್ಯಾಕುಲತೆಯನ್ನು ಸೃಷ್ಟಿಸುತ್ತದೆ. ಇದು ಅರ್ಧ ಘಂಟೆಯವರೆಗೆ, ಯಾವುದರಲ್ಲಾದರೂ ಗಮನಹರಿಸುವ, ಕೇಳುವ ಮತ್ತು ಏನನ್ನಾದರೂ ನೋಡುವ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ. ಮನಸ್ಸು ಮತ್ತು ದೇಹಕ್ಕೆ ಹಾನಿಕಾರಕವಾಗುವ ಈ ವಿಷಯದಲ್ಲಿ ಹೆಚ್ಚು ಆಸಕ್ತಿ ಹೊಂದಿರುವ ಜನರು ತಮ್ಮ ಜೀವನದ ಪ್ರಮುಖ ಕ್ಷಣಗಳನ್ನು ಕಳೆದುಕೊಳ್ಳುತ್ತಾರೆ. ಅವರನ್ನು ಪ್ರೀತಿಸುವ ಜನರ ಮೇಲೂ ಇದು ಪರಿಣಾಮ ಬೀರುತ್ತದೆ.

ಆಸಕ್ತಿ ಹೊಂದಿರುವ ಜನರ ಕಾರ್ಯಕ್ಷಮತೆಯನ್ನು ನಿರ್ಣಯಿಸಲು ಒಂದು ಅಧ್ಯಯನವನ್ನು ನಡೆಸಲಾಯಿತು. ಅವರು ತಾವು ಮಾಡುವ ಕೆಲಸದಲ್ಲಿ ಸಕ್ರಿಯರಾಗಿರುತ್ತಾರೆ ಮತ್ತು ಏನನ್ನಾದರೂ ಅರ್ಥ ಮಾಡಿಕೊಳ್ಳಲು ಉತ್ಸುಕರಾಗಿರುತ್ತಾರೆ ಎಂದು ಅದರರಲ್ಲಿ ಕಂಡು ಬಂದಿದೆ. ಮಾನಸಿಕ ಅಡೆತಡೆಗಳನ್ನು ನಿವಾರಿಸಲು ಕುತೂಹಲವು ಉತ್ತಮ ಪ್ರೇರಕವಾಗಿದೆ ಎಂದು ಆ ಅಧ್ಯಯನವು ದೃಢಪಡಿಸಿದೆ.

ಸಾರಿಗೆ ಸೌಲಭ್ಯಗಳಿಲ್ಲದ ಭಾರತದ ಸಣ್ಣ ದ್ವೀಪವಾದ ರಾಮೇಶ್ವರಂನಲ್ಲಿ ಜನಿಸಿದ ಅಬ್ದುಲ್ ಕಲಾಂ ಅವರಿಗೆ ಶಿಕ್ಷಣದ ಮೇಲಿದ್ ಉತ್ಸಾಹವೇ ಅವರನ್ನು ಜಗತ್ತು ಮೆಚ್ಚುವ ವಿಜ್ಞಾನಿಯಾಗುವ ಮಟ್ಟಕ್ಕೆ ಎತ್ತರಿಸಿತು. ಹಲವು ಅಡೆತಡೆಗಳು ಇದ್ದರೂ, ಶಿಕ್ಷಣದ ಮೇಲೆ ಅವರಲ್ಲಿದ್ದ ಉತ್ಸಾಹವು ಆ ಎಲ್ಲಾ ಅಡೆತಡೆಗಳನ್ನೂ ಮುರಿಯಿತು.

ನಾನು ಕೂಡ, ವ್ಯಾಪಾರದೊಂದಿಗೆ ಯಾವುದೇ ಸಂಬಂಧವಿಲ್ಲದ ಒಂದು ಸರಳ ಕೃಷಿ ಕುಟುಂಬದಲ್ಲಿ ಜನಿಸಿದೆ. ಆದಾಗ್ಯೂ, ನಾನು ನನ್ನ 13ನೇ ವಯಸ್ಸಿನಲ್ಲೇ ವ್ಯಾಪಾರ ಮಾಡಲು ನಿರ್ಧರಿಸಿದೆ. ನನ್ನ ಕುತೂಹಲವು ನನ್ನನ್ನು ವ್ಯಾಪಾರದ ಕಡೆಗೆ ಸೆಳೆಯಿತು. ಇದೇ ನನ್ನ ಪಂಚೆ ಉದ್ಯಮದ ಅಡಿಪಾಯ. ದಕ್ಷಿಣ ಭಾರತದಾದ್ಯಂತ ಹಲವು ವರ್ಷಗಳ ಕಾಲ ಸಂಚರಿಸಿ, ವ್ಯಾಪಾರ ಮಾಡುವ ಮೂಲಕ ನಾನು ಅದರ ಜಟಿಲತೆಗಳನ್ನು ಅರಿತಿದ್ದೇನೆ. ನಾನು ನನ್ನ 23ನೇ ವಯಸ್ಸಿನಲ್ಲಿ ರಾಮರಾಜ್ ಕಾಟನ್ ಕಂಪನಿಯನ್ನು ಪ್ರಾರಂಭಿಸಿದೆ. ಇಂದು, ರಾಮ್‌ರಾಜ್ ಎಂದು ಕೇಳಿದರೆ ಎಲ್ಲರಿಗೂ 'ಪಂಚೆ'ಯ ನೆನಪಾಗುತ್ತದೆ. ಇದರ ಹಿಂದೆ ಅಪರಿಮಿತ ಉತ್ಸಾಹ ಮತ್ತು 40 ವರ್ಷಗಳಿಗೂ ಹೆಚ್ಚಿನ ಕಠಿಣ ಪರಿಶ್ರಮವಿದೆ.

ನಾನು ಪಂಚೆ ಉದ್ಯಮವನ್ನು ಪ್ರವೇಶಿಸಿದಾಗ, ನಮ್ಮ ತಿರುಪ್ಪೂರು ಪ್ರದೇಶದಲ್ಲಿ ಜವಳಿ ರಫ್ತು ಉದ್ಯಮವು ಹೆಚ್ಚು ಪ್ರಸಿದ್ಧಿಯಾಗಿತ್ತು. ಎಲ್ಲರೂ ನನಗೆ ಅದೇ ಉದ್ಯಮವನ್ನು ಮಾಡುವಂತೆ ಹೇಳಿದರು. 'ಯಾರೂ ಪಂಚೆಯ ವ್ಯಾಪಾರ ಮಾಡುವುದಿಲ್ಲ. ಹೋಗಿಹೋಗಿ ಅದನ್ನು ಮಾರಾಟ ಮಾಡಲು ಹೊರಟಿದ್ದೀಯಲ್ಲಾ' ಎಂದು ನನಗೆ ಹೇಳಲಾಯಿತು, ಒಟ್ಟಾ–ರೆಯಾಗಿ ಆ ಕುರಿತು ನಾನು ಬಹಳಷ್ಟು ನಿರಾಸಕ್ತಿಯ ಮಾತುಗಳನ್ನು ಕೇಳಿದೆ. ಆದರೂ ನಾನು ಅದರಲ್ಲಿ ಉತ್ಸಾಹದಿಂದ ಪ್ರವೇಶಿಸಿದೆ, 'ಇದು ನನಗೆ ಒಂದು ಅವಕಾಶ, ಇದು ನನಗೆ ತಿಳಿದಿರುವ ವ್ಯವಹಾರ. ನಾನು ಇದರಲ್ಲಿ ಹೊಸ ಮಾರುಕಟ್ಟೆಯನ್ನು ಸೃಷ್ಟಿಸಬಹುದು' ಎಂದು ಯೋಚಿಸಿದೆ.

ನಾನು ಜವುಳಿ ರಫ್ತು ವ್ಯವಹಾರಕ್ಕೆ ಇಳಿದಿದ್ದರೆ, ನಾನು ತುಂಬಾ ಶ್ರೀಮಂತನಾಗಬಹುದಿತ್ತು. ಆದರೆ ಕೇವಲ ಹಣ ಗಳಿಸುವುದು ಮಾತ್ರ ನನ್ನ ಉದ್ದೇಶವಾಗಿರಲಿಲ್ಲ. 'ನೇಕಾರರಿಗೆ ಜೀವನೋಪಾಯವನ್ನು ಒದಗಿಸುವ' ಬಯಕೆಯೂ ನನ್ನನ್ನು ಈ ವ್ಯವಹಾರಕ್ಕೆ ಸೆಳೆಯಿತು. ಆ ಒಳ್ಳೆಯ ಉದ್ದೇಶವೇ ನನ್ನನ್ನು ಯಶಸ್ವಿಯಾಗುವಂತೆ ಮಾಡಿದ್ದು.

ನಾನು ಪಂಚೆಯನ್ನು ಹೊಸದಾಗಿಯೇನೂ ಆವಿಷ್ಕರಿಸಲಿಲ್ಲ. ಇದು ಸಾವಿರಾರು ವರ್ಷಗಳ ಹಿಂದೆ ನಮ್ಮ ಪೂರ್ವಜರು ಸೃಷ್ಟಿಸಿದ ಮೊದಲ ಉಡುಪು. ಇದು ನಮ್ಮ ಸಂಸ್ಕೃತಿಯ ಹೆಮ್ಮೆಯ ಸಂಕೇತವಾದ ಸಾಂಪ್ರದಾಯಿಕ ಉಡುಪು. ಅದರಲ್ಲಿ ಸ್ವಲ್ಪ ಭಿನ್ನತೆಗಳನ್ನು ತರುವ ಮೂಲಕ ಯಶಸ್ವಿಯಾಗಲು ನನ್ನ ಆಸಕ್ತಿಯೇ ಕಾರಣ. ಪಾಕೆಟ್‌ಗಳಿರುವ ಧೋತಿ, ಕಟ್ಟದೆಯೇ ಅಂಟಿಕೊಳ್ಳುವ ವೆಲ್ಕ್ರೋ ಹೊಂದಿರುವ ಧೋತಿ, ಶರ್ಟ್‌ನ ಬಣ್ಣಕ್ಕೆ ಅನುಗುಣವಾಗಿ ಬಣ್ಣದ ಅಂಚುಗಳನ್ನು ಹೊಂದಿರುವ ಧೋತಿ ಮತ್ತು ಮಕ್ಕಳಿಗಾಗಿ ವಿಶೇಷ ಧೋತಿ... ಮುಂತಾದ ಹಲವು ನಾವೀನ್ಯತೆಗಳನ್ನು ಪರಿಚಯಿಸಿದ ನಂತರ, ಗ್ರಾಹಕರು ರಾಮರಾಜ್ ಕಾಟನ್ ಉತ್ಪನ್ನಗಳನ್ನು ಉತ್ಸಾಹದಿಂದ ಖರೀದಿಸಿ ಧರಿಸ ತೊಡಗಿದರು.

ನಾವು ನಮ್ಮ ದೈನಂದಿನ ಜೀವನದಲ್ಲಿ, ಎಲ್ಲದರಲ್ಲೂ ಕಲಿಯುವ ಉತ್ಸಾಹವನ್ನು ಅಳವಡಿಸಿಕೊಂಡು ನಮ್ಮ ವಿಶಿಷ್ಟ ಕೌಶಲ್ಯಗಳನ್ನು ಬೆಳೆಸಿಕೊಂಡರೆ ಜೀವನವು ಉತ್ತಮವಾಗಿರುತ್ತದೆ. ಕುತೂಹಲವನ್ನು ನಮ್ಮೊಳಗೆ ಆರದ ಜ್ವಾಲೆಯಾಗಿ ಬೆಳೆಸಿಕೊಳ್ಳೋಣ.

The Culturepreneur

ಗುರು ಕೃಪೆ

ಬಾಳ್ಗೆ ಭೂಮಂಡಲ –ಬಾಳ್ಗೆ ಸಮೃದ್ಧಿಯೊಂದಿಗೆ

ಕೆ.ಆರ್. ನಾಗರಾಜನ್

ಸಂಸ್ಥಾಪಕರು – ರಾಮ್‌ರಾಜ್ ಕಾಟನ್

ನಿಮ್ಮೊಳಗೆ ಇದೆಯೇ ಆಸಕ್ತಿ?

ಒಬ್ಬ ಚಿಕ್ಕ ಹುಡುಗ ಪ್ರತಿದಿನ ಪಿಟೀಲು ತರಗತಿಗೆ ಉತ್ಸಾಹದಿಂದ ಹಾಜರಾಗುತ್ತಿದ್ದ ಮತ್ತು ಮನೆಯಲ್ಲಿಯೂ ಸಾಕಷ್ಟು ಸಮಯ ಅಭ್ಯಾಸ ಮಾಡುತ್ತಿದ್ದ. ಭವಿಷ್ಯದಲ್ಲಿ ದೊಡ್ಡ ಪಿಟೀಲು ವಾದಕನಾಗಬೇಕೆಂದು ಅವನು ಕನಸು ಕಾಣುತ್ತಿದ್ದ. ಒಂದು ದಿನ, ಅವರು ಇದ್ದ ನಗರದಲ್ಲಿ ಒಂದು ಸಂಗೀತ ಕಚೇರಿ ಏರ್ಪಾಡಾಗಿತ್ತು. ದೇಶದ ಶ್ರೇಷ್ಠ ಪಿಟೀಲು ವಾದಕರೊಬ್ಬರು ಆ ಸಂಗೀತ ಕಚೇರಿಯಲ್ಲಿ ಪಿಟೀಲು ನುಡಿಸಲು ಬಂದಿದ್ದರು. ಇವನೂ ಆ ಸಂಗೀತ ಕಚೇರಿಗೆ ಹೋದ. ಅವರು ನುಡಿಸುತ್ತಿದ್ದ ಸಂಗೀತದ ಮಾಧುರ್ಯದಲ್ಲಿ ತನ್ನನ್ನೇ ಮರೆತು ಅದನ್ನು ಆಸ್ವಾದಿಸಿದ. ಸಂಗೀತ ಕಚೇರಿ ಮುಗಿದ ನಂತರ, ಅವನು ತನ್ನ ಪಿಟೀಲಿನೊಂದಿಗೆ ಅವರು ತಂಗಿದ್ದ ಹೋಟೆಲ್‌ಗೆ ಹೋದ. ಅವರನ್ನು ಭೇಟಿಯಾಗಿ ಅವರಿಗೆ ನಮಸ್ಕರಿಸಿ ಹೇಳಿದ:

"ನಾನು ಕೂಡ ಭವಿಷ್ಯದಲ್ಲಿ ಪಿಟೀಲು ವಾದಕನಾಗಬೇಕೆಂದು ಬಯಸುತ್ತಿದ್ದೇನೆ. ನಾನು ನಿಮಗಾಗಿ ಈಗ ಕೆಲವು ನಿಮಿಷಗಳ ಕಾಲ ಪಿಟೀಲು ನುಡಿಸುತ್ತೇನೆ. ಅದನ್ನು ಕೇಳಿ, ನನ್ನ ಕನಸು ನಿಜವಾಗುವ ಸಾಧ್ಯತೆಯಿದೆಯೇ ಅಥವಾ ನಾನು ಪಿಟೀಲು ಕಲಿಯುವುದರಲ್ಲಿ ನನ್ನ ಸಮಯವನ್ನು ಸುಮ್ಮನೆ ವ್ಯರ್ಥ ಮಾಡುತ್ತಿದ್ದೇನೆಯೇ ಎಂದು ನೀವು ನನಗೆ ಹೇಳಬಲ್ಲಿರಾ?" ಎಂದು ಆ ಹುಡುಗ ಅವರಲ್ಲಿ ಬೇಡಿಕೊಂಡ.

ಅವರು ಒಪ್ಪಿಕೊಂಡರು. ಹುಡುಗ ಪಿಟೀಲು ನುಡಿಸಲು ಪ್ರಾರಂಭಿಸಿದ. ದೇಶದ ಒಬ್ಬ ಶ್ರೇಷ್ಠ ಪಿಟೀಲು ವಾದಕನ ಮುಂದೆ ನುಡಿಸುತ್ತಿದ್ದೇನೆ ಎಂಬ ಭಾವನೆ ಅವನನ್ನು ಆತಂಕಕ್ಕೀಡು ಮಾಡಿತು. ಆದಾಗ್ಯೂ, ಅವನು ಹಿಂಜರಿಕೆಯಿಲ್ಲದೆ ನುಡಿಸಿದ. ಈವರೆಗೆ ತಾನು ನುಡಿಸಿದ ಯಾವುದೇ ಸಂಗೀತದ ತುಣುಕು-ಗಿಂತ ಉತ್ತಮವಾಗಿ ಇಂದು ಪಿಟೀಲು ನುಡಿಸಿದ್ದೇನೆ ಎಂದು ಅವನಿಗೆ ಅನಿಸಿತು. ನುಡಿಸುವಿಕೆಯನ್ನು ಮುಗಿಸಿದ ನಂತರ, ಅವನು ಅವರತ್ತ ನೋಡಿದ. ಅವರು ತಮ್ಮ ತುಟಿಗಳನ್ನು ಮುಂದೆ ಮಾಡಿ, ತಮ್ಮ ನಿರಾಶೆಯನ್ನು ಹೊರ ಹಾಕಿದರು. "ನೀನು ಸ್ವಲ್ಪ ಮಟ್ಟಿಗೆ ನುಡಿಸುತ್ತೀಯ. ನಿನ್ನೊಳಗೆ ಇದರ ಬಗ್ಗೆ ಹೆಚ್ಚು ಉತ್ಸಾಹ ಕಾಣುತ್ತಿಲ್ಲ. ಹಾಗಾಗಿ ನೀನು ಉತ್ತಮ ಪಿಟೀಲು ವಾದಕನಾಗಲು ಸಾಧ್ಯವಿಲ್ಲ" ಎಂದು ಅವರು ಹೇಳಿದರು. ಅವನು ಅಲ್ಲಿಂದೆದ್ದು ಹೊರಟ.

ಆ ಹುಡುಗನ ಹೃದಯವೇ ಮುರಿದು ಹೋಗಿತ್ತು. ಅವನು ಮನೆಗೆ ಹಿಂತಿರುಗಿದ. ತಾನು ಪ್ರತಿದಿನ ಉತ್ಸಾಹದಿಂದ ನುಡಿಸುತ್ತಿದ್ದ ಪಿಟೀಲು ಎತ್ತಿ ಪೆಟ್ಟಿಗೆಯಲ್ಲಿ ಇಟ್ಟುಬಿಟ್ಟ. "ನಾನು ಇನ್ನು ಮುಂದೆ ಪಿಟೀಲು ನುಡಿಸುವುದಿಲ್ಲ" ಎಂದು ಅವನು ತನ್ನ ಹೆತ್ತವರ ಮುಂದೆ ಘೋಷಿಸಿದ. ಅಂದಿನಿಂದ ಅವನು ತನ್ನ ತಂದೆ ನಡೆಸುತ್ತಿದ್ದ ವ್ಯವಹಾರದತ್ತ ಗಮನ ಹರಿಸತೊಡಗಿದ. ಶಾಲೆಯ ರಜಾದಿನಗಳಲ್ಲಿ ಅಲ್ಲಿಗೆ ಹೋಗಲು ಪ್ರಾರಂಭಿಸಿದ. ಕ್ರಮೇಣ, ಅವನು ವ್ಯವಹಾರದ ಜಟಿಲತೆಗಳನ್ನೆಲ್ಲ ಕಲಿತುಕೊಂಡ. ತನ್ನ ತಂದೆಯ ವ್ಯವಹಾರವನ್ನು ಇನ್ನೂ ವಿಸ್ತರಿಸಿದರೆ, ಇನ್ನೂ ಚೆನ್ನಾಗಿ ಗಳಿಸುವ ಅವಕಾಶವಿದೆ ಎಂದು ಅವನು ಅರಿತುಕೊಂಡ. ಅವನು ಅದನ್ನು ತುಂಬಾ ಉತ್ಸಾಹದಿಂದ ಮಾಡಿದ. ಪ್ರಬುದ್ಧ ಮತ್ತು ಅನುಭವಿಯಾಗಿದ್ದ ಅವನ ತಂದೆಯೇ ಆಶ್ಚರ್ಯಚಕಿತರಾಗುವ ಮಟ್ಟಿಗೆ

ಅವನು ಚತುರತೆಯಿಂದ ಕೆಲಸ ಮಾಡಿದ. ಕೆಲವೇ ವರ್ಷಗಳಲ್ಲಿ, ಅವನು ಆ ಪ್ರದೇಶದ ಅತಿದೊಡ್ಡ ಉದ್ಯಮಿಯಾದ.

ಮುಂದೊಂದು ದಿನ ಆ ಹುಡುಗ ವಿಮಾನ ನಿಲ್ದಾಣದಲ್ಲಿ ಆ ಶ್ರೇಷ್ಠ ಸಂಗೀತಗಾರರನ್ನು ನೋಡಿದ. ಅವರ ಬಳಿಗೆ ಹೋಗಿ ತನ್ನನ್ನು ಪರಿಚಯಿಸಿಕೊಂಡು ಹೇಳಿದ: "ಅದೃಷ್ಟವಶಾತ್ ಅಂದು ನೀವು ನನಗೆ ಸರಿಯಾದ ದಿಕ್ಕಿನಲ್ಲಿ ಮಾರ್ಗದರ್ಶನ ಮಾಡಿದಿರಿ. ನಿಮ್ಮ ಸಲಹೆಯನ್ನು ಕೇಳಿದ ನಂತರ ನಾನು ಪ್ರೀತಿಸಿದ ಆ ಪಿಟೀಲನ್ನು ತೆಗೆದಿಟ್ಟುಬಿಟ್ಟೆ. ಆ ಸಮಯದಲ್ಲಿ, ಅಂದು ನನ್ನ ಹೃದಯ ವಿದ್ರಾವಕವಾಗಿತ್ತು. ಆದರೆ, ಅಂದು ನಿಮ್ಮ ಸಲಹೆಯ ಮೇರೆಗೆ ತೆಗೆದುಕೊಂಡ ನಿರ್ಧಾರದಿಂದಾಗಿ ನಾನು ಇಂದು ಒಬ್ಬ ಉತ್ತಮ ಉದ್ಯಮಿಯಾಗಿದ್ದೇನೆ. ಆದರೆ ನಾನು ಕೆಲವೇ ಕೆಲವು ನಿಮಿಷಗಳ ಕಾಲ ಮಾತ್ರ ಪಿಟೀಲು ನುಡಿಸಿದ್ದನ್ನು ಕೇಳಿದ ನಿಮಗೆ, ನನಗೆ ಅದರಲ್ಲಿ ಹೆಚ್ಚು ಆಸಕ್ತಿ ಇಲ್ಲ ಎಂದು ಅದು ಹೇಗೆ ತಿಳಿಯಿತು?" ಎಂದು ಅವನು ಕೇಳಿದ.

ಸಂಗೀತಗಾರರು ಅವನನ್ನು ದೃಷ್ಟಿಸಿ ನೋಡಿ ಹೇಳಿದರು: "ಈ ಪ್ರಶ್ನೆ ಕೇಳುವ ಎಲ್ಲರಿಗೂ ನಾನು ಇದನ್ನೇ ಹೇಳುತ್ತೇನೆ. ನಿಜವಾಗಿಯೂ ಆಸಕ್ತಿ ಇರುವವರು ನಾನು ಹಾಗೆ ಹೇಳಿದರೂ ಪಿಟೀಲು ನುಡಿಸುವುದನ್ನು ಬಿಡುವುದಿಲ್ಲ. ಅಂತಹವರು ನನ್ನ ಅಭಿಪ್ರಾಯವನ್ನು ನಿರ್ಲಕ್ಷಿಸಿ ಪಿಟೀಲು ನುಡಿಸುವುದನ್ನು ಮುಂದುವರೆಸುತ್ತಾರೆ. ಅಂದು ಪಿಟೀಲು ನಿನಗೆ ಕೇವಲ ಹವ್ಯಾಸವಾಗಿತ್ತು, ನಿನ್ನ ಆಸಕ್ತಿ ವ್ಯವಹಾರದಲ್ಲಿತ್ತು" ಎಂದು ಹೇಳಿದರು.

ಉತ್ಸಾಹ ಎಂದರೆ ನಿಮ್ಮನ್ನು ನೀವು ಸರಿಯಾಗಿ ಕಂಡುಕೊಳ್ಳುವುದು, ನಿಮ್ಮ ಜೀವನದ ಮೂಲಾಧಾರ ಎಂದು ನೀವು ನಂಬುವುದನ್ನು ಅರ್ಥ ಮಾಡಿಕೊಳ್ಳಲು ನಿಮ್ಮೊಳಗೆ ಆಳವಾಗಿ ಹುಡುಕುವುದು. ಕೆಲವರು ಅದನ್ನು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಕಂಡುಕೊಳ್ಳುತ್ತಾರೆ, ಕೆಲವರಿಗೆ, ಜೀವನದ ಮುಂದಿನ ಹಂತಗಳಲ್ಲಿ ಅರ್ಥವಾಗುತ್ತದೆ. 'ನನಗೆ ಆಸಕ್ತಿ ಇದೆ ಎಂಬುದನ್ನು ನಾನು ಹೇಗೆ ಕಂಡು ಹಿಡಿಯುವುದು?' ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟ. ಆದರೆ ಕೆಲವು ವಿಷಯಗಳನ್ನು ಅನುಸರಿಸಿದರೆ, ನೀವು ಅದನ್ನು ಕಂಡುಕೊಳ್ಳಬಹುದು.

❖ ನಿಮ್ಮ ಅನುಕೂಲಕರವಾದ 'ಸೌಕರ್ಯ ವಲಯ'ದಿಂದ ಹೊರಗೆ ಹೋಗಿ ಬಹಳಷ್ಟು ವಿಷಯಗಳನ್ನು ಪ್ರಯತ್ನಿಸಿ. ಆದರೆ ಯಾವುದರಲ್ಲೂ ತುಂಬಾ ಆತುರಪಡಬೇಡಿ. ನೀವು ಹೊಸ ಉದ್ಯೋಗಗಳು ಅಥವಾ ವೃತ್ತಿ ಜೀವನವನ್ನು ಪ್ರಯತ್ನಿಸಿದಾಗ, ನೀವು ಯಾವುದರ ಬಗ್ಗೆ ಆಸಕ್ತಿ ಹೊಂದಿದ್ದೀರಿ ಎಂಬುದನ್ನು ನೀವು ಕಂಡುಕೊಳ್ಳುವಿರಿ. ಅದನ್ನು ಅನುಸರಿಸಿ.

❖ ನೀವು ಏನೇ ಮಾಡಿದರೂ, ಅದನ್ನು ಉತ್ಸಾಹದಿಂದ ಮಾಡಿ. ನೀವು ಏನನ್ನು ಹುಡುಕುತ್ತಿದ್ದೀರಿ ಎಂಬುದರ ಬಗ್ಗೆ ಗೊಂದಲದಲ್ಲಿದ್ದರೂ, ಯಾವುದೇ ಕೆಲಸವನ್ನೂ ಉತ್ಸಾಹದಿಂದ ಮಾಡಿ. ನೀವು ಹಾಗೆ ಮಾಡಿದಾಗ ಮಾತ್ರ, ನಿಮ್ಮನ್ನು ಯಾವುದು ಸೆಳೆಯುತ್ತದೆ ಎಂಬುದು ನಿಮಗೆ ಅರ್ಥವಾಗುತ್ತದೆ.

❖ ನೀವು ಯಾವುದಾದರೂ ವಿಷಯದಲ್ಲಿ ನಿಪುಣರಲ್ಲ ಎಂದು ಭಾವಿಸಿದರೆ, ನಂತರ ಅದರೊಂದಿಗೆ ಹೋರಾಡುವುದನ್ನು ಮುಂದುವರಿಸಬೇಡಿ. ತಕ್ಷಣ ಅದರಿಂದ ಹೊರ ಬನ್ನಿರಿ. ಆ ಮೂಲಕ ನೀವು ನಿಮ್ಮ ಸಮಯ ಮತ್ತು ಹಣವನ್ನು ಉಳಿಸುತ್ತೀರಿ. ನೀವು ಇಷ್ಟಪಡುವ ಬೇರೇನನ್ನಾದರೂ ತ್ವರಿತವಾಗಿ ಕಂಡುಕೊಳ್ಳಲು ನಿಮಗೆ ಸಾಧ್ಯವಾಗುತ್ತದೆ.

❖ ನೀವು ಮಾಡುತ್ತಿರುವ ಕೆಲಸವನ್ನು ಸಂಪೂರ್ಣವಾಗಿ ಕಲಿಯಿರಿ. ನೀವು ಏನನ್ನಾದರೂ ಕಲಿತಾಗ, ನಿಮಗೆ ತೃಪ್ತಿ ಸಿಗುತ್ತದೆ. ನೀವು ಅದನ್ನು ಮಾಡಿದಾಗ ನಿಮಗೆ ಸಂತೋಷವಾಗುತ್ತದೆ. ನೀವು ಸಂತೋಷ ಮತ್ತು ತೃಪ್ತಿಯಿಂದ ಕೆಲಸ ಮಾಡಿದರೆ, ಅದು ನಿಮ್ಮ ನೆಚ್ಚಿನದಾಗುತ್ತದೆ. ಅದು ಅಂತಿಮವಾಗಿ ನಿಮಗೆ ಆಸಕ್ತಿಯಿರುವ ವಿಷಯವಾಗುವ ಸಾಧ್ಯತೆಯೂ ಇರುತ್ತದೆ.

❖ "ಈ ವಯಸ್ಸಿನಲ್ಲಿ ಹೋಗಿ ನಾನು ಕಲಿಯಬೇಕೇ?" ಅಥವಾ "ನಾನು ಈಗ ಹೋಗಿ ಇದನ್ನು ನಾನು ಹೊಸದಾಗಿ ಆರಂಭಿಸುವುದೇ?" ಎಂದು ಎಂದಿಗೂ ಹಿಂಜರಿಯಬೇಡಿ. ಹೊಸ ಕೆಲಸ ಅಥವಾ ವೃತ್ತಿಜೀವನವನ್ನು ಪ್ರಾರಂಭಿಸಲು ವಯಸ್ಸು ಅಥವಾ ಇತರ ಯಾವುದೇ ಅಡೆತಡೆಗಳಿಲ್ಲ. ನೀವು ಯಾವುದರ ಬಗ್ಗೆ ಆಸಕ್ತಿ ಹೊಂದಿದ್ದೀರಿ ಎಂಬುದನ್ನು ಕಂಡುಕೊಳ್ಳುವುದು ಮುಖ್ಯ. ಹಿಂಜರಿಕೆಯಿಲ್ಲದೆ ನೀವು ಬಯಸಿದಾಗ ಅದನ್ನು ಮಾಡಿ.

ಒಬ್ಬ ಹುಡುಗ ಕ್ರಿಕೆಟ್ ತರಬೇತಿ ಕೇಂದ್ರಕ್ಕೆ ಹೋದ. ಅವನು ವೇಗದ ಬೌಲರ್ ಆಗಲು ಬಯಸಿದ್ದ. ಅಲ್ಲಿ ಅವನು ಕೆಲವು ತಿಂಗಳು ತರಬೇತಿ ಪಡೆದು ಉತ್ಸಾಹದಿಂದ ತನ್ನ ಕೌಶಲ್ಯಗಳನ್ನು ಬೆಳೆಸಿಕೊಂಡ. ತರಬೇತಿಯ ಸಮಯದಲ್ಲಿ, ಅವನು ಕೆಲವೊಮ್ಮೆ ಬ್ಯಾಟಿಂಗ್ ಮಾಡಬೇಕಾಗಿ ಬರುತ್ತಿತ್ತು. ಹಾಗೆ ಅವನು ಬ್ಯಾಟಿಂಗ್ ಮಾಡುವಾಗ, ಅವನ ಕೋಚ್ ಅವನನ್ನು ಗಮನಿಸಿದರು. ಅವನ ಶೈಲಿ ಅವರನ್ನು ಆಶ್ಚರ್ಯಗೊಳಿಸಿತು. ಅವರು ಹೇಳಿದರು: "ನೀನು ಬೌಲಿಂಗ್‌ನಲ್ಲಿ ನಿಪುಣನಲ್ಲ. ಆದರೆ ನೀನು ಬ್ಯಾಟಿಂಗ್ ಅನ್ನು ಇನ್ನೂ ಚೆನ್ನಾಗಿ ಅಭ್ಯಾಸ ಮಾಡಬೇಕು." ಹುಡುಗ ನಿರಾಶೆಗೊಂಡರೂ, ಅವರು ಹೇಳಿದಂತೆಯೇ ನಡೆದು–ಕೊಂಡ. ನಂತರ ಅದು ತನಗೆ ಒಳ್ಳೆಯದು ಎಂದು ಅವನು ಅರಿತುಕೊಂಡ. 'ನನಗೆ ಕ್ರಿಕೆಟ್‌ನಲ್ಲಿ ಆಸಕ್ತಿ ಇದೆ, ಕೇವಲ ಬೌಲಿಂಗ್‌ನಲ್ಲಿ ಮಾತ್ರ ಅಲ್ಲ' ಎಂದು ಅವನು ಅರ್ಥ ಮಾಡಿಕೊಂಡ!

ಮುಂದೆ ಆ ಹುಡುಗ ಬ್ಯಾಟಿಂಗ್‌ನಲ್ಲಿ ಬೇರೆ ಯಾರೂ ತಲುಪಲು ಸಾಧ್ಯವಾಗದ ಸಾಧನೆಗಳನ್ನು ಮಾಡಿ ತೋರಿಸಿದ. ಅವನನ್ನು 'ಕ್ರಿಕೆಟ್ ದೇವರು' ಎಂದು ಕರೆಯಲಾಯಿತು. ಹೌದು, ಆ ಹುಡುಗ ಬೇರಾರೂ ಅಲ್ಲ, ಸಚಿನ್ ತೆಂಡೂಲ್ಕರ್. ಅವನ ಉತ್ಸಾಹವೇ ಅವನನ್ನು 'ಭಾರತ ರತ್ನ' ಬಿರುದು ಪಡೆಯುವ ಎತ್ತರಕ್ಕೆ ಕೊಂಡೊಯ್ದಿತು. ಉತ್ಸಾಹದೊಂದಿಗೆ ನಿಮ್ಮ ಎತ್ತರವನ್ನು ತಲುಪಿರಿ! ●

ಆಸಕ್ತಿ ಎಂದರೆ ಇದೇ!

ಕೆಲಸ, ವೃತ್ತಿ, ವ್ಯವಹಾರ ಅಥವಾ ಅಧ್ಯಯನ ಯಾವುದೇ ಆಗಿರಲಿ, ನೀವು ಉತ್ಸಾಹದಿಂದ ಮಾಡಿದ್ದೀರಿ ಎಂದರೆ, ಅದರ ಅರ್ಥವೇನು? ನೀವು ಅದನ್ನು ಮಾಡಲು ಇಷ್ಟಪಡುತ್ತೀರಿ. ಅದರ ಬಗ್ಗೆ ಯೋಚಿಸುವುದರಿಂದ ನಿಮಗೆ ಸಂತೋಷವಾಗುತ್ತದೆ, ನಿಮ್ಮ ಕಣ್ಣುಗಳು ಹೊಳೆಯುತ್ತವೆ ಮತ್ತು ನೀವು ಅದರ ಬಗ್ಗೆ ಅನಂತವಾಗಿ ಮಾತನಾಡುತ್ತೀರಿ. ನೀವು ಎಷ್ಟು ಸಮಯ ಬೇಕಾದರೂ ಅದನ್ನು ಮಾಡಲು ಸಿದ್ಧರಿದ್ದೀರಿ. ನೀವು ಎಂದಿಗೂ ಅದರಿಂದ ಬೇಸರಗೊಳ್ಳುವುದಿಲ್ಲ.

ನೀವು ಬೆಳಿಗ್ಗೆ ಕೆಲಸಕ್ಕೆ ಬಂದಂತೆಯೇ ಅದೇ ಉತ್ಸಾಹದಿಂದ ಮನೆಗೆ ಹಿಂತಿರುಗ-ುತ್ತೀರಿ. ಮರುದಿನ ಬೆಳಿಗ್ಗೆ, ಎದ್ದ ತಕ್ಷಣ, ಕೆಲಸಕ್ಕೆ ಹೋಗುವ ಹಂಬಲವನ್ನು ನೀವು ಅನುಭವಿಸುತ್ತೀರಿ. ಆ ಕೆಲಸದಲ್ಲಿ ನೀವು ಎಷ್ಟೇ ತೊಂದರೆಗಳನ್ನು ಎದುರಿಸಿದರೂ, ನೀವು ಎಂದಿಗೂ ಹಿಂದೆ ಸರಿಯುವುದಿಲ್ಲ. ನೀವು ಮತ್ತೆ ಮತ್ತೆ ಪ್ರಯತ್ನಿಸುತ್ತಲೇ ಇರುತ್ತೀರಿ. ನೀವು ಚೆನ್ನಾಗಿ ಮಾಡಬಹುದಾದ, ನಿಮಗೆ ಸಂತೋಷ ಮತ್ತು ತೃಪ್ತಿಯನ್ನು ನೀಡುವ ಎಲ್ಲದರ ಬಗ್ಗೆಯೂ ನೀವು ಆಸಕ್ತಿ ಹೊಂದಿರುತ್ತೀರಿ.

ಆಸಕ್ತಿಯೇ ಕಾರಣ!

ಕೆಲವರು ತಮ್ಮ ದೇಹವನ್ನು ಉತ್ತಮ ಸ್ಥಿತಿಯಲ್ಲಿಟ್ಟುಕೊಳ್ಳಲು ಜಿಮ್‌ಗೆ ಹೋಗಲು ಆಸಕ್ತಿ ಹೊಂದಿರುತ್ತಾರೆ. ಕೆಲವರು ಬೇರೆ ಬೇರೆ ಕಾರುಗಳನ್ನು ಖರೀದಿಸಿ ಓಡಿಸಲು ಆಸಕ್ತಿ ಹೊಂದಿರುತ್ತಾರೆ. ಕೆಲವರು ಸೈನ್ಯಕ್ಕೆ ಸೇರಿ ದೇಶಕ್ಕಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಲು ಆಸಕ್ತಿ ಹೊಂದಿರುತ್ತಾರೆ. ಪ್ರತಿಯೊಬ್ಬರ ಆಸಕ್ತಿಯೂ ವಿಭಿನ್ನವಾಗಿರುತ್ತದೆ. ಆಸಕ್ತಿಯು ಒಬ್ಬ ವ್ಯಕ್ತಿಗೆ ಸ್ವಾಭಾವಿಕವಾಗಿ ಬರುತ್ತದೆ. ನೀವು ಒಂದು ಕೆಲಸವನ್ನು ಕಲಿಯಬಹುದು. ಆದರೆ ಅದರಲ್ಲಿ ಆಸಕ್ತಿಯನ್ನು ಹೊಂದುವುದನ್ನು ನೀವು ಕಲಿಯಲು ಸಾಧ್ಯವಿಲ್ಲ. ಅದು ನಿಮ್ಮೊಳಗಿನಿಂದ ಮೂಡಿ ಬರಬೇಕು. ಯಾರೋ ಕನಸಿನಲ್ಲಿ ನಿಮ್ಮ ಬಳಿಗೆ ಬಂದು, 'ಇದು ನಿಮ್ಮ ಆಸಕ್ತಿ' ಎಂದು ಹೇಳುವುದರಿಂದ ಅದರಲ್ಲಿ ನಿಮಗೆ ಆಸಕ್ತಿ ಬಂದು ಬಿಡುವುದಿಲ್ಲ.

ಸಮಯ ಎಷ್ಟೇ ಕಡಿಮೆಯಿದ್ದರೂ, ಒಂದು ಕೆಲಸವನ್ನು ಮಾಡಲು ನಾವು ಸಮಯವನ್ನು ಹೊಂದಾಣಿಕೆ ಮಾಡಿಕೊಳ್ಳಬಹುದು ಅಂದರೆ ನಮಗೆ ಅದರಲ್ಲಿ ಆಸಕ್ತಿ ಇದೆ ಎಂದರ್ಥ ಮತ್ತು 'ನಾವು ಅದನ್ನು ನಂತರ ಮಾಡಬಹುದು' ಎಂದು ಹೇಳಿ ಅದನ್ನು ಮುಂದೂಡುವುದಿಲ್ಲವೇ, ಅದನ್ನು ಮಾಡಲು ನಾವು ಎಲ್ಲಾ ರೀತಿಯ ಸಮಸ್ಯೆಗಳನ್ನೂ ಎದುರಿಸಲು ಸಿದ್ಧರಿದ್ದೇವೆಯೇ, 'ನಾವು ಇದನ್ನು ಮಾಡಬೇಕೇ ಅಥವಾ ಬೇಡವೇ' ಎಂದು ಯೋಚಿಸಿ ಹಿಂಜರಿಯುವುದಿಲ್ಲವೇ? ಹಾಗಿದ್ದರೆ ಅದೇ ನಮಗೆ ಆಸಕ್ತಿಯಿರುವ ಕೆಲಸ!

ಅಲಾರಾಂ ಇಲ್ಲದೆಯೇ...

ಉತ್ಸಾಹದಿಂದ ಏನನ್ನಾದರೂ ಮಾಡುವಾಗ, ಬೆಳಿಗ್ಗೆ ಅಲಾರಾಂ ಇಲ್ಲದೆಯೇ ಎಚ್ಚರಗೊಳ್ಳುತ್ತೀರಿ. ನಿಮ್ಮ ಗುರಿಗಳನ್ನು ಮತ್ತು ನೀವು ಏನು ಮಾಡಬೇಕೆಂದು ನೀವು ಎಲ್ಲಿಯೂ ಬರೆದಿಡಬೇಕಾಗಿಲ್ಲ. ಅದು ತಾನಾಗಿಯೇ ನಿಮಗೆ ನೆನಪಾಗುತ್ತಿರುತ್ತದೆ. ಕ್ಷುಲ್ಲಕ ಹವ್ಯಾಸಗಳಲ್ಲಿ ನಿಮ್ಮ ಸಮಯವನ್ನು ವ್ಯರ್ಥ ಮಾಡಿದರೆ, ನಿಮ್ಮನ್ನು ನೀವು ತಪ್ಪಿತಸ್ಥರೆಂದು ಭಾವಿಸುತ್ತೀರಿ. ನೀವು ಕೆಲಸಗಳನ್ನು ಪರಿಣಾಮಕಾರಿಯಾಗಿ ಮತ್ತು ತ್ವರಿತವಾಗಿ ಮಾಡುತ್ತೀರಿ. ನಿಮ್ಮ ಕೆಲಸಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನೂ ನಿಮ್ಮ ಬೆರಳ ತುದಿಯಲ್ಲಿ ಇಟ್ಟುಕೊಂಡಿರುತ್ತೀರಿ.

ನಿಮ್ಮನ್ನು ಬದಲಾಯಿಸುತ್ತದೆ!

ನಿಮ್ಮ ಜೀವನವು ನೀರಸವಾಗಿದ್ದರೂ ಸಹ ಅದನ್ನು ಆಸಕ್ತಿದಾಯಕವಾಗಿಸುವುದು ನಿಮ್ಮ ಉತ್ಸಾಹ! ನಕಾರಾತ್ಮಕ ವಾತಾವರಣದಲ್ಲಿಯೂ ಸಹ ನಿಮ್ಮೊಳಗೆ ಸಕಾರಾತ್ಮಕ ಆಲೋಚನೆಗಳನ್ನು ಸೃಷ್ಟಿಸುವುದು ನಿಮ್ಮ ಉತ್ಸಾಹ. ನಿಮಗೆ ಕೆಲಸ ಮಾಡಲು ಇಷ್ಟವಿಲ್ಲದಿದ್ದರೂ ಸಹ ನಿಮ್ಮನ್ನು ಕಷ್ಟಪಟ್ಟು ಕೆಲಸ ಮಾಡುವಂತೆ ಮಾಡುವುದು ನಿಮ್ಮ ಉತ್ಸಾಹ. ನಿಮ್ಮ ಆಶಯ ಪಟ್ಟಿ, ಹವ್ಯಾಸಗಳು ಮತ್ತು ಎಲ್ಲವನ್ನೂ ತಲೆಕೆಳಗಾಗಿ ಮಾಡುವುದು ನಿಮ್ಮ ಉತ್ಸಾಹ. ಅದು ನಿಮ್ಮನ್ನು ಸಂಪೂರ್ಣವಾಗಿ ಬದಲಾಯಿಸುತ್ತದೆ.

ಅದು ಒಂದೇ ಅಲ್ಲ!

"ತುಂಬಾ ಜನರಿಗೆ ಉತ್ಸಾಹ ಎಂದರೇನು ಎಂಬುದು ಸಂಪೂರ್ಣವಾಗಿ ಅರ್ಥವಾಗುವುದಿಲ್ಲ" ಎಂದು ಲೇಖಕ ಕೆವಿನ್ ಹಾಲ್ ಹೇಳುತ್ತಾರೆ. ನಾವು ಉತ್ಸಾಹ ಎಂದರೆ ಅತೀವ ದಾಹದಿಂದ ಏನನ್ನಾದರೂ ಮಾಡುವುದು ಮತ್ತು ಅದನ್ನು ಪೂರ್ಣವಾಗಿ ಪ್ರೀತಿಸುವುದು ಎಂದು ಭಾವಿಸುತ್ತೇವೆ. ಆದರೆ ಉತ್ಸಾಹವು ಅದಕ್ಕಿಂತ ಹೆಚ್ಚಿನದು. ನೀವು ಇಷ್ಟಪಡುವುದನ್ನು ಮಾಡಲು ನೀವು ಯಾವುದೇ ಕಷ್ಟವನ್ನು ಸಹಿಸಿಕೊಳ್ಳಲು ಸಿದ್ಧರಿದ್ದೀರಾ? ಹಾಗಿದ್ದಲ್ಲಿ, ನೀವು 100 ಪ್ರತಿಶತ ಉತ್ಸಾಹಭರಿತರು ಎಂದು ಅರ್ಥ.

ನಿಮಗೆ ಅರುಣಿಮಾ ಸಿನ್ಹಾ ತಿಳಿದಿರಬಹುದು. ವಾಲಿಬಾಲ್ ಆಟಗಾರ್ತಿ. ತನ್ನ 22ನೇ ವಯಸ್ಸಿನಲ್ಲಿ, ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ ದರೋಡೆಕೋರರ ದಾಳಿಗೆ ಒಳಗಾದ ಅವರು ರೈಲಿನಿಂದ ಹೊರಗೆ ಎಸೆಯಲ್ಪಟ್ಟರು. ಆ ಘಟನೆಯಲ್ಲಿ, ಅವರು ತಮ್ಮ ಎರಡೂ ಕಾಲುಗಳನ್ನು ಕಳೆದುಕೊಂಡರು. ಆದರೆ ನಂತರ ಅವರು, ಕೃತಕ ಕಾಲುಗಳೊಂದಿಗೆ ಮೌಂಟ್ ಎವರೆಸ್ಟ್ ಶಿಖರವನ್ನು ತಲುಪಿದರು. ಉತ್ತಮ ಕಾಲುಗಳನ್ನು ಹೊಂದಿರುವವರಿಗೂ ಸಹ ಎವರೆಸ್ಟ್ ಶಿಖರವನ್ನು ತಲುಪುವುದು ಕಷ್ಟಕರವಾದ ಕೆಲಸ. ಆದರೆ ಅರುಣಿಮಾ ಯಾವುದೇ ಕಷ್ಟವನ್ನು ಲೆಕ್ಕಿಸದೆ ಅದನ್ನು ಸಾಧಿಸಿದರು. ನಂತರ ಅವರು ಇತರ ಖಂಡಗಳ ಮೂರು ಅತ್ಯುನ್ನತ ಶಿಖರಗಳನ್ನು ಏರಿದರು. ಪ್ರಸ್ತುತ, ಅವರು ವಿಕಲಚೇತನ ಮಕ್ಕಳಲ್ಲಿ ಕ್ರೀಡೆಗಳ ಬಗೆಗೆ ಪ್ರೀತಿಯನ್ನು ತುಂಬುವ ಅಕಾಡೆಮಿಯನ್ನು ನಡೆಸುತ್ತಿದ್ದಾರೆ.

ಕಷ್ಟಗಳ ಹೊರತಾಗಿಯೂ ನೀವು ಮಾಡುವ ಕೆಲಸವು ನಿಮಗೆ ಸಂತೋಷವನ್ನು ತರುತ್ತದೆಯೇ? ಹಾಗಿದ್ದರೆ ನಿಮ್ಮ ಉತ್ಸಾಹವು ನಿಮ್ಮನ್ನು ವಿಜಯಶಾಲಿಯನ್ನಾಗಿ ಮಾಡುತ್ತದೆ.

ಮತ್ತೆ ಮತ್ತೆ ಅದೇ ಕೆಲಸ!

ನಿಮ್ಮ ಮನಸ್ಥಿತಿ ನಿಮ್ಮ ಜೀವನವನ್ನು ಹೇಗೆ ಬದಲಾಯಿಸುತ್ತದೆ? 'ದಿ ಎಕ್ಸ್‌ಪೆಕ್ಟೇಶನ್ ಎಫೆಕ್ಟ್: ಹೌ ಯುವರ್ ಮೈಂಡ್‌ಸೆಟ್ ಕ್ಯಾನ್ ಟ್ರಾನ್ಸ್‌ಫಾರ್ಮ್ ಯುವರ್ ಲೈಫ್' ಎನ್ನುವ ಪುಸ್ತಕದ ಲೇಖಕ ಡೇವಿಡ್ ರಾಬ್ಸನ್ ಇದನ್ನು ವಿವರಿಸುತ್ತಾರೆ. ಅವರು ಆರನೇ ವಯಸ್ಸಿನಲ್ಲಿ ಬರಹಗಾರರಾಗಬೇಕೆಂದು ಕನಸು ಕಂಡಿದ್ದರು. ಮತ್ತು ಆದ್ದರಿಂದ ಅವರು ಬರಹಗಾರರಾದರು ಮತ್ತು ಪ್ರಸಿದ್ಧರಾದರು. ಅವರು ಅತ್ಯಂತ ಇಷ್ಟಪಡುವ ಕೆಲಸವನ್ನು ಮಾಡಿದರು. ಆದಾಗ್ಯೂ, ಅವರ ಜೀವನದಲ್ಲಿ ಅವರು ಆ ಕೆಲಸದಲ್ಲಿ ಆಸಕ್ತಿ ಕಳೆದುಕೊಂಡ ಹಲವು ಅವಧಿಗಳು ಇದ್ದವು.

"ನೀವು 25ನೇ ವಯಸ್ಸಿನಲ್ಲಿ ಕೆಲಸ ಅಥವಾ ವೃತ್ತಿಯನ್ನು ಮಾಡಲು ಪ್ರಾರಂಭಿಸುತ್ತೀರಿ. 60 ವರ್ಷ ವಯಸ್ಸಿನವರೆಗೆ, ಕೆಲವರು ತಮ್ಮ ಜೀವನದುದ್ದಕ್ಕೂ ಅದೇ ಕೆಲಸವನ್ನು ಮಾಡಬೇಕಾಗುತ್ತದೆ. ಅದು ನೆಚ್ಚಿನ ಕೆಲಸವಾಗಿದ್ದರೂ ಸಹ, ಹಲವು ವರ್ಷಗಳ ಕಾಲ ಅದೇ ಕೆಲಸವನ್ನು ಮತ್ತೆ ಮತ್ತೆ ಮಾಡಲು ಬೇಸರವಾಗುತ್ತದೆ. ಹೃದಯ ಚೆನ್ನಾಗಿ ಕೆಲಸ ಮಾಡುತ್ತಿದೆಯೇ ಎಂದು ನೋಡಲು ಅವರು ಟ್ರೆಡ್‌ಮಿಲ್ ಪರೀಕ್ಷೆಯನ್ನು ಮಾಡುತ್ತಾರೆ. ನೀವು ಆ ಯಂತ್ರವನ್ನು ಏರಿ ಕೆಲವು ನಿಮಿಷಗಳ ಕಾಲ ಓಡಬೇಕು. ಆದರೆ ನಿಮ್ಮ ಜೀವನದುದ್ದಕ್ಕೂ ನೀವು ಅದರ ಮೇಲೆ ಓಡಬಹುದೇ? 'ನಾನು ಅದರಿಂದ ಜಿಗಿದು ಹೋಗಬಹುದೇ?' ಎಂಬ ಆಲೋಚನೆ ಮನಸ್ಸಿಗೆ ಬರುತ್ತದೆ. ಜೀವನದಲ್ಲಿ ನಿಮಗೆ ಆಸಕ್ತಿಯಿರುವ ಏನನ್ನಾದರೂ ನೀವು ಮಾಡಿದಾಗ, ಅದು ನಿಮಗೆ ತರುವ ಉತ್ತಮ ಫಲಿತಾಂಶಗಳ ಬಗ್ಗೆ ಯೋಚಿಸಿ. ಆ ಮನಸ್ಥಿತಿ ಮಾತ್ರ ನಿಮ್ಮನ್ನು ಉತ್ಸಾಹದಿಂದ ಇರುವಂತೆ ಪ್ರೇರೇಪಿಸುತ್ತದೆ" ಎಂದು ಅವರು ಹೇಳುತ್ತಾರೆ.

ನಿಮ್ಮ ಆಸಕ್ತಿಯನ್ನು ಅನುಸರಿಸಿ!

ಒಬ್ಬ ರಾಜ ತನ್ನ ಮಂತ್ರಿಗಳು ಮತ್ತು ಸೇನಾಪತಿಗಳೊಂದಿಗೆ ಕಾಡಿಗೆ ಬೇಟೆಯಾಡಲು ಹೋದ. ಆ ಕಾಡು ಹುಲಿಗಳು, ಚಿರತೆಗಳು ಮತ್ತು ಕತ್ತೆಕಿರುಬಗಳಂತಹ ಅಪಾಯಕಾರಿ ಪ್ರಾಣಿಗಳಿಂದ ತುಂಬಿತ್ತು. ಕುದುರೆ–ಯ ಮೇಲೆ ಕಿರಿದಾದ ಮಣ್ಣಿನ ಹಾದಿಯಲ್ಲಿ ಸವಾರಿ ಮಾಡುವಾಗ, ರಾಜ ಒಂದು ಅದ್ಭುತ ದೃಶ್ಯವನ್ನು ಕಂಡ. ಕಾಡಿನಲ್ಲಿರುವ ಒಂದು ಮರದಲ್ಲಿ ಬಾಣವೊಂದು ಸಿಲುಕಿಕೊಂಡಿತ್ತು. ಆ ಬಾಣವು ಮರದ ಮೇಲೆ ಚಿತ್ರಿಸಿದ್ದ ಒಂದು ವೃತ್ತದ ಮಧ್ಯಭಾಗದಲ್ಲಿ ಸರಿಯಾಗಿ ಚುಚ್ಚಿ–ಕೊಂಡಿತ್ತು.

ಅದನ್ನು ನೋಡುತ್ತಾ ಅವನು ಮುಂದೆ ಸಾಗುತ್ತಿದ್ದಂತೆ, ಹತ್ತಿರದ ಇನ್ನೊಂದು ದೊಡ್ಡ ಮರದಲ್ಲೂ ಅದೇ ಬಾಣ ರೀತಿ ಬಾಣ ಚುಚ್ಚಿಕೊಂಡಿತ್ತು. ಅದು ನಿಖರವಾಗಿ ಮಧ್ಯದಲ್ಲಿರುವ ಗುರಿಯೊಳಗೇ ಸಿಲುಕಿ–ಕೊಂಡಿತ್ತು. ಅದನ್ನೂ ನೋಡಿ ಅವನು ಹಾಗೇ ಮುಂದೆ ಸಾಗಿದ. ಅಲ್ಲಿದ್ದ ಅನೇಕ ಮರಗಳಲ್ಲಿ ಬಾಣವು ಹಾಗೆ ಚುಚ್ಚಿಕೊಂಡಿರುವುದನ್ನು ನೋಡಿ ಅವನು ಆಶ್ಚರ್ಯಚಕಿತನಾದ. "ಈ ಕಾಡಿನಲ್ಲಿ ನಿಖರವಾಗಿ ಬಾಣಗಳನ್ನು ಹೊಡೆಯಬಲ್ಲ ಒಬ್ಬ ಯೋಧನಿದ್ದಾನೆ. ನಾವು ಅವನನ್ನು ಹುಡುಕಿ ನಮ್ಮ ಸೈನ್ಯದಲ್ಲಿ ಅವನಿಗೆ ಒಂದು ಪ್ರಮುಖ ಸ್ಥಾನವನ್ನು ನೀಡಬೇಕು" ಎಂದು ಅವನು ಸೇನಾಧಿಕಾರಿಗೆ ಹೇಳಿದ. ಸೇನಾಧಿಕಾರಿಯೂ ತಲೆಯಾಡಿಸಿದ.

ಅವನನ್ನು ಹೇಗೆ ಕಂಡು ಹಿಡಿಯುವುದು? ಸ್ವಲ್ಪ ಮುಂದೆ ಹೋದ ನಂತರ, ಅವರ ಪ್ರಶ್ನೆಗೆ ತಾನಾಗಿಯೇ ಉತ್ತರ ಕಾಣಿಸಿತು. ಅಲ್ಲಿ 15 ವರ್ಷದ ಒಬ್ಬ ಹುಡುಗ ಕೈಯಲ್ಲಿ ಬಿಲ್ಲು ಬಾಣಗಳನ್ನು ಹಿಡಿದು ನಿಂತಿದ್ದ. ಅವನ ಕೈಯಲ್ಲಿದ್ದ ಅದೇ ಬಾಣವು ಅಲ್ಲಿದ್ದ ಮರಗಳಲ್ಲಿ ಚುಚ್ಚಿ–ಕೊಂಡಿದ್ದುದು. ಅವನ ಗಮನ ಸಂಪೂರ್ಣವಾಗಿ ಮರದ ಮೇಲೆ ಕೇಂದ್ರೀಕೃತವಾಗಿತ್ತು! 'ಈ ಚಿಕ್ಕ ಹುಡುಗ ಹೀಗೆ ಗುರಿಯಿಟ್ಟು ಬಾಣ ಬಿಡುತ್ತಾನೆಯೇ?' ರಾಜನಿಗೆ ನಂಬಲಾಗಲಿಲ್ಲ. ಅವನು ಆಶ್ಚರ್ಯದಿಂದ ಆ ಹುಡುಗನ ಬಳಿಗೆ ಬಂದು, "ಈ ತಂತ್ರವನ್ನು ನೀನು ಹೇಗೆ ಕಲಿತೆ?" ಎಂದು ಕೇಳಿದ. 'ಇದರಲ್ಲಿ ಯಾವುದೇ ತಂತ್ರವಿಲ್ಲ. ನಾನು ಮೊದಲು ಬಾಣವನ್ನು ಹೊಡೆಯುತ್ತೇನೆ ಮತ್ತು ನಂತರ ಆ ಸ್ಥಳದಲ್ಲಿ ವೃತ್ತವನ್ನು ಎಳೆಯುತ್ತೇನೆ" ಎಂದು ಆ ಹುಡುಗ ಹೇಳಿದ!

ತಮ್ಮ ಗುರಿ ಮತ್ತು ಆಸಕ್ತಿ ಏನೆಂದು ಹುಡುಕುತ್ತಿರುವ ಅನೇಕ ಜನರು ಹೀಗೆಯೇ ಇದ್ದಾರೆ. ಅವರು ಏನನ್ನೂ ಸಾಧಿಸದೆ, ಸರಿಯಾದ ಪ್ರಯತ್ನವನ್ನೂ ಮಾಡದೆ ತಮಗನ್ನಿಸಿದ ಯಾವುದೋ ಒಂದು ಮಾರ್ಗವನ್ನು ಅನುಸರಿಸುತ್ತಾರೆ. ನಮಗೆ ಆಸಕ್ತಿ ಇರುವುದು ಇದೇ ಎಂದು ಅವರು ನಿರ್ಧರಿಸುತ್ತಾರೆ. ಅವರು, ಮೊದಲು ಬಾಣವನ್ನು ಹೊಡೆದು ನಂತರ ಅಲ್ಲಿ ವೃತ್ತವನ್ನು ಎಳೆಯುವ ಹುಡುಗನಂತೆ, ಕೊನೆಯವರೆಗೂ ತಮ್ಮ ಆಸಕ್ತಿಯನ್ನು ಕಂಡುಕೊಳ್ಳಲು ಮತ್ತು ಮುಂದುವರೆಯಲು ಸಾಧ್ಯವಾಗುವುದಿಲ್ಲ.

ನಿಮ್ಮೊಳಗೆ ಉರಿಯುತ್ತಿರುವ ಕುತೂಹಲದ ಬೆಂಕಿಯನ್ನು ನೀವು ಅನುಭವಿಸಬೇಕು ಮತ್ತು ಅದು ಬೆಳಗುವ ಮಾರ್ಗವನ್ನು ಅನುಸರಿಸಬೇಕು. ಅದು ನಿಮ್ಮ ಗುರಿಯನ್ನು ಸಾಧಿಸಲು ಮತ್ತು ಯಶಸ್ವಿಯಾಗಲು ಇರುವ ಮಾರ್ಗವಾಗಿದೆ. ಆಗ ಮಾತ್ರ 'ನಾವು ಇದಕ್ಕಾಗಿಯೇ ಸೃಷ್ಟಿಸಲ್ಪಟ್ಟಿದ್ದೇವೆ. ಇದೇ ನಮ್ಮ ಜೀವನದ ಅರ್ಥ' ಎಂದು ನೀವು ಅರಿತುಕೊಳ್ಳುವಿರಿ.

ನಿಮ್ಮ ಉತ್ಸಾಹವನ್ನು ಗುರುತಿಸಿ ಅದನ್ನು ಅನುಸರಿಸುವಾಗ, ಈ ಕೆಳಗಿನ ವಿಷಯಗಳನ್ನು ಮರೆಯಬೇಡಿ:

◆ ನಿಮ್ಮ ಆಸಕ್ತಿ ಸಮಾಜಕ್ಕೆ ಅನುಗುಣವಾಗಿರಬೇಕು. ಅದು ಸರ್ಕಾರದ ಕಾನೂನುಗಳ ವ್ಯಾಪ್ತಿಯಲ್ಲಿರಬೇಕು. ಅದು ಇತರರಿಗೆ ತೊಂದರೆಯಾಗಬಾರದು. ಈಗ ಬಹಳಷ್ಟು ಹದಿಹರೆಯದ ಹುಡುಗರು ಬೈಕ್ ರೇಸಿಂಗ್ ಬಗ್ಗೆ ಹುಚ್ಚರಾಗಿದ್ದಾರೆ. ಅದರಲ್ಲೂ ರಾಷ್ಟ್ರೀಯ ಹೆದ್ದಾರಿಯಲ್ಲಿ ರೇಸಿಂಗ್ ಹೋಗುವುದು ಅವರಿಗೆ ಫ್ಯಾನ್ಸಿ

ಆಗಿ ಬಿಟ್ಟಿದೆ. ಇತ್ತೀಚೆಗೆ ಹೀಗೆ ಅತಿ ವೇಗವಾಗಿ ಬೈಕ್ ಚಲಾಯಿಸಿ ಅಪಘಾತಕ್ಕೀಡಾದ ಯುವಕನ ಬಗ್ಗೆ ನಾವೆಲ್ಲ ಪತ್ರಿಕೆಗಳಲ್ಲಿ ಓದಿದ್ದೇವೆ. ಹೆದ್ದಾರಿಗಳಿರುವುದು ಸಾರ್ವಜನಿಕ ಸಾರಿಗೆಗಾಗಿ. ಬೈಕ್ ರೇಸಿಂಗ್‌ನಲ್ಲಿ ಆಸಕ್ತಿ ಇರುವ ಕಾರಣದಿಂದ ಆ ಹಾದಿಯಲ್ಲಿ ಅಕ್ರಮವಾಗಿ ಹೆಚ್ಚಿನ ವೇಗದಲ್ಲಿ ವಾಹನ ಚಲಾಯಿಸುವುದು ತಪ್ಪು. ಅದೇ ರೀತಿ ನಿಮಗೆ ಸಂಗೀತದಲ್ಲಿ ಆಸಕ್ತಿ ಇದೆ ಎಂಬ ಕಾರಣಕ್ಕಾಗಿ ನೆರೆಹೊರೆಯವರ ನಿದ್ರೆಗೆ ಭಂಗ ತರುವಂತೆ ಮಧ್ಯರಾತ್ರಿಯಲ್ಲಿ ಸಂಗೀತ ಅಭ್ಯಾಸ ಮಾಡುವುದು ಸಹ ತಪ್ಪು.

◆ ನಿಮ್ಮ ಉತ್ಸಾಹ ಮತ್ತು ಇತರರ ಅಗತ್ಯಗಳು ಸಾಮರಸ್ಯದಿಂದ ಇರಬೇಕು. 'ನಾನು ಅಂತರರಾಷ್ಟ್ರೀಯ ಗುಣಮಟ್ಟದಲ್ಲಿ ಚಿತ್ರ ರಚಿಸುತ್ತೇನೆ' ಎಂದು ನೀವು ಹೆಮ್ಮೆಯಿಂದ ವರ್ಣಚಿತ್ರಗಳನ್ನು ಚಿತ್ರಿಸಿ, ಅವುಗಳನ್ನು ಯಾವುದೋ ಒಂದು ಸಣ್ಣ ಪಟ್ಟಣದಲ್ಲಿ ಮಾರಾಟಕ್ಕೆ ಇರಿಸಿದರೆ ಅವು ಮಾರಾಟವಾಗುವುದಿಲ್ಲ. ಅದೇ ರೀತಿ, ಯಾರೋ ಒಬ್ಬರು, 'ನನಗೆ ಹೋಟೆಲ್ ವ್ಯವಹಾರದಲ್ಲಿ ಆಸಕ್ತಿ ಇದೆ' ಎಂದು ಯಾವುದೋ ಒಂದು ಸಣ್ಣ ಹಳ್ಳಿಯಲ್ಲಿ ದೊಡ್ಡ ಹೋಟೆಲ್ ನಿರ್ಮಿಸಿದರೆ, ನಷ್ಟದಲ್ಲಿ ಮುಳುಗಬೇಕಾಗುತ್ತದೆ. ಅಗತ್ಯವಿರುವಲ್ಲಿ, ನಿಮ್ಮ ಉತ್ಸಾಹವನ್ನು ನೀವು ಕಾರ್ಯಗತಗೊಳಿಸಬೇಕು. ಅಂದರೆ, ನಿಮ್ಮ ಉತ್ಸಾಹವು ಇತರರಿಗೆ ಮೌಲ್ಯಯುತವಾಗಿದೆ ಎಂದು ನೀವು ತೋರಿಸಬೇಕು.

◆ ನೀವು ಉತ್ಸಾಹದಿಂದ ಮಾಡುವ ಕೆಲಸವು ಇತರರಿಗೆ ಪ್ರಯೋಜನವನ್ನು ನೀಡಬೇಕು. ಆಗ ಮಾತ್ರ ನಿಮಗೆ ಇತರರ ಸಹಾಯ ಮತ್ತು ಬೆಂಬಲ ಸಿಗುತ್ತದೆ. ಆ ಬೆಂಬಲ ನಿಮಗೆ ಸಿಕ್ಕಾಗ ಮಾತ್ರ ನೀವು ಯಶಸ್ವಿಯಾಗಬಹುದು. ಉದಾಹರಣೆಗೆ, ಒಂದು ಸಣ್ಣ ಊರಿನಲ್ಲಿರುವ ವ್ಯಕ್ತಿಗಳು ತಮಗೆ ಬೇಕಾದ ಅಗತ್ಯ ವಸ್ತುಗಳನ್ನು ದೂರದಲ್ಲಿರುವ ನಗರಕ್ಕೆ ಹೋಗಿ ಖರೀದಿಸಬೇಕಾಗಿದ್ದರೆ, ಅಂತಹ ವಸ್ತುಗಳನ್ನು ನೀವು ಆ ಊರಿನಲ್ಲೇ ತಂದು ಮಾರಾಟ ಮಾಡಿದರೆ, ಅನೇಕ ಜನರು ಅದನ್ನು ಖರೀದಿಸಲು ನಿಮ್ಮ ಬಳಿಗೆ ಬರುತ್ತಾರೆ. ಅಲ್ಲದೆ ಅದು ಸಮಂಜಸವಾದ ಬೆಲೆಯಲ್ಲಿ ಮತ್ತು ಉತ್ತಮ ಗುಣಮಟ್ಟದಲ್ಲಿ ಲಭ್ಯವಿದ್ದರೆ, ಅನೇಕ ಜನರು ಅದನ್ನು ಖರೀದಿಸುತ್ತಾರೆ. ಆಗ ಆ ಉದ್ಯಮವು ಬೆಳೆಯುತ್ತದೆ.

◆ ನೀವು ಯಾವುದರ ಬಗ್ಗೆ ಆಸಕ್ತಿ ಹೊಂದಿದ್ದರೂ, ಅದನ್ನು ಉಪಯುಕ್ತವಾದದ್ದಾಗಿ ಪರಿವರ್ತಿಸಬೇಕು. ಕಂಪ್ಯೂಟರ್ ಪ್ರೋಗ್ರಾಂಗಳು ಮತ್ತು ಮೊಬೈಲ್ ಅಪ್ಲಿಕೇಶನ್‌ಗಳಲ್ಲಿ ದೋಷಗಳನ್ನು ಹೇಗೆ ಕಂಡು ಹಿಡಿಯುವುದು ಎಂದು ತಿಳಿದಿರುವ ತಜ್ಞರಿದ್ದಾರೆ. ಕೇವಲ ದೋಷವನ್ನು ಹುಡುಕಿ "ನಿಮಗೆ ತಿಳಿದಿದೆ, ಬೇರೆ ಯಾರಿಗೂ ತಿಳಿದಿಲ್ಲದ ದೋಷವನ್ನು ನಾನು ಕಂಡುಕೊಂಡೆ" ಎಂದು ಹೆಮ್ಮೆಪಡುವುದು ಪರಿಣಾಮಕಾರಿಯಲ್ಲ. ಅತ್ಯಂತ ಪರಿಣಾಮಕಾರಿ ಮಾರ್ಗವೆಂದರೆ ಅದನ್ನು ಸಂಬಂಧಿತ ಕಂಪನಿಗೆ ವರದಿ ಮಾಡುವುದು ಮತ್ತು ಅದನ್ನು ಸರಿಪಡಿಸುವುದು. ಅನೇಕ ಕಂಪನಿಗಳು ದೋಷಗಳನ್ನು ಕಂಡು ಹಿಡಿದ, ವರದಿ ಮಾಡಿದ ಮತ್ತು ಸರಿಪಡಿಸುವ ತಜ್ಞರಿಗೆ ಪ್ರತಿಫಲ ನೀಡುತ್ತವೆ. ಉತ್ಸಾಹವನ್ನು ಉಪಯುಕ್ತವಾದದ್ದಾಗಿ ಪರಿವರ್ತಿಸುವುದು ಹೀಗೆ.

◆ ನಾವು ಒಂದು ಚಟುವಟಿಕೆಯಲ್ಲಿ ತೋರಿಸುವ ಉತ್ಸಾಹವು ತಕ್ಷಣವೇ ನಮಗೆ ಹಣ ಅಥವಾ ಖ್ಯಾತಿಯನ್ನು ತಂದು ಕೊಡಬೇಕು ಎಂದು ನಾವು ನಿರೀಕ್ಷಿಸಬಾರದು. ಮ್ಯಾರಥಾನ್ ಓಟವನ್ನು ಪ್ರಾರಂಭಿಸುವ ಪ್ರತಿಯೊಬ್ಬರೂ ಅಂತಿಮ ಗೆರೆಯವರೆಗೆ ಓಡಲು ಸಾಧ್ಯವಿಲ್ಲ. ಉತ್ಸಾಹಭರಿತರು ಮಾತ್ರ ಓಡಿ ಮುಗಿಸುತ್ತಾರೆ. ನಿಮ್ಮಂತಹ ಚಟುವಟಿಕೆಯನ್ನು ಮಾಡಲು ಪ್ರಾರಂಭಿಸುವ ಅನೇಕ ಜನರು ಯಾವುದೋ ಹಂತದಲ್ಲಿ ಸುಸ್ತಾಗಿ ನಡುವೆಯೇ ಬಿಟ್ಟುಬಿಡಬಹುದು. ನಿಮ್ಮ ಉತ್ಸಾಹವೇ ನಿಮ್ಮನ್ನು ಮುಂದುವರಿಸಿಕೊಂಡು ಹೋಗುತ್ತದೆ. ಆರಂಭದಲ್ಲಿ ಕಷ್ಟವಾಗಿದ್ದರೂ, 'ಇಷ್ಟು ಅವಧಿಯೊಳಗೆ ನಾನು ಇದನ್ನು ಸಾಧಿಸಬೇಕು' ಎಂಬ ಗುರಿಯೊಂದಿಗೆ ಮುಂದುವರಿಯಿರಿ.

◆ ಅನೇಕ ಜನರು ವೈಫಲ್ಯ, ಬಿಕ್ಕಟ್ಟು ಅಥವಾ ಸಮಸ್ಯೆಯನ್ನು ಎದುರಿಸಿದಾಗ ಅದನ್ನು ಬಿಟ್ಟು ಬಿಡುತ್ತಾರೆ. ನಮ್ಮ ಉತ್ಸಾಹವು ಹಾಗೆ ಮಾಡದೆ, ಅದರಲ್ಲೇ ಮುಂದುವರಿಯಲು ನಮಗೆ ಶಕ್ತಿಯನ್ನು ನೀಡುತ್ತದೆ. 'ನನ್ನಿಂದ ಇದನ್ನು ಮಾಡಲು ಸಾಧ್ಯವೇ ಇಲ್ಲ' ಅಂದುಕೊಂಡು ಸೋಮಾರಿತನದಿಂದ ಸುಮ್ಮನೆ ಮಲಗಿರುವುದಕ್ಕೂ, 'ಎಷ್ಟೆಲ್ಲ ಪ್ರಯತ್ನಿಸಿಯೂ ನನ್ನಿಂದ ಸಾಧ್ಯವಾಗಲಿಲ್ಲ, ಹಾಗಾದರೆ ನಾನು ಇದನ್ನು ಸಾಧಿಸಲು ಏನು ಮಾಡಬೇಕು' ಎಂಬ ಯೋಚನೆ ಮಾಡುತ್ತಾ ಮಲಗಿರುವುದಕ್ಕೂ ನಡುವೆ ತುಂಬ ವ್ಯತ್ಯಾಸವಿದೆ. ಆಸಕ್ತಿ ಮತ್ತು ಉತ್ಸಾಹಗಳೇ ಒಬ್ಬ ವ್ಯಕ್ತಿಗೆ ಈ ವ್ಯತ್ಯಾಸವನ್ನು ತಂದುಕೊಡುತ್ತವೆ. ●

ದಿನ ದಿನವೂ ಹೇಳಿಕೊಳ್ಳಿ!

ಚಲನಚಿತ್ರಗಳಲ್ಲಿ, ಕೆಲವರು ಪದೇ ಪದೇ "ನಾನು ಹೀಗಾಗುತ್ತೇನೆ" ಅಥವಾ "ನಾನು ಹೀಗೆ ಮಾಡುತ್ತೇನೆ" ಎಂದು ಹೇಳುತ್ತಾರೆ. ಇದು ಹಾಸ್ಯ ದೃಶ್ಯವಲ್ಲ! ಅದನ್ನು ಪುನರಾವರ್ತಿಸುವ ಮೂಲಕ, ಆ ಮಂತ್ರವು ಮನಸ್ಸನ್ನು ಮಾರ್ಗದರ್ಶಿಸುತ್ತದೆ. ನಿರ್ವಹಣಾ ಡಾನ್ ಸುಲ್ಲಿವನ್ ಎನ್ನುವ ಒಬ್ಬ ಮ್ಯಾನೇಜ್‌ಮೆಂಟ್ ಗುರು, 30 ವರ್ಷಗಳಿಂದ ಇದನ್ನೇ ಬೋಧಿಸುತ್ತಿದ್ದಾರೆ. ಪ್ರತಿದಿನ ಬೆಳಿಗ್ಗೆ, ಅವರು ಆ ದಿನ ಸಾಧಿಸಲು ಬಯಸುವ ಗುರಿಯನ್ನು ಬರೆಯಲು ಹೇಳುತ್ತಾರೆ. ಹಾಗೆ ಮಾಡುವುದರಿಂದ ಅವರು ಅದನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಳ್ಳುತ್ತಾರೆ ಮತ್ತು ಆ ದಿನದ ಕೆಲಸವನ್ನು ಸರಿಯಾಗಿ ಮಾಡುತ್ತಾರೆ. "ನಮ್ಮ ದೈಹಿಕ ಸ್ನಾಯುಗಳನ್ನು ಬಲಪಡಿಸಲು ನಾವು ಪ್ರತಿದಿನ ವ್ಯಾಯಾಮ ಮಾಡುತ್ತೇವೆ. ಅದೇ ರೀತಿ, ನಮ್ಮ ಮನಸ್ಸನ್ನು ಬಲಪಡಿಸಲು ನಾವು ಇದನ್ನು ಮಾಡಬೇಕಾಗಿದೆ. ನಾವು ಇದನ್ನು ಪ್ರತಿದಿನ ಮಾಡಿದಾಗ, ನಾವು ಉತ್ಸಾಹಭರಿತರಾಗಿ ಯಾವುದರಲ್ಲಾದರೂ ಯಶಸ್ವಿಯಾಗಬಹುದು" ಎಂದು ಅವರು ಹೇಳುತ್ತಾರೆ.

ಗುರುತು ಹಿಡಿಯುವುದು ಹೇಗೆ?

ನೀವು ಯಾವುದರ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದೀರಿ ಎಂಬುದನ್ನು ಹೇಗೆ ಗುರುತಿಸುತ್ತೀರಿ? ಪ್ರತಿಯೊಂದು ಚಟುವಟಿಕೆಯ ಬಗ್ಗೆ ಸುಮ್ಮನೆ ಕುಳಿತು ಯೋಚಿಸುವುದರಿಂದ ಯಾವುದೇ ತೀರ್ಮಾನಕ್ಕೆ ಬರಲಾಗುವುದಿಲ್ಲ. ಸಾಧ್ಯವಾದಷ್ಟು ವಿಷಯಗಳನ್ನು ಪ್ರಯತ್ನಿಸಿ, ಕೆಲವು ಚಟುವಟಿಕೆಗಳು ಮಾಡಲು ರೋಮಾಂಚನಕಾರಿಯಾಗಿರುತ್ತವೆ, ಕೆಲವು ಮಾಡಲು ಕಷ್ಟವಾಗುತ್ತವೆ, ಕೆಲವು ಮಾಡಲು ಖುಷಿಯಾಗಿರುತ್ತವೆ.

ಕೆಲವು ಚಟುವಟಿಕೆಗಳು ನಿಮ್ಮನ್ನು ದೈಹಿಕವಾಗಿ ಆಯಾಸಗೊಳಿಸುತ್ತವೆ, ಕೆಲವು ನಿಮ್ಮನ್ನು ಮಾನಸಿಕವಾಗಿ ಆಯಾಸಗೊಳಿಸುತ್ತವೆ, ಮತ್ತು ಇನ್ನು ಕೆಲವು ನಿಮ್ಮನ್ನು "ಇದೆಲ್ಲ ಕೆಲಸವೇ?" ಎಂದು ಯೋಚಿಸುವಂತೆ ಮಾಡುತ್ತದೆ. ಇವುಗಳನ್ನೆಲ್ಲ ಮೀರಿ, ನೀವು ಎಷ್ಟೇ ಗಂಟೆಗಳನ್ನು ಕಳೆದರೂ ಹೆಚ್ಚಿನದನ್ನು ಮಾಡಬಹುದು ಎಂಬ ಭಾವನೆಯನ್ನು ನಿಮಗೆ ಏನು ನೀಡಿತು ಎಂಬುದನ್ನು ನೋಡಿ. ನೀವು ಆ ನಿರ್ದಿಷ್ಟ ಚಟುವಟಿಕೆಯನ್ನು ಇತರರಿಗಿಂತ ಉತ್ತಮವಾಗಿ ಮಾಡುತ್ತೀರಿ. ಅದು ನಿಮಗೆ ಆಸಕ್ತಿಯ ವಿಷಯ.

ಎಂದಿಗೂ ಇಲ್ಲ!

ಒಬ್ಬ ವ್ಯಕ್ತಿ ಪ್ರವಾಸಕ್ಕೆ ಹೋಗಲು ಸಿದ್ಧನಾಗುತ್ತಿದ್ದ. ಐದು ದಿನಗಳಿಗೆ ಬೇಕಾಗುವಷ್ಟು ಬಟ್ಟೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾಗ, ಅವನಿಗೆ ಒಂದು ಐಡಿಯಾ ಬಂತು. ವಾರ್ಡ್ರೋಬ್‌ನ ಕೆಳಭಾಗದಲ್ಲಿ ಒಂದು ಶರ್ಟ್ ಇತ್ತು.

ಸರಿಯಾದ ನಿರ್ಧಾರ!

ನಾವು ಜೀವನದಲ್ಲಿ ನಾಲ್ಕು ಹಂತಗಳನ್ನು ದಾಟುತ್ತೇವೆ. ಈ ಎಲ್ಲಾ ಹಂತಗಳಲ್ಲಿ, ಕುತೂಹಲವೇ ನಮ್ಮನ್ನು ಮುಂದೆ ಕರೆದೊಯ್ಯುತ್ತದೆ. ಕೆಲವು ಜನರು ಆರಂಭದಿಂದಲೇ ಸಂತೃಪ್ತಿಯ ಭಾವನೆಯನ್ನು ಅನುಭವಿಸುತ್ತಾರೆ. 'ಸಾಕಷ್ಟು ಎಂಬ ಭಾವನೆಯೇ ಚಿನ್ನವನ್ನು ಮಾಡುತ್ತದೆ.'

- ಅವರು ಆಗಾಗ್ಗೆ 'ಹೆಚ್ಚು ಪ್ರಯತ್ನಿಸಿ' ಎಂಬ ಧ್ಯೇಯವಾಕ್ಯವನ್ನು ಪುನರಾವರ್ತಿಸುತ್ತಾರೆ. ಇದಕ್ಕೆ ಕಾರಣ, ಇದಕ್ಕಿಂತ ಹೆಚ್ಚಿನದನ್ನು ಸಾಧಿಸಲು ಪ್ರಯತ್ನಿಸಿದರೆ, ಅದಕ್ಕಾಗಿ ಅವರು ಹೋರಾಡಬೇಕಾಗುತ್ತದೆ ಎಂಬ ಭಯ. ಆದರೆ ಈ ತೃಪ್ತಿಯ ಸ್ಥಿತಿ ಶೀಘ್ರದಲ್ಲೇ ಆಯಾಸಗೊಳ್ಳುತ್ತದೆ. ಮನಸ್ಸು ಅವರನ್ನು 'ಹೆಚ್ಚು ಪ್ರಯತ್ನಿಸಿ' ಎಂದು ಹೇಳುತ್ತಲೇ ಇರುತ್ತದೆ.
- 'ನಾನು ಜೀವನದಲ್ಲಿ ಏನನ್ನಾದರೂ ಸಾಧಿಸಬೇಕು' ಎಂದು ಹೇಳುವ ಮೂಲಕ ಮುಂದಿನ ಹಂತಕ್ಕೆ ಹೋಗೋಣ. ಕಷ್ಟಪಟ್ಟು ಕೆಲಸ ಮಾಡುವುದರಿಂದ ನಮಗೆ ಸಂತೋಷವಾಗುತ್ತದೆ. ಇತರರಿಂದ ನಮಗೆ ಮೆಚ್ಚುಗೆ ಸಿಗುತ್ತದೆ. ಏನನ್ನಾದರೂ ಸಾಧಿಸಿದ ಭಾವನೆ ಬರುತ್ತದೆ.
- ಇದಾದ ನಂತರ, ಅನೇಕ ಜನರು ತಪ್ಪುಗಳನ್ನು ಮಾಡಲು ಪ್ರಾರಂಭಿಸುತ್ತಾರೆ. ಅವರು ಸಂತೋಷ ಮತ್ತು ಮೆಚ್ಚುಗೆಯನ್ನು ಪಡೆಯಲು ದುರಾಸೆಯಿಂದ ಎಲ್ಲಾ ಕೆಲಸಗಳನ್ನು ಮಾಡಲು ಪ್ರಾರಂಭಿಸುತ್ತಾರೆ. ನಮಗೆ ಇಷ್ಟವಾದ ಮಾತ್ರಕ್ಕೆ ನಾವು ಒಂದೇ ಬಾರಿಗೆ ಐದು ಪ್ಲೇಟ್ ಬಿರಿಯಾನಿ ತಿನ್ನಲು ಸಾಧ್ಯವಿಲ್ಲ, ಸರಿಯೇ? ಅದು ರುಚಿಕರ ಮತ್ತು ನಮ್ಮ ನೆಚ್ಚಿನ ಆಹಾರ. ಆದರೆ ನಮ್ಮ ಹಸಿವು ಕಡಿಮೆಯಾದಾಗ, ನಮ್ಮ ಹೊಟ್ಟೆ ಅದನ್ನು ತಿರಸ್ಕರಿಸುತ್ತದೆ. ಕೆಲಸದ ವಿಷಯದಲ್ಲೂ ಅಷ್ಟೇ. ನಾವು ಎಲ್ಲವನ್ನೂ ಮಾಡಲು ಪ್ರಯತ್ನಿಸಿದರೆ, ನಾವು ಸುಸ್ತಾಗುತ್ತೇವೆ ಮತ್ತು ಏನನ್ನೂ ಮಾಡದೆ ಉಳಿಯುತ್ತೇವೆ.
- ನಾಲ್ಕನೇ ಹಂತವು ಮುಖ್ಯವಾಗಿದೆ. ಎಲ್ಲಾ ಕೆಲಸಗಳನ್ನು ಮಾಡುವುದು ತಪ್ಪು ಎಂದು ನಾವು ಅರಿತುಕೊಳ್ಳುತ್ತೇವೆ ಮತ್ತು ನಮಗೆ ಇಷ್ಟವಾದ ಮುಖ್ಯವಾದದ್ದನ್ನು ಮಾತ್ರ ಮಾಡಲು ಸರಿಯಾದ ನಿರ್ಧಾರ ತೆಗೆದುಕೊಳ್ಳುತ್ತೇವೆ. ಅದು ಉತ್ಸಾಹಭರಿತ ಚಟುವಟಿಕೆಯಾಗಿರುವುದರಿಂದ, ನಾವು ಅದನ್ನು ಚೆನ್ನಾಗಿ ಮಾಡುತ್ತೇವೆ ಮತ್ತು ಯಶಸ್ವಿಯಾಗುತ್ತೇವೆ. ಅದು ನಮ್ಮ ಗುರುತಾಗುತ್ತದೆ ಮತ್ತು ನಮ್ಮನ್ನು ಉನ್ನತೀಕರಿಸುತ್ತದೆ.

ಹಂತಹಂತವಾಗಿ ಯೋಜನೆ ರೂಪಿಸಿ!

ಉದ್ಯೋಗ ಸಂದರ್ಶನಗಳಲ್ಲಿ ಹೆಚ್ಚಾಗಿ ಕೇಳಲಾಗುವ ಪ್ರಶ್ನೆಯೆಂದರೆ... ಐದು ವರ್ಷಗಳಲ್ಲಿ ನೀವು ಎಲ್ಲಿರಬೇಕು ಎಂದು ಬಯಸುತ್ತೀರಿ?' ಯಾರಾದರೂ ತಮ್ಮ ಸ್ವಂತ ಬೆಳವಣಿಗೆ ಮತ್ತು ಕಂಪನಿಯ ಬೆಳವಣಿಗೆಯಲ್ಲಿ ಆಸಕ್ತಿ ಹೊಂದಿದ್ದಾರೆಯೇ ಎಂದು ನಿರ್ಧರಿಸಲು ಬಳಸಲಾಗುವ ಪ್ರಶ್ನೆ ಇದು. ಪ್ರತಿಯೊಬ್ಬರೂ ಅದೇ ಪ್ರಶ್ನೆಯನ್ನು ವಿಭಿನ್ನ ರೀತಿಯಲ್ಲಿ ಕೇಳಿಕೊಳ್ಳಬಹುದು. 'ಜೀವನದಲ್ಲಿ ನಮ್ಮ ನಿರೀಕ್ಷೆಗಳೇನು? ಐದು ವರ್ಷಗಳಲ್ಲಿ ನಾವು ಎಲ್ಲಿರಬೇಕು ಎಂದು ಬಯಸುತ್ತೇವೆ? ಮುಂದಿನ 10 ವರ್ಷಗಳು, 20 ವರ್ಷಗಳು, 30 ವರ್ಷಗಳಲ್ಲಿ ನಾವು ಎಲ್ಲಿರಬೇಕು?'

ನಿಮ್ಮ ಜೀವನದ ಪ್ರತಿಯೊಂದು ಹಂತಕ್ಕೂ ಒಂದು ಗುರಿಯನ್ನು ನಿರ್ಧರಿಸಿ. ನಂತರ, ಅದನ್ನು ಹಂತಗಳಾಗಿ ವಿಭಜಿಸಿ ಮತ್ತು ಅದನ್ನು ಸಾಧಿಸಲು ನೀವು ಏನು ಮಾಡಬೇಕೆಂದು ಯೋಜನೆಯನ್ನು ರೂಪಿಸಿ. ಅನುಭವಿ ಜನರ ಆಲೋಚನೆಗಳನ್ನು ಆಲಿಸಿ. ಉತ್ಸಾಹದಿಂದ ಆಟಕ್ಕೆ ಇಳಿಯಿರಿ. ನೀವು ಅದನ್ನು ಮಾಡಬಹುದು!

ಅವನು ಸಾಮಾನ್ಯವಾಗಿ ಅವನು ಆ ಬಣ್ಣದ ಬಟ್ಟೆಗಳನ್ನು ಧರಿಸುತ್ತಿರಲಿಲ್ಲ. ಸಂಬಂಧಿಕರೊಬ್ಬರು ಉಡುಗೊರೆಯಾಗಿ ನೀಡಿದ್ದ ಆ ಬಟ್ಟೆಯನ್ನು ಧರಿಸದೆ ತುಂಬಾ ದಿನಗಳಿಂದ ಹಾಗೆಯೇ ಇಟ್ಟುಕೊಂಡಿದ್ದ. 'ನಾನು ಪ್ರವಾಸಕ್ಕೆ ಹೋದಾಗ ಇದನ್ನು ಧರಿಸೋಣ, ಅಲ್ಲಿ ಹೋದ ಮೇಲೆ ಪ್ರಯತ್ನಿಸೋಣ' ಎಂದು ಅವನು ಯೋಚಿಸಿ, ಅದನ್ನು ಸಹ ತೆಗೆದಿಟ್ಟುಕೊಂಡ. ಆದರೆ ಪ್ರವಾಸವನ್ನು ಆನಂದಿಸಿದ ಐದು ದಿನಗಳಲ್ಲಿ ಎಂದೂ ಅವನು ಅದನ್ನು ಧರಿಸಲಿಲ್ಲ. ಮಡಚಿದಂತೆಯೇ ಅದನ್ನು ಹಾಗೇ ತಂದು ಬೀರುವಿನಲ್ಲಿ ತೆಗೆದಿಟ್ಟ.

ಆಗ ಅವನಿಗೆ ಅರಿವಾಯಿತು, ತನ್ನ ಊರಿನಲ್ಲಿ ಆ ಶರ್ಟ್ ಧರಿಸಲು ಇಷ್ಟವಿಲ್ಲದಿದ್ದರೆ, ಅದನ್ನು ಬೇರೆಲ್ಲಿಯೂ ಕೂಡ ಧರಿಸಲು ಇಷ್ಟವಿರುವುದಿಲ್ಲ ಎಂದು. ಕೆಲಸದ ವಿಷಯದಲ್ಲೂ ಅಷ್ಟೇ. ಈಗ ಏನಾದರೂ ಮಾಡಲು ಇಷ್ಟವಿಲ್ಲದಿದ್ದರೆ, ನಂತರ ಮಾಡಬಹುದು ಎಂದು ಕೆಲವರು ಭಾವಿಸುತ್ತಾರೆ. ಈಗ ಮಾಡಲು ಇಷ್ಟವಿಲ್ಲದ ಕೆಲಸವನ್ನು ನೀವು ಎಂದಿಗೂ ಮಾಡುವುದಿಲ್ಲ. ಅದರ ಬಗ್ಗೆ ಯೋಚಿಸುತ್ತಾ ಸಮಯ ವ್ಯರ್ಥ ಮಾಡಬೇಡಿ.

ಗಿಡ ಬೆಳೆಸುವ ಹಾಗೆ ಆಸಕ್ತಿಯನ್ನೂ ಬೆಳೆಸಿ!

ಅವನು ಒಂದು ದಿನ ತನ್ನ ಸ್ನೇಹಿತನ ತೋಟಕ್ಕೆ ಹೋಗಿದ್ದ. ಆ ಸ್ನೇಹಿತ ತನ್ನ ತೋಟದ ಒಂದು ಭಾಗದಲ್ಲಿ ಗಿಡಗಳ ನರ್ಸರಿಯನ್ನು ಆರಂಭಿಸಿ ಅಲ್ಲಿ ವಿವಿಧ ಸಸ್ಯಗಳನ್ನು ಬೆಳೆಸುತ್ತಿದ್ದ. ಬಹಳ ಅಪರೂಪದ ಮರಗಳು, ಹೂವಿನ ಗಿಡಗಳು ಮತ್ತು ಬಳ್ಳಿಗಳು ಎಲ್ಲವನ್ನೂ ನೋಡುವುದು ಅಲ್ಲಿ ಕಣ್ಣಿಗೆ ಹಬ್ಬವಾಗಿತ್ತು.

ಇವನು ಒಂದು ಗಿಡದ ಮುಂದೆ ವಿಸ್ಮಯದಿಂದ ನಿಂತು ನೋಡಿ–ದ. ಕಾಮನಬಿಲ್ಲಿನ ಎಲ್ಲಾ ಬಣ್ಣಗಳನ್ನೂ ಬೆರೆಸಿದಂತೆ ಕಾಣುವ ಸುಂದರವಾದ ಹೂವುಗಳಿಂದ ಒಂದು ಸಸ್ಯ ಅರಳಿ ನಿಂತಿತ್ತು. ಅವನು ತನ್ನ ಜೀವನದಲ್ಲಿ ಅಂತಹ ಹೂವನ್ನು ನೋಡಿರಲಿಲ್ಲ. ಆ ಹೂವಿನ ವಾಸನೆಯೂ ಅವನನ್ನು ಆಕರ್ಷಿಸಿತು. ಆ ಹೂವಿನ ಸುತ್ತಲೂ ಚಿಟ್ಟೆಗಳು ಸುತ್ತುತ್ತಿದ್ದವು. ಅದು ಕೂಡ ತಮ್ಮಂತೆಯೇ ಚಿಟ್ಟೆ ಎಂದು ಅವುಗಳು ಭಾವಿಸಿರಬೇಕು ಎಂದು ಇವನಿಗೆ ಅನ್ನಿಸಿತು.

"ಇದು ಯಾವ ಬಗೆಯ ಹೂವು? ಇದು ನೋಡಲು ತುಂಬಾ ವಿಭಿನ್ನವಾಗಿದೆ" ಇಂದು ಇವನು ತನ್ನ ಸ್ನೇಹಿತನನ್ನು ಕೇಳಿದ. ಆ ಸಸ್ಯದ ಬಗ್ಗೆ ವಿವರಿಸಿದ ತೋಟದ ಮಾಲೀಕನಾಗಿದ್ದ ಇವನ ಗೆಳೆಯ, "ಕಳೆದ ತಿಂಗಳು ನಾನು ಕಾಶ್ಮೀರಕ್ಕೆ ಹೋದಾಗ ಇದನ್ನು ಖರೀದಿಸಿದೆ. ನಮ್ಮ ಸ್ಥಳೀಯ ಪರಿಸರದಲ್ಲಿ ಇದು ಬೆಳೆಯುತ್ತದೆಯೇ ಎಂದು ನನಗೆ ಹಿಂಜರಿಕೆ ಇತ್ತು. ಆದಾಗ್ಯೂ, ಇದು ಚೆನ್ನಾಗಿ ಬೆಳೆದು, ಹೂಬಿಟ್ಟಿದೆ" ಎಂದು ಹೇಳಿದ. ಇವನು ಈಗ ಅದನ್ನು ಗಮನಿಸಿ ನೋಡಿದ! ಅಂತಹ ಸುಂದರವಾದ ಗಿಡವನ್ನು ಒಂದು ಹಳೆಯ ಪ್ಲಾಸ್ಟಿಕ್ ಬಕೆಟ್‌ನಲ್ಲಿ ನೆಡಲಾಗಿತ್ತು. ತೋಟದ ಮಾಲೀಕ ಹಳೆಯ ಪ್ಲಾಸ್ಟಿಕ್ ಬಕೆಟ್‌ಗೆ ಮಣ್ಣು ತುಂಬಿಸಿ ಅದರಲ್ಲಿ ಆ ಗಿಡವನ್ನು ನೆಟ್ಟಿದ್ದ.

"ಇದೇನು? ನೀನು ಜಗತ್ತಿನಲ್ಲೇ ಅತ್ಯಂತ ಸುಂದರವಾದ ಹೂವಿನ ಗಿಡವನ್ನು ಇದರಲ್ಲಿ ನೆಟ್ಟಿರುವೆ? ಇದು ನನ್ನ ಬಳಿ ಇದಿದ್ದರೆ, ನಾನು ಇದನ್ನು ದುಬಾರಿ ಹೂವಿನ ಕುಂಡದಲ್ಲಿ ನೆಟ್ಟು ಅದರ ಸೌಂದರ್ಯವನ್ನು ನೋಡುತ್ತಿದ್ದೆ" ಎಂದು ಇವನು ತನ್ನ ಆ ಸ್ನೇಹಿತನಿಗೆ ಹೇಳಿದ. ಗೆಳೆಯ ಮುಗುಳ್ನಗುತ್ತಾ, "ನಾನು ಅದನ್ನು ಖರೀದಿಸಿ ತಂದಾಗ, ನನ್ನ ಬಳಿ ಹೂವಿನ ಕುಂಡ ಇರಲಿಲ್ಲ. ಆದ್ದರಿಂದ ಇದನ್ನು ಇದರಲ್ಲಿ ನೆಟ್ಟಿದ್ದೇನೆ. ನಾನು ಅದನ್ನು ಎಲ್ಲಿ ನೆಟ್ಟಿದ್ದೇನೆ ಎಂಬುದು ನನಗೆ ಚಿಂತೆಯಿಲ್ಲ. ಹಳೆಯ ಬಕೆಟ್‌ನಲ್ಲಿ ನೆಡುವುದನ್ನು ನಾನು ನಾಚಿಕೆಗೇಡಿನ ಸಂಗತಿ ಎಂದು ಪರಿಗಣಿಸುವುದಿಲ್ಲ. ಚೆನ್ನಾಗಿ ಬೆಳೆಸಿದರೆ, ಎಲ್ಲಿದ್ದರೂ ಸುಂದರವಾಗಿ ಅರಳುವುದು ಇದರ ಸ್ವಭಾವ" ಎಂದು ಹೇಳಿದ.

ಇದು ಒಂದು ಆಳವಾದ ಚಿಂತನೆ. ನಾವು ಯಾವುದೋ ವಿಷಯದ ಬಗ್ಗೆ ಉತ್ಸಾಹ ಬೆಳೆಸಿಕೊಳ್ಳುವುದು ಕೂಡ ತೋಟ ಬೆಳೆಸಿದಂತೆಯೇ. ತೋಟಗಾರಿಕೆಯಲ್ಲಿ ತೊಡಗಿರುವವರಿಗೆ ಇದು ಸುಲಭವಾಗಿ ಅರ್ಥವಾಗುತ್ತದೆ. ಹಂತ ಹಂತವಾಗಿ ಇದನ್ನು ಹೇಗೆ ಮಾಡಬೇಕೆಂದು ತಿಳಿಯೋಣ:

❖ ಯಾವುದನ್ನೇ ಆಗಲಿ ಮೊದಲಿಗೆ ನಾವು ಹುಡುಕಾಟದ ಮನೋಭಾವದಿಂದ, ಆಸಕ್ತಿಯಿಂದ ಪ್ರಾರಂಭಿಸಬೇಕು. ಮೊದಲು

ತೋಟಗಾರಿಕೆ ಮಾಡುವುದು ಹೇಗೆ, ಸುಂದರವಾದ ತೋಟಗಳು ಎಲ್ಲಿವೆ, ವಿವಿಧ ಸಸ್ಯಗಳು ಮತ್ತು ಮರಗಳ ಗುಣಲಕ್ಷಣಗಳು ಯಾವುವು, ಅವು ಹೇಗೆ ಬೆಳೆಯುತ್ತವೆ, ನಮ್ಮ ತೋಟಕ್ಕೆ ಯಾವುದು ಸೂಕ್ತವಾಗಿದೆ ಮತ್ತು ಅವು ನಮ್ಮ ಸ್ಥಳೀಯ ಪರಿಸರದಲ್ಲಿ ಬೆಳೆಯುತ್ತವೆಯೇ ಎಂಬುದನ್ನು ಕಲಿಯಬೇಕು. ಉದ್ಯೋಗ ಅಥವಾ ವೃತ್ತಿಗೂ ಸಹ ಅಂತಹ ಮೂಲಭೂತ ಜ್ಞಾನದ ಅಗತ್ಯವಿದೆ.

❖ ನಾವು ಮತ್ತು ನಾವು ಸೃಷ್ಟಿಸುವ ಉದ್ಯಾನದ ನಡುವೆ ನಿಕಟ ಸಂಪರ್ಕವನ್ನು ಸೃಷ್ಟಿಸಿಕೊಳ್ಳಬೇಕು. ಹಸಿರು, ಪ್ರಕೃತಿ ಮತ್ತು ಹೊರಾಂಗಣದಲ್ಲಿ ಸಮಯ ಕಳೆಯುವುದನ್ನು ಪ್ರೀತಿಸುವ ನಮ್ಮ ಕುಟುಂಬವು ಇದರಲ್ಲಿ ಆಸಕ್ತಿ ಹೊಂದಿದೆ, ಉಪಯುಕ್ತ ರೀತಿಯಲ್ಲಿ ಉದ್ಯಾನವನ್ನು ರಚಿಸುವುದು ಒಳ್ಳೆಯದು ಇತ್ಯಾದಿ ಹಲವು ಕಾರಣಗಳು ಇದಕ್ಕಿರುತ್ತವೆ. ಯಾವುದೇ ಚಟುವಟಿಕೆಯಲ್ಲಿ ಅಂತಹ ನಿಕಟ ಸಂಪರ್ಕ ಅತ್ಯಗತ್ಯ.

❖ ಆರಂಭದಲ್ಲಿ ಸಣ್ಣದಾಗಿ ಪ್ರಾರಂಭಿಸಿ, ಆತುರಪಡಬೇಡಿ. ಕಡಿಮೆ ನಿರ್ವಹಣೆಯೊಂದಿಗೆ ಚೆನ್ನಾಗಿ ಬೆಳೆಯುವ, ಬೇಗನೆ ಅರಳುವ ಮತ್ತು ಚೆನ್ನಾಗಿ ಫಲ ನೀಡುವ ಸಸ್ಯಗಳೊಂದಿಗೆ ಸಣ್ಣದಾಗಿ ಪ್ರಾರಂಭಿಸಿ. ಅವು ನಿಮಗೆ ಆತ್ಮವಿಶ್ವಾಸ ಮತ್ತು ಅನುಭವವನ್ನು ನೀಡುತ್ತವೆ. ನಂತರ ತೋಟವನ್ನು ವಿಸ್ತರಿಸಿ. ಆರಂಭದಲ್ಲಿ ನೀವು ಮಾಡುವ ಕೆಲಸ ಅಥವಾ ವೃತ್ತಿ ಕೂಡ ಹೀಗಿಯೇ ಇರಬೇಕು.

❖ ಸಾಧಿಸಬಹುದಾದ ಗುರಿಗಳನ್ನು ಇಟ್ಟುಕೊಳ್ಳಿ. ನಾವು ನಮ್ಮ ಮನೆಗೆ ತರಕಾರಿಗಳನ್ನು ಬೆಳೆಯಲು ಬಯಸುತ್ತೇವೆ, ಸಣ್ಣ ತರಕಾರಿ ತೋಟವನ್ನು ಪ್ರಾರಂಭಿಸುತ್ತೇವೆ, ನಮ್ಮ ಪೂಜಾ ಕೋಣೆಗೆ ಹೂವುಗಳನ್ನು ಬೆಳೆಯುತ್ತೇವೆ, ನೀರನ್ನು ವ್ಯರ್ಥ ಮಾಡದಂತೆ ತೋಟದಲ್ಲಿ ಗಿಡಗಳನ್ನು ನೆಡಲು ಬಯಸುತ್ತೇವೆ... ಈ ರೀತಿಯ ಗುರಿಗಳನ್ನು ಹೊಂದಿರಿ ಮತ್ತು ನೀವು ಶೀಘ್ರದಲ್ಲೇ ಅವುಗಳನ್ನು ಸಾಧಿಸುವಿರಿ ಮತ್ತು ಹೆಮ್ಮೆಪಡುವಿರಿ. ಅದರ ನಂತರ, ನೀವು ದೊಡ್ಡ ಗುರಿಗಳಿಗೆ ಹೋಗಬಹುದು. ನಿಮ್ಮ ಕೆಲಸ ಅಥವಾ ವೃತ್ತಿಗೂ ನಿಮ್ಮ ಗುರಿಗಳನ್ನು ಈ ರೀತಿಯಾಗಿ ವಿಂಗಡಿಸಿ.

❖ ಪುಸ್ತಕಗಳನ್ನು ಓದುವುದು, ವೀಡಿಯೊಗಳನ್ನು ನೋಡುವುದು ಮತ್ತು ಇತರ ಜನರ ಅನುಭವಗಳನ್ನು ಕೇಳುವ ಮೂಲಕ ತೋಟಗಾರಿಕೆಯ ಬಗ್ಗೆ ತಿಳಿಯಿರಿ. ನಿಮ್ಮ ತೋಟದಲ್ಲಿ ನೀವು ಕಲಿಯುವ ತಂತ್ರಗಳನ್ನು ಪ್ರಯತ್ನಿಸಿ. ಹೊಸ ಕೆಲಸಗಳನ್ನು ಮಾಡುವುದು ರೋಮಾಂಚನಕಾರಿಯಾಗಿರುತ್ತದೆ. ಇದೇ ರೀತಿ ನಿಮ್ಮ ಕೆಲಸದಲ್ಲಿಯೂ ಪ್ರಯೋಗ ಮಾಡಲು ಪ್ರಯತ್ನಿಸಿ.

❖ ಮಣ್ಣಿನ ವಾಸನೆ, ಬೀಜದ ಮೊಳಕೆಯೊಡೆಯುವಿಕೆ, ಮೊಗ್ಗು ಕ್ರಮೇಣ ಅರಳುವುದು, ಬದನೆಕಾಯಿಯ ಮೊಳಕೆಯೊಡೆಯುವಿಕೆ ಮತ್ತು ದೊಡ್ಡ ಸಸ್ಯದ ಬೆಳವಣಿಗೆಯಂತಹ ದೈನಂದಿನ ಪ್ರಗತಿಯ ಆನಂದವನ್ನು ಅನುಭವಿಸಿ. ಈ ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳಿ. ಅವರ ಸಲಹೆಯನ್ನೂ ಕೇಳಿ. ಇದು ನಿಮ್ಮನ್ನು ಪ್ರೋತ್ಸಾಹಿಸುತ್ತದೆ. ಈ ಅನುಭವಗಳ ಹಂಚಿಕೆ ಕೆಲಸ ಮತ್ತು ವ್ಯವಹಾರದಲ್ಲಿಯೂ ಅತ್ಯಗತ್ಯ.

❖ ನೀವು ಏನೇ ಮಾಡಲು ಪ್ರಾರಂಭಿಸಿದರೂ, ನಿರಂತರತೆ ಮುಖ್ಯ. ನೀವು ಪ್ರತಿದಿನ ಅದರ ಮೇಲೆ ಕೆಲಸ ಮಾಡುತ್ತಲೇ ಇರಬೇಕು. ನೀವು ತೋಟದಲ್ಲಿ ಕನಿಷ್ಠ ಕೆಲವು ನಿಮಿಷಗಳಾದರೂ ಕಳೆಯಬೇಕು, ಸಸ್ಯಗಳಿಗೆ ನೀರು ಹಾಕಬೇಕು, ಬೇರುಗಳ ಸುತ್ತಲಿನ ಮಣ್ಣನ್ನು ಸಡಿಲಗೊಳಿಸಬೇಕು, ಕಳೆಗಳನ್ನು ತೆಗೆದು ಹಾಕಬೇಕು. ಯಾವುದಾದರೂ ಕೀಟಗಳಿವೆಯೇ ಎಂದು ಮೇಲ್ವಿಚಾರಣೆ ಮಾಡಬೇಕು ಮತ್ತು ಹೂವುಗಳು ಮತ್ತು ತರಕಾರಿಗಳನ್ನು ಕೀಳಬೇಕು. ಕೆಲವು ಸಸ್ಯಗಳು ಒಣಗಬಹುದು, ಕೆಲವು ಅರಳದೆ ನಿಮ್ಮನ್ನು ನಿರಾಶೆಗೊಳಿಸಬಹುದು, ಆದರೆ ನಿರುತ್ಸಾಹಗೊಳ್ಳಬೇಡಿ. ನೀವು ಅವುಗಳನ್ನು ಬೇರು ಸಹಿತ ಕಿತ್ತು ಹೊಸ ಸಸ್ಯಗಳನ್ನು ನೆಟ್ಟು ಅವುಗಳನ್ನು ನಿರ್ವಹಿಸಬೇಕು. ಕೆಲಸದಲ್ಲಿ ಅಥವಾ ನಿಮ್ಮ ವ್ಯವಹಾರದಲ್ಲಿ ಅನಿರೀಕ್ಷಿತ ಸಮಸ್ಯೆಗಳು ಎದುರಾದಾಗ ನೀವು ಪರ್ಯಾಯ ಯೋಜನೆಗಳೊಂದಿಗೆ ಸಿದ್ಧರಾಗಿರಬೇಕು.

ಕ್ರಮೇಣ ಹೀಗೆ ಮಾಡುವುದರಿಂದ ನಿಮ್ಮೊಳಗೆ ಹುಟ್ಟುವ ಉತ್ಸಾಹವು ನಿಮ್ಮ ಜೀವನದುದ್ದಕ್ಕೂ ನಿಮ್ಮನ್ನು ಪೋಷಿಸುತ್ತದೆ.

●

ಬಿಳುಪು

ಭಾವನೆಗಳು

ಸಂಪುಟ 8 | ಸಂಚಿಕೆ 7

ಡಿಸೆಂಬರ್ 2025

ಪ್ರಕಾಶಕರು ಮತ್ತು ಪ್ರಧಾನ ಸಂಪಾದಕರು

ಕೆ.ಆರ್. ನಾಗರಾಜನ್

ಲೇಖಕರು

ತ.ಸೆ. ಜ್ಞಾನವೇಲ್

ಗೌರವ ಸಂಪಾದಕರು ಮತ್ತು
ಕನ್ನಡಾನುವಾದ

ಡಾ. ತಮಿಳ್ ಸೆಲ್ವಿ

ಎಂ.ಎ., ಪಿಎಚ್.ಡಿ., ಡಿ.ಲಿಟ್.,
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ.

ರಚನೆ ಮತ್ತು ವಿನ್ಯಾಸ
ತರು ಮೀಡಿಯಾ (ಪ್ರೈ) ಲಿ.,
ನಂ, 18, ನೆಲ ಮಹಡಿ
14ನೇ ಅಡ್ಡರಸ್ತೆ ಜಂಕ್ಷನ್
ಡಿಫೆನ್ಸ್ ಕಾಲನಿ,
ಈಕ್ಕಾಟ್ಟು ತಾಂಗಲ್,
ಚೆನ್ನೈ 600 032.

ಈ ಸಂಚಿಕೆಯಲ್ಲಿರುವ ಯಾವುದೇ ಭಾಗವನ್ನಾಗಲೀ ವಿಷಯಗಳನ್ನಾಗಲೀ ಸಂಪಾದಕರ ಲಿಖಿತ ಪೂರ್ವ ಅನುಮತಿ ಪಡೆಯದೆ ಮರುಪ್ರಕಟಣೆ ಮಾಡುವುದಾಗಲೀ, ಅಂತರ್‌ಜಾಲ ತಾಣಗಳಲ್ಲಿ ಪುನರ್‌ದಾಖಲಿಸುವುದಾಗಲೀ ಮಾಹಿತಿ ಹಕ್ಕು ಕಾನೂನು ಬಾಹಿರ ಪ್ರಕ್ರಿಯೆಯಾಗಿರುತ್ತದೆ.

Published by
K.R. NAGARAJAN,
Published from
10, Sengunthapuram, Mangalam Road,
TIRUPUR - 641 604. | Ph: 0421-4304106

ಅತ್ಯಾಸಕ್ತಿಯ ಕಥೆಗಳು!

ಒಬ್ಬ ಹುಡುಗ ಹೊರಗೆ ಆಟವಾಡಲು ಹೋಗದೆ ಗಂಟೆಗಟ್ಟಲೆ ಟಿವಿ ನೋಡುತ್ತಾ ಮತ್ತು ಕಂಪ್ಯೂಟರ್‌ನಲ್ಲಿ ಆಟವಾಡುತ್ತಾ ಕಾಲ ಕಳೆಯುತ್ತಿದ್ದ. ಅವನ ತಂದೆ ಅವನನ್ನು ಎಚ್ಚರಿಸಲು ಪ್ರಯತ್ನಿಸಿದರು. "ನಿನಗೆ ಒಂದು ವಿಷಯ ಗೊತ್ತಾ? ಒಬ್ಬ ಒಲಿಂಪಿಕ್ ಕ್ರೀಡಾಪಟು ಪ್ರತಿದಿನ ತರಬೇತಿಯಲ್ಲಿ ಕಳೆಯುವ ಸಮಯಕ್ಕಿಂತಲೂ ಹೆಚ್ಚು ಸಮಯವನ್ನು ನಾವು ಟಿವಿ ನೋಡುತ್ತಾ ಕಳೆಯುತ್ತೇವೆ" ಎಂದು ತಂದೆ ಅವನಿಗೆ ಹೇಳಿದನು.

ಮಗ ತಕ್ಷಣ ಹೇಳಿದ. "ಅದು ಸರಿ! ನಾವು ಟಿವಿಯಲ್ಲಿ ಅವರ ಆಟವನ್ನು ನೋಡದಿದ್ದರೆ, ಅವರು ಅಭ್ಯಾಸ ಮಾಡುವುದರಿಂದ ಏನು ಪ್ರಯೋಜನ? ಅದಕ್ಕಾಗಿಯೇ ನಾವು ಟಿವಿ ನೋಡುತ್ತೇವೆ" ಎಂದು ಅವನು ಹೇಳಿದ್ದನ್ನು ಕೇಳಿ ತಂದೆ ದಿಗ್ಭ್ರಮೆಗೊಂಡರು.

"ಅಪ್ಪಾ! ದಯವಿಟ್ಟು ನನ್ನ ಪ್ರಗತಿ ವರದಿಗೆ ಸಹಿ ಹಾಕು" ಎಂದು ಮಗಳು ತಂದೆಯನ್ನು ಕೇಳಿದರು, ಅವರು ಅದನ್ನು ತೆಗೆದುಕೊಂಡು ನೋಡಿದರು. ಮಗಳು ಎಲ್ಲಾ ವಿಷಯಗಳಲ್ಲಿ ಕಡಿಮೆ ಅಂಕಗಳೊಂದಿಗೆ ಪಾಸಾಗಿದ್ದಳು. "ನಾನು ಯಾಕೆ ಇದರಲ್ಲಿ ಸಹಿ ಹಾಕಬೇಕು?" ಎಂದು ತಂದೆ ಕೇಳಿದರು, ಮಗಳು ಹೇಳಿದಳು:

"ನಾನು ಸರಿಯಾಗಿ ಓದಿಲ್ಲ ಎಂಬ ಭಯದಿಂದ ನಾನೇನೂ ಯಾವ ಪರೀಕೆಗೂ ಹಾಜರಾಗದೆ ತಪ್ಪಿಸಿಕೊಂಡಿಲ್ಲ. ಪರೀಕ್ಷೆಯಲ್ಲಿ ನಾನು ಯಾರನ್ನೂ ಕಾಪಿ ಮಾಡಿ ಮೋಸ ಮಾಡಿಲ್ಲ. ನಾನು ಪ್ರಾಮಾಣಿಕವಾಗಿ ಬರೆದು ಪಾಸಾಗಿದ್ದೇನೆ. ಆದ್ದರಿಂದ ದಯವಿಟ್ಟು ಸಹಿ ಮಾಡಿ" ಎಂದಳು!

ಒಬ್ಬ ವ್ಯಕ್ತಿ ಚಿಕಿತ್ಸೆಗಾಗಿ ವೈದ್ಯರ ಬಳಿಗೆ ಹೋಗಿ, "ನನಗೆ ರಾತ್ರಿ ಸರಿಯಾಗಿ ನಿದ್ದೆ ಬರುತ್ತಿಲ್ಲ. ನಾನು ಸುಮ್ಮನೆ ದೀರ್ಘಕಾಲ ಹಾಸಿಗೆಯಲ್ಲಿ ಮಲಗಿಕೊಂಡು, ಅನೇಕ ವಿಷಯಗಳ ಬಗ್ಗೆ ಯೋಚಿಸುತ್ತಿರುತ್ತೇನೆ" ಎಂದು ಹೇಳಿದ. ವೈದ್ಯರು ಅವನಿಗೆ, "ಕಣ್ಣು ಮುಚ್ಚಿ ಮಲಗಿ, ನೀವು ಆಹ್ಲಾದಕರ ಸ್ಥಳದಲ್ಲಿದ್ದೇನೆ ಎಂದು ಊಹಿಸಿಕೊಳ್ಳಿ. ಸ್ವಲ್ಪ ಸಮಯದಲ್ಲೇ ನಿದ್ರಿಸುತ್ತೀರಿ" ಎಂದು ಸಲಹೆ ನೀಡಿದರು. ಮನೆಗೆ ಬಂದ ನಂತರ, ಅವನು ತನ್ನ ಹೆಂಡತಿಗೆ ಇದನ್ನು ಹೇಳಿದ.

ರಾತ್ರಿ ಅವನು ಮಲಗಲು ಹೋದಾಗ ಅವನ ಹೆಂಡತಿ ಅವನ ಬಳಿ ಬಂದು, "ಇಲ್ಲಿ ನೋಡಿ, ನಾವು ಈಗ ಒಂದು ಸುಂದರವಾದ ದ್ವೀಪದಲ್ಲಿದ್ದೇವೆ. ಕಡಲ ತೀರದಲ್ಲಿರುವ ಸುಂದರವಾದ ಬಂಗಲೆ, ಸಮುದ್ರಕ್ಕೆ ಅಪ್ಪಳಿಸುವ ಅಲೆಗಳ ಶಬ್ದವು ಮಂದವಾಗಿ ಕೇಳಿಸುತ್ತಿದೆ. ಕಿಟಕಿಯ ಮೂಲಕ ಸಮುದ್ರದ ತಂಗಾಳಿ ಬೀಸುತ್ತಿದೆ. ತೋಟದಲ್ಲಿ ಅರಳುವ ಹೂವುಗಳ ವಾಸನೆಯು ಆಹ್ಲಾದಕರವಾಗಿದೆ... ಈ ಪರಿಸರದಲ್ಲಿ ಮಲಗಿರುವುದನ್ನು ಊಹಿಸಿಕೊಳ್ಳಿ. ಈಗ ನೀವು ನಿದ್ರಿಸುತ್ತೀರಿ" ಎಂದಳು. ಗಂಡ ಕುತೂಹಲದಿಂದ ಕೇಳಿದ. "ಈ ಸ್ಥಳದಲ್ಲಿ ಕೊಠಡಿ ಬಾಡಿಗೆಗೆ ನಾವು ಎಷ್ಟು ಪಾವತಿಸಬೇಕಾಗುತ್ತದೆ?"

ಆಸ್ಪತ್ರೆಗೆ ರಕ್ತ ಪರೀಕ್ಷೆಗೆ ಒಬ್ಬ ಯುವತಿ ಬಂದಳು. "ನನ್ನ ಕೈಯಲ್ಲಿ ಸರಿಯಾದ ರಕ್ತನಾಳವನ್ನು ಹುಡುಕಿ ಸೂಜಿಯನ್ನು ಚುಚ್ಚುವುದು ಕಷ್ಟವಾಗುತ್ತದೆ, ಜಾಗರೂಕರಾಗಿರಿ" ಎಂದು ಆತಂಕದಿಂದ ಹೇಳಿದಳು. ಆತಂಕಗೊಂಡ ನರ್ಸ್ ತಕ್ಷಣ, "ಚಿಂತಿಸಬೇಡಿ, ಕಳೆದ ವಾರ ಕೂಡ ಹೀಗೆಯೇ ಒಬ್ಬ ಮಹಿಳೆ ಡೆಂಗ್ಯೂ ಪರೀಕ್ಷೆಗೆ ಬಂದಿದ್ದರು. ಅವಳ ಕೈ ಕೂಡ ಇಷ್ಟೇ ಕೆಟ್ಟದಾಗಿತ್ತು. ನಾನು ನಾಲ್ಕು ಸ್ಥಳಗಳಲ್ಲಿ ಚುಚ್ಚಿ ಕೊನೆಗೂ ರಕ್ತ ತೆಗೆದುಕೊಂಡೆ!" ಎಂದು ಹೇಳಿದಳು.

ಬಂದ ಯುವತಿ ಶಾಂತಚಿತ್ತದಿಂದ, "ಕಳೆದ ವಾರ ಬಂದಿದ್ದು ನಾನೇ. ಈ ವಾರವೂ ಡೆಂಗ್ಯೂ ಪರೀಕ್ಷೆ ಮಾಡಿಸಿಕೊಳ್ಳಲು ವೈದ್ಯರು ಹೇಳಿದ್ದಾರೆ. ಇಂದಾದರೂ ನಾಲ್ಕು ಸ್ಥಳಗಳಲ್ಲಿ ಚುಚ್ಚದೆ ಒಂದೇ ಸ್ಥಳದಲ್ಲಿ ತೆಗೆದುಕೊಳ್ಳಿ" ಎಂದಳು.

ಒಂದು ಕಚೇರಿಯಲ್ಲಿ ಹೊಸದಾಗಿ ಕೆಲಸಕ್ಕೆ ಸೇರಿದ ಒಬ್ಬ ಉದ್ಯೋಗಿ ಪ್ರತಿದಿನ ತಡವಾಗಿ ಬರುವುದನ್ನು ಅಭ್ಯಾಸ ಮಾಡಿಕೊಂಡಿದ್ದ.

ಒಂದು ವಾರ ನೋಡಿದ ನಂತರ, ಮೇಲ್ವಿಚಾರಕ ಅವನನ್ನು ಕರೆದು, ಅವನು ದಿನವೂ ತಡವಾಗಿ ಬರುತ್ತಿರುವುದು ಸರಿಯಲ್ಲ ಎಂದು ನಾಜೂಕಾಗಿ ತಿಳಿಸಿ ಹೇಳಿದರು. "ನಿಮ್ಮ ಆಸನವು ಕಚೇರಿಯ ಹಾಲಿನ ಕೊನೆಯಲ್ಲಿದೆ. ನೀವು ದಿನವೂ ಒಳ ಬರುವ ಹೊತ್ತಿಗೆ, ನೀವು ನಡೆದು ಹೋಗುವ ದಾರಿಯ ಉದ್ದಕ್ಕೂ ಇರುವ ಆಸನದಲ್ಲಿ ಎಲ್ಲರೂ ಸರಿಯಾಗಿ ಹತ್ತು ಗಂಟೆಗೆ ಬಂದು ಕುಳಿತಿರುತ್ತಾರೆ. ನೀವು ತಡವಾಗಿ ಬರುವುದನ್ನು ಎಲ್ಲರೂ ಗಮನಿಸುತ್ತಾರೆ" ಎಂದು ನಯವಾಗಿ ಹೇಳಿದರು.

ಆ ಉದ್ಯೋಗಿ ತಕ್ಷಣ ಹೇಳಿದ. "ಕ್ಷಮಿಸಿ ಸರ್! ಹೀಗಾಗದಂತೆ ತಡೆಯಲು ನನ್ನ ಬಳಿ ಒಂದು ಉಪಾಯವಿದೆ. ನಾನು ಹಿಂದಿನ ಬಾಗಿಲಿನಿಂದ ಒಳಗೆ ಬಂದು ನನ್ನ ಸೀಟಿನಲ್ಲಿ ಕುಳಿತುಕೊಳ್ಳಬಹುದೇ?" ಎಂದು ಕೇಳಿದ.

ಒಬ್ಬ ಮಹಿಳೆ ಬಟ್ಟೆ ಅಂಗಡಿಗೆ ಬಂದು, ತನಗೆ ಹಿಡಿಸಿದ ಪ್ರತಿಯೊಂದು ಡ್ರೆಸ್ಸನ್ನೂ ಟ್ರಯಲ್ ರೂಮ್‌ಗೆ ಹೋಗಿ ಹಾಕಿ ನೋಡಿದಳು. ಅವಳು ಪ್ರತಿಯೊಂದು ಡ್ರೆಸ್ ಅನ್ನು ಬದಲಾಯಿಸಿಕೊಂಡು ಹೊರಗೆ ಬರುತ್ತಿದ್ದಂತೆ, ಅವಳ ಜೊತೆಯಲ್ಲಿ ಬಂದಿದ್ದ ಅವಳ ಐದು ವರ್ಷದ ಮಗಳು ಅವಳನ್ನು ಆಶ್ಚರ್ಯದಿಂದ ನೋಡುತ್ತಾ, "ಅಮ್ಮ! ನೀವು ಈ ಡ್ರೆಸ್‌ನಲ್ಲಿ ತುಂಬಾ ಸುಂದರವಾಗಿ ಕಾಣುತ್ತೀರಿ" ಎಂದು ಹೇಳುತ್ತಲೇ ಇದ್ದಳು.

ಅದೇ ಅಂಗಡಿಯಲ್ಲಿ ಬಟ್ಟೆಗಳನ್ನು ಆರಿಸುತ್ತಿದ್ದ ಇನ್ನೊಬ್ಬ ಮಹಿಳೆ ಇದನ್ನು ನೋಡಿ ಕುತೂಹಲದಿಂದ ಕೇಳಿದಳು: "ನಾನು ಒಂದು ಗಂಟೆಯಿಂದ ಹುಡುಕಾಡುತ್ತಿದ್ದೇನೆ. ನನಗೆ ಸರಿ ಹೊಂದುವ ಯಾವುದೇ ಉಡುಗೆ ಸಿಗುತ್ತಿಲ್ಲ. ನಿಮ್ಮ ಮಗಳನ್ನು ಐದು ನಿಮಿಷಗಳ ಕಾಲ ನನ್ನ ಜೊತೆ ಕಳಿಸಿ. ನಾನು ಹಾಕಿಕೊಂಡಿದ್ದನ್ನು ಅವಳು ನೋಡಿ ಆಶ್ಚರ್ಯಗೊಂಡರೆ ಬಹುಶಃ ನನಗೂ ಉಡುಗೆ ಇಷ್ಟವಾಗಬಹುದು!" ಎಂದಳು. ಮಗು ಅಚ್ಚರಿಯಿಂದ ಅವರತ್ತ ನೋಡಿತು.

ಮನೆಯಲ್ಲಿ ಫೋನ್ ರಿಂಗಣಿಸಿದಾಗ, ಮಧ್ಯವಯಸ್ಕ ಮಹಿಳೆ ಅದನ್ನು ಎತ್ತಿಕೊಂಡಳು. ಇನ್ನೊಂದು ತುದಿಯಲ್ಲಿ ಒಬ್ಬ ಯುವತಿ ಮಾತನಾಡುತ್ತಿದ್ದಳು: "ಅಮ್ಮಾ, ನಾನು ಕಾಲೇಜು ಮುಗಿಸಿ ಮನೆಗೆ ಹೊರಡುವಾಗ, ನನ್ನ ಕಾರು ರಿಪೇರಿಯಾಗಿತ್ತು. ಆದ್ದರಿಂದ ನಾನು ಅದನ್ನು ಸರ್ವಿಸ್‌ಗೆ ಬಿಟ್ಟು ಸಿನಿಮಾ ನೋಡಲು ಬಂದಿದ್ದೇನೆ. ನಾನು ಹತ್ತು ಗಂಟೆಗೆ ಮನೆಗೆ ಬರುತ್ತೇನೆ. ಅಪ್ಪನಿಗೆ ಏನಾದರೂ ಹೇಳಿ ಅವರನ್ನು ಸಮಾಧಾನ ಪಡಿಸು" ಎಂದು ಅವಳು ಹೇಳಿದಳು.

ಆ ಮಹಿಳೆಗೆ ಇಬ್ಬರು ಗಂಡು ಮಕ್ಕಳು. ಅವರಿಗೆ ಹೆಣ್ಣು ಮಕ್ಕಳಿರಲಿಲ್ಲ. ಆ ಯುವತಿ ತಪ್ಪಾಗಿ ತನ್ನ ನಂಬರ್‌ಗೆ ಡಯಲ್ ಮಾಡಿದ್ದಾಳೆಂಬುದು ಈ ಮಹಿಳೆಗೆ ಅರ್ಥವಾಯಿತು. "ನೋಡಮ್ಮಾ! ನೀನು ನನ್ನ ಮಗಳಲ್ಲ" ಎಂದು ಅವಳು ವಿವರಿಸಲು ಪ್ರಯತ್ನಿಸಿದಳು. ಯುವತಿ, "ಇದೇನಮ್ಮಾ? ನಾನು ಒಂದು ದಿನ ತಡವಾಗಿ ಬರುತ್ತೇನೆ ಎಂದರೆ, ನಾನು ನಿನ್ನ ಮಗಳಲ್ಲವೇ? ಅಪ್ಪನಿಗೆ ಏನಾದರೂ ಹೇಳಿ ಅವರನ್ನು ನಿಭಾಯಿಸು" ಎಂದು ಹೇಳಿ ಫೋನ್ ಕಟ್ ಮಾಡಿದಳು. ಈ ಮಹಿಳೆ ಆಶ್ಚರ್ಯದಿಂದ ಫೋನ್ ಕಡೆಗೇ ನೋಡುತ್ತಿದ್ದಳು.

ಆಸಕ್ತಿಯಿಂದ ತೊಡಗಿರಿ!

ಜೀವನದಲ್ಲಿ ಕೆಲವರು ವೃತ್ತಿ ಅಥವಾ ವ್ಯವಹಾರವನ್ನು ಆಯ್ಕೆ ಮಾಡಿಕೊಂಡು, ಅದರೊಳಗೆ ಪ್ರವೇಶಿಸುವ ಅನೇಕ ಜನರು ಒಂದು ತಪ್ಪನ್ನು ಮಾಡುತ್ತಾರೆ. ಅವರು ವ್ಯವಹಾರ ಅಥವಾ ವೃತ್ತಿಯನ್ನು ಹಣ ಗಳಿಸಲು ಸುಲಭ ಮತ್ತು ಅನುಕೂಲಕರ ಮಾರ್ಗವೆಂದು ಭಾವಿಸುತ್ತಾರೆ. ವ್ಯಾಪಾರ ಮಾಡುವ ಇತರ ಎಲ್ಲಾ ಜನರೂ ಸಹ ಈ ರೀತಿಯೇ ಗಳಿಸುತ್ತಾರೆ ಎಂದು ಅವರು ಭಾವಿಸುತ್ತಾರೆ. ವ್ಯಾಪಾರದಲ್ಲಿ, ಸುಮ್ಮನೆ ಕುಳಿತುಕೊಂಡೇ ಹಣ ಗಳಿಸಬಹುದು ಎಂದು ಅವರು ಭಾವಿಸುತ್ತಾರೆ.

ಆದರೆ ಅವರಲ್ಲಿ ಅದರ ಬಗ್ಗೆ ಹೆಚ್ಚಿನ ಆಸಕ್ತಿ ಇರುವುದಿಲ್ಲ. ತಾವು ಮಾಡುವ ವೃತ್ತಿ ಅಥವಾ ವ್ಯವಹಾರದ ಬಗ್ಗೆಯೂ ಅವರಿಗೆ ಸ್ಪಷ್ಟತೆ ಇರುವುದಿಲ್ಲ. ಅಂಗಡಿ ಬೀದಿಯಲ್ಲಿ ಯಾವ ಅಂಗಡಿಯ ಮುಂದೆ ಜನದಟ್ಟಣೆ ಹೆಚ್ಚಾಗಿದೆ ಎಂಬುದನ್ನು ನೋಡುವ ಮೂಲಕ ಅವರು ಅದೇ ವ್ಯವಹಾರವನ್ನು ಪ್ರಾರಂಭಿಸುತ್ತಾರೆ. ಅವರ ವ್ಯವಹಾರವು ಹತ್ತರೊಡನೆ ಹನ್ನೊಂದಾಗಿರುತ್ತದೆ ಅಷ್ಟೆ. ಹೀಗೆ ಅವರು ವ್ಯವಹಾರದೊಳಗೆ ಕುರುಡಾಗಿ ಪ್ರವೇಶಿಸುತ್ತಾರೆ. ಅವರಿಗೆ ಆ ವ್ಯವಹಾರದ ಬಗ್ಗೆ ಯಾವುದೇ ಜ್ಞಾನ ಅಥವಾ ಅನುಭವವವೂ ಇರುವುದಿಲ್ಲ. ಆಸಕ್ತಿ ಇಲ್ಲದೆ, ಯಾವುದನ್ನೇ ಆಗಲಿ ನೀವು ದೀರ್ಘಕಾಲ ನಡೆಸಲು ಸಾಧ್ಯವಿಲ್ಲ. ಗ್ರಾಹಕರನ್ನು ಆಕರ್ಷಿಸಲೂ ಸಾಧ್ಯವಿಲ್ಲ. ಹೀಗಿರುವಾಗ ಸಮಸ್ಯೆ ಎದುರಾದಾಗ ಅವರು ಎಡವುತ್ತಾರೆ.

ವೃತ್ತಿ ಅಥವಾ ವ್ಯವಹಾರವನ್ನು ಆಸಕ್ತಿಯಿಂದ ಆರಂಭಿಸಲು ಮತ್ತು ಬೆಳೆಯಲು ಕೆಲವು ಮಾರ್ಗಗಳು ಇದೋ ಇಲ್ಲಿವೆ:

❖ ನೀವು ಯಾರೂ ಮಾಡದ ನವೀನ ವೃತ್ತಿ ಅಥವಾ ವ್ಯವಹಾರವನ್ನು ಪ್ರಾರಂಭಿಸಿದರೂ ಸಹ, ನೀವು ಅದರ ಬಗ್ಗೆ ಉತ್ಸಾಹ ಹೊಂದಿದ್ದರೆ, ನೀವು ಅದನ್ನು ದೂರದೃಷ್ಟಿಯೊಂದಿಗೆ ಮಾಡುತ್ತೀರಿ.

❖ ಆಸಕ್ತಿ ಇರುವವರು ಮಾತ್ರ ತಮ್ಮ ಗ್ರಾಹಕರು ಯಾರೆ–ಂದು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬಹುದು ಮತ್ತು ಅವರನ್ನು ಆಕರ್ಷಿಸಬಹುದು.

❖ ನಿಮ್ಮ ವೃತ್ತಿ ಅಥವಾ ವ್ಯವಹಾರ ಎಷ್ಟೇ ಚಿಕ್ಕದಾಗಿದ್ದರೂ, ನೀವು ಉತ್ಸಾಹಿಯಾಗಿದ್ದರೆ, ನೀವು ಒಳ್ಳೆಯ ಖ್ಯಾತಿಯನ್ನು ಗಳಿಸುತ್ತೀರಿ ಮತ್ತು ನಿಮ್ಮನ್ನು ಉತ್ತಮ ಬ್ರ್ಯಾಂಡ್ ಆಗಿ ಬೆಳೆಸಿಕೊಳ್ಳುತ್ತೀರಿ.

❖ ನಿಮ್ಮ ವೃತ್ತಿಜೀವನದಲ್ಲಿ ಭವಿಷ್ಯ ಏನಾಗಲಿದೆ ಎಂಬುದರ ಕುರಿತು ಅನಿಶ್ಚಿತತೆ ಇದ್ದರೂ, ಸ್ಪಷ್ಟ ಯೋಜನೆಗಳೊಂದಿಗೆ ಮುಂದುವರಿಯಲು ನೀವು ಒಂದು ಮಾರ್ಗವನ್ನು ಕಂಡುಕೊಳ್ಳಬೇಕು.

❖ ಉತ್ಸಾಹಭರಿತರು ಮಾತ್ರ ತಮ್ಮ ವೃತ್ತಿಜೀವನಕ್ಕೆ ಬಲವಾದ ಅಡಿಪಾಯವನ್ನು ನಿರ್ಮಿಸುತ್ತಾರೆ.

❖ ನಾವು ಒಂದು ಕೆಲಸವನ್ನು ಏಕೆ ಮಾಡುತ್ತೇವೆ ಮತ್ತು ಅದರಿಂದ ಏನನ್ನು ನಿರೀಕ್ಷಿಸುತ್ತೇವೆ ಎಂಬುದರ ಬಗ್ಗೆ ನಮಗೆ ಸ್ಪಷ್ಟತೆ ಇದ್ದರೆ, ಅದರಲ್ಲಿ ನಮಗೆ ಆಸಕ್ತಿ ಇರುತ್ತದೆ. ಅದು ನಮ್ಮನ್ನು ಆತ್ಮವಿಶ್ವಾಸ ಮತ್ತು ಬದ್ಧತೆಯಿಂದ ಕೆಲಸ ಮಾಡಲು ಪ್ರೇರೇಪಿಸುತ್ತದೆ.

❖ ಉತ್ಸಾಹಭರಿತರು ತಮ್ಮ ವೃತ್ತಿಯಲ್ಲಿ ಪರಿಣಿತರಾಗುತ್ತಾರೆ. ಅವರು ಸರಿಯಾದ ಜನರೊಂದಿಗೆ ಸಂವಹನ ನಡೆಸುತ್ತಾರೆ ಮತ್ತು ಒಳಹೊರಗನ್ನು ಕಲಿಯುತ್ತಾರೆ. ಅವರಿಗೆ ಅಗತ್ಯವಿರುವ ಸಹಾಯವೂ ಸಿಗುತ್ತದೆ.

❖ ಉದ್ಯಮದಲ್ಲಿ ಎಷ್ಟೇ ಸ್ಪರ್ಧಿಗಳಿದ್ದರೂ, ಅವರಿಂದ ಎದ್ದು ಕಾಣುವ ಕೀಲಿಕೈ ಕುತೂಹಲ.

❖ ಉತ್ಸಾಹಭರಿತರು ಮಾತ್ರ ತಮ್ಮ ವೃತ್ತಿ ಅಥವಾ ವ್ಯವಹಾರವನ್ನು ತಮ್ಮ ಗುರುತಾಗಿ ಪರಿವರ್ತಿಸಿಕೊಂಡು ಅದರ ಮೂಲಕ ಬೆಳೆಯುತ್ತಾರೆ.

❖ ನೀವು ಒಬ್ಬ ಉದ್ಯಮಿ ಅಥವಾ ಉದ್ಯಮಿಯಾಗಿ ಯಶಸ್ವಿಯಾಗಲು ಬಯಸಿದರೆ, ನಿಮ್ಮ ವೃತ್ತಿ ಪ್ರಯಾಣದ ಅರ್ಥವನ್ನು ಅರಿತುಕೊಳ್ಳಿ. ನೀವು ಅದರ ಬಗ್ಗೆ ಎಷ್ಟು ಉತ್ಸುಕರಾಗಿದ್ದೀರಿ ಎಂಬುದನ್ನು ಅಳೆಯಿರಿ. ನಿಮ್ಮ ಅನುಭವವು ಸಮಸ್ಯೆಗಳು ಮತ್ತು ಹೋರಾಟಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಮತ್ತು ಅವುಗಳನ್ನು ನಿವಾರಿಸಲು ನಿಮಗೆ ಸಹಾಯ ಮಾಡುತ್ತದೆ.


Pride in
Every Thread,
Heritage in
Every Weave.
RAMRAJ
SHIRTINGS & SUITINGS
COTTON • LINEN • TRADITIONAL
100% Premium Fabrics
SCAN QR CODE FOR
STORE LOCATION
Available at Ramraj Showrooms & All leading Textile Shops | Shop Online at www.ramrajcotton.in

RAMRAJ
LITTLE STARS®
KIDS DHOTIS • SHIRTS
SCAN QR CODE FOR
STORE LOCATION
Available at Ramraj Showrooms & All leading Textile Shops | Shop Online at www.ramrajcotton.in


RAMRAJ
ACHARYA
PANCHAKACHAM DHOTIS
True Spiritual
Strength Reflected
In Simplicity
SCAN QR CODE FOR
STORE LOCATION
Available at Ramraj Showrooms & All leading Textile Shops | Shop Online at www.ramrajcotton.in

RAMRAJ
mithu®
TOWELS
Softness in Every Shape, Shade & Weave.
• Bamboo Towels
• Terry Towels
• Signature Towels
• Striped & Chequered Towels
Premium Cotton & Bamboo
High absorption
Quick drying
Non-allergic to skin
Light Weight
Range of colours & patterns
Available at Ramraj Showrooms & All leading Textile Shops | Shop Online at www.ramrajcotton.in

ನಿಮ್ಮ ಮನೆಗೇ ಬರಬೇಕೇ?

ಬಿಳುಪು

ಚಂದಾದಾರರಾಗಿ!

'ಉನ್ನತವಾಧ ಭಾವನೆಗಳು ಈ ಜಗತ್ತಿನಾದ್ಯಂತ ಹೋಗಿ ಸೇರಬೇಕು' ಎನ್ನುವ ಉನ್ನತವಾದ ದೃಷ್ಟಿಯಿಂದ ಮಹತ್ವಪೂರ್ಣವಾದ ಲೇಖನಗಳನ್ನು ನಿರಂತರವಾಗಿ ಪ್ರಕಟಿಸುತ್ತಿದೆ 'ಬಿಳುಪು' ಮಾಸಿಕ ಸಂಚಿಕೆ. ಈ ತಿಂಗಳ ವಿಶೇಷ ಸಂಚಿಕೆಯು ಪ್ರತಿಯೊಂದು ಕುಟುಂಬದಲ್ಲೂ ರಕ್ಷಿಸಿಡಬೇಕಾದ ಬೊಕ್ಕಸವಾಗಿದೆ.

ವಾರ್ಷಿಕ ಚಂದಾ ರೂ. 200
ದ್ವೈವಾರ್ಷಿಕ ಚಂದಾ ರೂ. 380

ಚೆಕ್/ಡಿಡಿ ಮೂಲಕ ಹಣ ಸಂದಾಯ ಮಾಡಬಹುದು. **VENMAII** ಎನ್ನುವ ಹೆಸರಿನಲ್ಲಿ ಚೆಕ್/ಡಿಡಿ ಕಳಿಸಬಹುದು. ಹಿಂಭಾಗದಲ್ಲಿ ನಿಮ್ಮ ಹೆಸರು, ವಿಳಾಸ ಬರೆದಿರಬೇಕು.
ಇಲ್ಲವೇ

VENMAII ಬ್ಯಾಂಕ್ ಖಾತೆ (A/C No:1809135000000299 Karur Vysya Bank, Tirupur SR Nagar Branch - IFSC: KVBL0001809) ಗೆ ಹಣ ಸಂದಾಯ ಮಾಡಿ, ಅದರ ಸ್ವೀಕೃತಿ ಪತ್ರದ ನಕಲು ಪ್ರತಿಯನ್ನು ಕಳಿಸಿ ಕೊಡಬೇಕು.

- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.
- ಎಲ್ಲಾ ರಾಮ್‌ರಾಜ್ ಷೋರೂಮ್‌ಗಳಲ್ಲೂ ಚಂದಾ ಕಟ್ಟಬಹುದು.

ವಿಳಾಸ : Bilupu
Ramraj V tower
10, Sengundapuram, Mangalam Road
Thirupur 641604.
Ph. 0421-4304106, 9842274137
email: venmaii@ramrajcotton.net

ಚಂದಾ ಸಲ್ಲಿಸಲೂ, ಒಟ್ಟಾಗಿ 'ಬಿಳುಪು' ಸಂಚಿಕೆಗಳನ್ನು ಕೊಳ್ಳಲೂ ಈ ಸಂಖ್ಯೆಯನ್ನು ಸಂಪರ್ಕಿಸಿ.
ಫೋನ್ : 0421-4304106, 9842274137.

ಒಂದೇ ನಿಮಿಷದಲ್ಲಿ ಬಿಳುಪು ಚಂದಾದಾರರಾಗಬಹುದು!

ನಿಮ್ಮ ಚಂದಾ ಹಣವನ್ನು PhonePe G Pay Net transfer ಮೂಲಕವೂ ಸಲ್ಲಿಸಬಹುದು.

UPI ಪರಿವರ್ತನೆಯ ಮೂಲಕವೂ ಮೊಬೈಲ್ ಫೋನ್ ನಲ್ಲಿ ಬಿಳುಪು ಸಂಚಿಕೆಯ ಬ್ಯಾಂಕ್ ಖಾತೆಗೆ ಚಂದಾ ಹಣವನ್ನು ಸಲ್ಲಿಸಬಹುದು. ಬಿಳುಪು UPI id: kvbupiqr.75626@kvb

Bharat QR code ಅನುಕೂಲವಿರುವ ಮೊಬೈಲ್ ಬ್ಯಾಂಕಿಂಗ್ ಆಪ್ ಇರುವವರು, ಅದರಲ್ಲಿ ಇಲ್ಲಿರುವ ಬಿಳುಪು ಖಾತೆಯ QR code ಅನ್ನು ಸ್ಕ್ಯಾನ್ ಮಾಡಿ ಚಂದಾ ಸಲ್ಲಿಸಬಹುದು.

ಹಣ ಸಂದಾಯ ಮಾಡಿರುವುದಕ್ಕೆ ಸಂಬಂಧಿಸಿದ ಬ್ಯಾಂಕಿನ ಮಾಹಿತಿಯನ್ನು Forward ಮಾಡಿರಿ.

ಜೊತೆಗೆ ನಿಮ್ಮ ಪೂರ್ಣ ವಿಳಾಸವನ್ನು ದೂರವಾಣಿ ಸಂಖ್ಯೆಯ ಜೊತೆಗೆ ವಾಟ್ಸ್ ಆಪ್ ಮಾಡಿ. ದೂರವಾಣಿ ಸಂಖ್ಯೆ 98422 74137.

ಬ್ಯಾಂಕ್ ಖಾತೆಯ ವಿವರ Venmaii
A/C No: 1809135000000299
Karur Vysya Bank,Tirupur SR Nagar Branch
IFSC Code: KVBL0001809.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ

(ಆರನೇ ತರಗತಿಯ ನಂತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ರಿಯಾಯಿತಿ ಲಭ್ಯ. ಚಂದಾ ಹಣ ಪಾವತಿಸುವಾಗ, ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು).

	ವಾರ್ಷಿಕ ಚಂದಾ	ದ್ವೈವಾರ್ಷಿಕ ಚಂದಾ
~~ರೂ.200~~	ರೂ.125 ಮಾತ್ರ	~~ರೂ.380~~ ರೂ.250 ಮಾತ್ರ

ಹಿರಿಯ ನಾಗರಿಕರಿಗೆ ವಿಶೇಷ ರಿಯಾಯಿತಿ

(60 ವರ್ಷಗಳಿಗಿಂತ ಮೇಲ್ಪಟ್ಟವರು ಮಾತ್ರ ಈ ರಿಯಾಯಿತಿಯನ್ನು ಪಡೆದುಕೊಳ್ಳಬಹುದು. ತಾವು ಹುಟ್ಟಿದ ದಿನಾಂಕದ ಮಾಹಿತಿ ಇರುವ ಆಧಾರ್ ಕಾರ್ಡ್‌ನ ನಕಲನ್ನು ಇದರೊಂದಿಗೆ ಲಗತ್ತಿಸಬೇಕು).

	ವಾರ್ಷಿಕ ಚಂದಾ	ದ್ವೈವಾರ್ಷಿಕ ಚಂದಾ
~~ರೂ.200~~	ರೂ.125 ಮಾತ್ರ	~~ರೂ.380~~ ರೂ.250 ಮಾತ್ರ

ರಾಮ್‌ರಾಜ್ ಷೋರೂಂಗಳಲ್ಲಿ ರೂ. 10,000ಕ್ಕಿಂತ ಹೆಚ್ಚಾಗಿ ಕೊಳ್ಳುವವರಿಗೆ ಒಂದು ವರ್ಷದ ಚಂದಾ ಉಚಿತ.

- ಜೀವನವು ನಮಗೆ ಕೇವಲ 10 ಪ್ರತಿಶತ ಅವಕಾಶಗಳನ್ನು ನೀಡುತ್ತದೆ. ಉಳಿದ 90 ಪ್ರತಿಶತ ಯಶಸ್ಸು ನಾವು ಅವುಗಳನ್ನು ಹೇಗೆ ಉತ್ಸಾಹದಿಂದ ಬಳಸುತ್ತೇವೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

- ಜೀವನದಲ್ಲಿ ಏನೇ ನಡೆದರೂ, ಪ್ರಗತಿಯು ನಾವು ಅದನ್ನು ಎಷ್ಟು ಉತ್ಸಾಹದಿಂದ ಎದುರಿಸುತ್ತೇವೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

- ಕುತೂಹಲವಿದ್ದರೆ ಪವಾಡಗಳು ಸಂಭವಿಸುತ್ತವೆ. ಸಂತೋಷವಾಗಿದ್ದರೆ ದೊಡ್ಡ ಸಂಗತಿಗಳು ಸಂಭವಿಸುತ್ತವೆ. ದುಃಖವಾದರೆ ಎಲ್ಲವೂ ತಪ್ಪಾಗುತ್ತದೆ. ನಾವು ಹೇಗೆ ಬದಲಾಗುತ್ತೇವೆ ಎಂಬುದರ ಮೇಲೆ ಜೀವನ ಬದಲಾಗುತ್ತದೆ.

- ಮೂರು ವಿಷಯಗಳನ್ನು ಉತ್ಸಾಹದಿಂದ ಮುಂದುವರಿಸಿ. ಒಂದು ಹಣ ಸಂಪಾದಿಸಲು, ಇನ್ನೊಂದು ಬೆಳವಣಿಗೆಗಾಗಿ ಮತ್ತು ಮತ್ತೊಂದು ಸಂತೋಷಕ್ಕಾಗಿ.

- ನೀವು ಸಾಧಿಸಲು ಬಯಸುವ ಯಾವುದನ್ನಾದರೂ ಎಂದಿಗೂ ಬಿಟ್ಟು ಕೊಡಬೇಡಿ. ನಿಮ್ಮಲ್ಲಿ ಪ್ರಯತ್ನ ಮತ್ತು ಉತ್ಸಾಹವಿದ್ದರೆ, ಏನೂ ತಪ್ಪಾಗಲು ಸಾಧ್ಯವಿಲ್ಲ.

- ಕುತೂಹಲವು ನಿಮ್ಮನ್ನು ಮುನ್ನಡೆಸಿದರೆ, ಯಾವುದಾದರೂ ಕಾರಣವು ನಿಮ್ಮನ್ನು ಹಿಂಜರಿಯದಂತೆ ತಡೆಯಲಿ.

- ಈ ಜಗತ್ತಿನ ಎಲ್ಲಾ ಶ್ರೇಷ್ಠ ಸಾಧನೆಗಳನ್ನು ಕೆಲವೇ ಕೆಲವು ಉತ್ಸಾಹಭರಿತ ವ್ಯಕ್ತಿಗಳು ಸಾಧಿಸಿದ್ದಾರೆ.

- ನಿಮಗೆ ಎಷ್ಟೇ ಆಸಕ್ತಿ ಇದ್ದರೂ, ನೀವು ಇದನ್ನು ಮಾಡಬಹುದೇ ಎಂದು ಸಂದೇಹಪಟ್ಟರೆ, ನೀವು ಏನನ್ನೂ ಸಾಧಿಸಲು ಸಾಧ್ಯವಾಗುವುದಿಲ್ಲ.

- ನೀವು ನಿಮ್ಮ ಉತ್ಸಾಹವನ್ನು ಅನುಸರಿಸಿದರೆ, ಯಶಸ್ಸು ನಿಮ್ಮನ್ನು ಹಿಂಬಾಲಿಸುತ್ತದೆ.

- ಉತ್ಸಾಹದಿಂದ ಕ್ರಮ ಕೈಗೊಳ್ಳುವವರು ಮಾತ್ರ ಅಸಾಧ್ಯವೆಂದು ಭಾವಿಸುವ ಎಲ್ಲವನ್ನೂ ಸಾಧಿಸುತ್ತಾರೆ.

- ಉತ್ಸಾಹವಿಲ್ಲದೆ, ನಿಮಗೆ ಕಾರ್ಯ ನಿರ್ವಹಿಸಲು ಶಕ್ತಿ ಇರುವುದಿಲ್ಲ. ಶಕ್ತಿಯಿಲ್ಲದೆ, ಏನೂ ಆಗುವುದಿಲ್ಲ.

- ದೌರ್ಬಲ್ಯಗಳು ಮತ್ತು ವೈಫಲ್ಯಗಳಂತಹ ಅಡೆತಡೆಗಳನ್ನು ನಿವಾರಿಸಿ ಸಾಧಿಸಲು ಯಾರಿಗಾದರೂ ಸಹಾಯ ಮಾಡುವುದು ಅವರ ಉತ್ಸಾಹ ಮಾತ್ರ!

- ನೀವು ಮಾಡುವ ಕೆಲಸವನ್ನು ನೀವು ಪ್ರೀತಿಸದಿದ್ದರೆ, ಅದನ್ನು ಪೂರ್ಣ ಹೃದಯದಿಂದ ಅಥವಾ ಉತ್ಸಾಹದಿಂದ ಮಾಡಲು ನಿಮಗೆ ಸಾಧ್ಯವಾಗುವುದಿಲ್ಲ. ನಿಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ನೀವು ಒಂದು ಮಟ್ಟವನ್ನು ತಲುಪದಿದ್ದರೆ ಮತ್ತು ಸಣ್ಣ ವಿಷಯಗಳಲ್ಲಿ ತೃಪ್ತರಾಗಿದ್ದರೆ, "ಇದು ಸಾಕು" ಎಂದು ಹೇಳುತ್ತಿದ್ದರೆ, ನೀವು ಉತ್ಸಾಹಭರಿತರಲ್ಲ ಎಂದರ್ಥ.

- ನೀವು ಮಾಡುತ್ತಿರುವ ಕೆಲಸದ ಬಗ್ಗೆ ನಿಮ್ಮ ಭಯ ಮತ್ತು ಅನುಮಾನಗಳಿಗಿಂತ ನಿಮ್ಮ ಉತ್ಸಾಹ ಮತ್ತು ಪ್ರತಿಭೆ ಹೆಚ್ಚಾದರೆ, ನೀವು ಖಂಡಿತವಾಗಿಯೂ ಯಶಸ್ವಿಯಾಗುತ್ತೀರಿ.

- "ಇದು ನನ್ನ ಜೀವನದ ಅರ್ಥ" ಎಂದು ನೀವು ಅರಿತು–ಕೊಂಡಿದ್ದರೆ, ನಿಮ್ಮನ್ನು ಯಾರೂ ಪ್ರೇರೇಪಿಸುವ ಅಗತ್ಯವಿಲ್ಲ. ಉತ್ಸಾಹವು ನಿಮ್ಮನ್ನು ಮುನ್ನಡೆಸುತ್ತದೆ.

- ಯಾವುದೇ ಆಸೆ ಇಲ್ಲದೆ ಕೆಲಸ ಮಾಡುವುದರಿಂದ ಒತ್ತಡ ಬರುತ್ತದೆ. ಅದೇ ಕೆಲಸವನ್ನು ಉತ್ಸಾಹದಿಂದ ಮಾಡುವುದರಿಂದ ಯಶಸ್ಸು ಸಿಗುತ್ತದೆ.

- ನೀವು ಯಾವುದರ ಬಗ್ಗೆ ಆಸಕ್ತಿ ಹೊಂದಿದ್ದೀರಿ ಎಂಬುದನ್ನು ಕಂಡುಕೊಳ್ಳಿ. ಅದನ್ನು ಮುಂದುವರಿಸಿ. ಅದನ್ನು ಸಾಧಿಸುವ ಕನಸು ಕಾಣಿ. ಅದಕ್ಕಾಗಿ ಬದುಕಿ.

- ನೀವು ಮಾಡುವ ಕೆಲಸವನ್ನು ಉತ್ಸಾಹದಿಂದ ಮಾಡಿದರೆ, ನಿಮಗೆ ಅದರಲ್ಲಿ ಹೆಚ್ಚಿನ ಆಸಕ್ತಿ ಇದೆ ಎಂದರ್ಥ.

- ನೀವು ಮಾಡುವ ಕೆಲಸದ ಬಗ್ಗೆ ಉತ್ಸಾಹ ಹೊಂದಿದ್ದರೆ, ಅದರಲ್ಲಿ ಮುನ್ನಡೆಯುತ್ತೀರಿ ಎಂಬ ನಂಬಿಕೆಯನ್ನು ಹೊಂದಿದ್ದರೆ ಮತ್ತು ಕಷ್ಟಪಟ್ಟು ಕೆಲಸ ಮಾಡಿದರೆ, ನೀವು ಜೀವನದಲ್ಲಿ ಏನು ಬೇಕಾದರೂ ಸಾಧಿಸಬಹುದು.

- ಎಲ್ಲರೂ ಸಾಧ್ಯವಿಲ್ಲ ಎಂದು ನಿರ್ಧರಿಸುವ ವಿಷಯದಲ್ಲಿ ಏನನ್ನಾದರೂ ನೀವು ಸಾಧಿಸುತ್ತಿದ್ದರೆ, ಅದರರ್ಥ ನೀವು ಉತ್ಸಾಹದಿಂದ ನಡೆಸುತ್ತಿದ್ದೀರಿ ಎಂದರ್ಥ.

- "ಎಂದಿಗೂ ಆರದ ದೀಪ ಬೇರಾವುದೂ ಅಲ್ಲ. ಅದು ನಿಮ್ಮೊಳಗೆ ಬೆಂಕಿಯಂತೆ ಉರಿಯುವ ಉತ್ಸಾಹ."

- ನಿಮ್ಮ ಉತ್ಸಾಹವನ್ನು ಪಂಜರದಲ್ಲಿ ಬಂಧಿಸಬೇಡಿ. ಆಗ ನೀವು ಎಂದಿಗೂ ಮುಕ್ತವಾಗಿ ಸಾಧಿಸಲು ಸಾಧ್ಯವಾಗುವುದಿಲ್ಲ.

- ಮೊದಲು, ನೀವು ಉತ್ಸಾಹದಿಂದ ಮಾಡುವ ಕೆಲಸದಲ್ಲಿ ಯಶಸ್ವಿಯಾಗಬಹುದು ಎಂದು ನಂಬಿರಿ. ಆಗ ಮಾತ್ರ ನೀವು ಸಹ ಅದನ್ನು ಮಾಡಬಹುದು ಎಂದು ಇತರರು ನಂಬುತ್ತಾರೆ.

- ಯಶಸ್ಸಿನ ಬಾಯಾರಿಕೆಯೇ ನಿಮ್ಮ ಜೀವನದ ಪ್ರಯಾಣದ

ಆಸಕ್ತಿ ನುಡಿಗಳು!

ಅರ್ಥವಾಗಿರುತ್ತದೆ ಮತ್ತು ನಿಮ್ಮ ಉತ್ಸಾಹವೇ ಮಾರ್ಗದರ್ಶಕ ಬೆಳಕಾಗಿರುತ್ತದೆ.

- ಜೀವನದಲ್ಲಿ ಎಲ್ಲವನ್ನೂ ತಾವು ಉತ್ಸಾಹದಿಂದ ಮಾಡುವ ಕೆಲಸಕ್ಕೆ ಮೀಸಲಿಡುವವರಿಗೆ ಯಶಸ್ಸು ಕಾಯುತ್ತಿರುತ್ತದೆ.
- ಉತ್ಸಾಹ ಮತ್ತು ಧೈರ್ಯ ಒಟ್ಟಿಗೆ ಸೇರಿದಾಗ, ನೀವು ಮನಸ್ಸು ಮಾಡಿದ ಯಾವುದೇ ಸಾಧನೆಯನ್ನು ಮಾಡಬಹುದು.
- ನಿಮ್ಮ ಜೀವನವನ್ನು ಬದಲಾಯಿಸಬಲ್ಲ ಶಕ್ತಿ, ತಾಳ್ಮೆ, ಪ್ರತಿಭೆ ಮತ್ತು ಉತ್ಸಾಹ ನಿಮ್ಮೊಳಗೆ ಇದೆ.
- ಕನಸುಗಳು ಮತ್ತು ಅವುಗಳನ್ನು ನನಸಾಗಿಸುವಲ್ಲಿ ನಾವು ತೋರಿಸುವ ಉತ್ಸಾಹವು ನಮ್ಮ ಕಣ್ಣ ಮುಂದೆ ಕಾಣುವ ವಾಸ್ತವಕ್ಕಿಂತ ದೊಡ್ಡದು.
- ನಾವು ಒಂದು ಕೆಲಸವನ್ನು ಉತ್ಸಾಹದಿಂದ ಮಾಡಿದಾಗ, ನಾವು ನಮ್ಮ ಬಗ್ಗೆ ಉನ್ನತವಾಗಿ ಯೋಚಿಸುತ್ತೇವೆ ಮತ್ತು ನಾವಿರುವ ಪರಿಸರವನ್ನು ಸಕಾರಾತ್ಮಕವಾಗಿ ಸಮೀಪಿಸುತ್ತೇವೆ.
- ನೀವು ನಿಮ್ಮ ಜೀವನವನ್ನು ಮತ್ತು ನೀವು ಆಯ್ಕೆ ಮಾಡಿಕೊಳ್ಳುವ ಅವಕಾಶಗಳನ್ನು ಬದಲಾಯಿಸಬಹುದು. ನಿಮ್ಮ ಉತ್ಸಾಹವನ್ನು ಕಂಡುಕೊಳ್ಳಿ ಮತ್ತು ಅದನ್ನು ಪರಿವರ್ತಿಸಿ.
- ನೀವು ಮಾಡುವುದನ್ನು ಪ್ರೀತಿಸಿ ಮತ್ತು ನೀವು ಇಷ್ಟಪಡುವುದನ್ನು ಮಾಡಿ. ಅದನ್ನು ಉತ್ಸಾಹದಿಂದ ಮಾಡುವುದರಿಂದ ನೀವು ಶ್ರೀಮಂತರಾಗುತ್ತೀರಿ.
- ನೀವು ಎಷ್ಟೇ ಬಾರಿ ವಿಫಲರಾದರೂ, ನಿಮಗೆ ಆಸಕ್ತಿಯಿರುವ ಕೆಲಸವನ್ನು ಮತ್ತೆ ಅದೇ ಉತ್ಸಾಹದಿಂದ ಮಾಡಬಹುದು.
- ನಿಮ್ಮ ಊರಿಗೆ ಹೋಗುವ ಕೊನೆಯ ಬಸ್ ಹಿಡಿಯಲು ಹೇಗೆ ಉತ್ಸಾಹದಿಂದ ಓಡುವಿರೋ ಅದೇ ಉತ್ಸಾಹದಿಂದಲೇ ಕೆಲಸ ಮಾಡಿ.
- ಧೈರ್ಯವು ನಿಮ್ಮನ್ನು ಮುನ್ನಡೆಸಲಿ, ಉತ್ಸಾಹವು ನಿಮ್ಮನ್ನು ಮುನ್ನಡೆಸಲಿ. ಯಾವುದೇ ಪ್ರಯತ್ನದಲ್ಲಿ ಯಶಸ್ಸನ್ನು ಸಾಧಿಸಲು ಸಾಧ್ಯವಿದೆ.
- ನೀವು ಮಾಡುವ ಕೆಲಸದ ಬಗ್ಗೆ ಉತ್ಸಾಹವನ್ನು ಸೃಷ್ಟಿಸಿಕೊಳ್ಳಬೇಕು. ನೀವು ಅದನ್ನು ಬೇರೆಯವರಿಂದ ಎರವಲು ಪಡೆಯಲು ಸಾಧ್ಯವಿಲ್ಲ. ●

ಆಸಕ್ತಿಯಿಂದ ಸಂತೋಷ ದೊರಕುತ್ತದೆ!

ಮಕ್ಕಳು ಪ್ರಾಥಮಿಕ ಶಾಲೆಗೆ ಹೋಗುವಾಗ ಹೇಳುತ್ತಾರೆ: 'ಶಾಲಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದರೆ, ಮುಂದೆ ನೀವು ಜೀವನದಲ್ಲಿ ಸಂತೋಷವಾಗಿರಬಹುದು' ಎಂದು. ನೀವು ಪ್ರೌಢಶಾಲೆಗೆ ಹೋದಾಗ, ಅವರೇ ಹೇಳುತ್ತಾರೆ: 'ನೀವು ಪ್ರೌಢಶಾಲಾ ವ್ಯಾಸಂಗ ಮುಗಿಸಿ ಕಾಲೇಜಿಗೆ ಹೋದರೆ, ನೀವು ಸಂತೋಷವಾಗಿರಬಹುದು' ಎಂದು. ನೀವು ಶಾಲೆ ಮುಗಿಸಿ ಕಾಲೇಜಿಗೆ ಹೋದಾಗ ಹೇಳುತ್ತಾರೆ: 'ನೀವು ಪದವಿ ಪಡೆದು ಕೆಲಸಕ್ಕೆ ಸೇರಿಕೊಂಡರೆ, ನೀವು ಸಂತೋಷವಾಗಿರಬಹುದು' ಎಂದು.

ದಿಗಂತವನ್ನು ಮುಟ್ಟಲು ಹೋದಾಗ ಅದು ಇನ್ನೂ ದೂರದೂರವಾಗುವ ಹಾಗೆ ತೋರುವಂತೆಯೇ, ಸಂತೋಷವೂ ಪ್ರತಿ ಹೆಜ್ಜೆಯಲ್ಲೂ ದೂರವಾಗುತ್ತಲೇ ಇರುತ್ತದೆ.

ವಾಸ್ತವವಾಗಿ, ಈ ರೀತಿ ಸಂತೋಷವನ್ನು ಹುಡುಕುವುದು ತಪ್ಪು. 'ಏನನ್ನಾದರೂ ಜಯಿಸಿದ ನಂತರ ಬರುವುದು ಸಂತೋಷ' ಎಂದು ನಾವು ಭಾವಿಸಬಾರದು. ನಾವು ಪ್ರತಿ ಹಂತವನ್ನೂ ಸಂತೋಷದಿಂದ ಜಯಿಸಬೇಕು. ಉತ್ಸಾಹವು ಅದಕ್ಕೆ ಸಹಾಯ ಮಾಡುತ್ತದೆ. ಅವರು ದೂರದರ್ಶನದಲ್ಲಿ ಅಡುಗೆ ಕಾರ್ಯಕ್ರಮವನ್ನು ನಡೆಸುತ್ತಾರೆ. ಆದರೆ ನಾವು ಮನೆಯಲ್ಲಿ ಇರುವುದನ್ನು ಬಳಸಿ ರುಚಿಕರವಾದ ಊಟವನ್ನು ತಯಾರಿಸಬೇಕು. ಅದು ಸ್ಪರ್ಧೆ. ಈ ರೀತಿಯಾಗಿ, ನಾವು ಇರುವುದರಲ್ಲೇ ಹೊಂದಿಕೊಂಡು ಸಂತೋಷವಾಗಿರಲು ಒಗ್ಗಿಕೊಳ್ಳಬೇಕು. ಸಂತೋಷವು ಒಂದು ನಿರ್ದಿಷ್ಟ ಸ್ಥಳವನ್ನು ತಲುಪುವುದರಿಂದ ಬರುವುದಿಲ್ಲ. ಅದನ್ನು ತಲುಪುವ ಪ್ರಯಾಣದಲ್ಲಿ ನಾವು ಅನಂತ ಸಂತೋಷವನ್ನು ಕಂಡುಕೊಳ್ಳುತ್ತೇವೆ.

ಸಮಯದ ಮೇಲಿನ ಆಸಕ್ತಿಯು ಪ್ರತಿ ಕ್ಷಣವನ್ನೂ ಸಂತೋಷದಿಂದ ಕಳೆಯಲು ನಮಗೆ ಸಹಾಯ ಮಾಡುತ್ತದೆ. ಬಾಲ್ಯದಿಂದಲೇ ಶಿಕ್ಷಣ ಮತ್ತು ಕೆಲಸದ ಬಗ್ಗೆ ಆಸಕ್ತಿ ಮೂಡಿಸಿಕೊಳ್ಳಬಹುದು. ಅದು ಸುಲಭ. 'ನೀವು ದೊಡ್ಡವರಾದ ಮೇಲೆ ಏನಾಗಲು ಬಯಸುತ್ತೀರಿ?' ಎಂದು ಕೇಳಿದರೆ ಎಲ್ಲರೂ ಹೇಳುತ್ತಾರೆ: ವೈದ್ಯ, ಎಂಜಿನಿಯರ್, ಐಸ್‌ಕ್ರೀಮ್ ವ್ಯಾಪಾರಿ.... ಹೀಗೆ ಪ್ರತಿಯೊಬ್ಬರ ಉತ್ತರವೂ ವಿಭಿನ್ನ ರೀತಿಯಲ್ಲಿ ಇರುತ್ತದೆ. ಮಕ್ಕಳು ಬೆಳೆದಂತೆ ಅವರ ಆದ್ಯತೆಗಳೂ ಬದಲಾಗುತ್ತವೆ. ನಾವು ವಯಸ್ಕರಿಗೆ, 'ಅವರು ಬಯಸಿದ್ದನ್ನು ಮಾಡಿ' ಎಂದು ಹೇಳುವಂತೆಯೇ, ಮಕ್ಕಳಿಗೂ 'ಅವರು ಮಾಡುವುದನ್ನು ಪ್ರೀತಿಸುವಂತೆ' ಬೆಳೆಸಬಹುದು.

ಬೆಳೆಯುವ ವಯಸ್ಸಿನಲ್ಲಿ ಮಕ್ಕಳಲ್ಲಿ ಆಸಕ್ತಿಯನ್ನು ಉತ್ತೇಜಿಸಲು ನಾವು ಕೆಲವು ಕೆಲಸಗಳನ್ನು ಮಾಡಬೇಕಾಗಿದೆ.

◆ ಅವರಿಗೆ ತಮ್ಮ ಕಾರ್ಯಗಳು ಮತ್ತು ಆಲೋಚನೆಗಳಲ್ಲಿ ಸ್ವಾತಂತ್ರ್ಯವಿರಬೇಕು. ಅವರು ಯಾವುದೇ ಕೆಲಸವನ್ನು ವಿಭಿನ್ನ ರೀತಿಯಲ್ಲಿ ಮಾಡುವ ಸಾಮರ್ಥ್ಯವನ್ನು ಹೊಂದಿರಬೇಕು. ಯಾವಾಗ ಯಾವುದನ್ನು ತ್ವರಿತವಾಗಿ ಮಾಡಬೇಕು, ಯಾವಾಗ ನಿಧಾನವಾಗಿ ಮಾಡಬೇಕು, ಯಾವಾಗ ಪ್ರಾರಂಭಿಸಬೇಕು ಮತ್ತು ಯಾವ ಹಂತದಲ್ಲಿ ಮುಗಿಸಬೇಕು ಎಂಬುದನ್ನು ಅವರು ತಿಳಿದಿರಬೇಕು.

◆ ಅವರು ಒಂದೇ ಕೆಲಸವನ್ನು ಪದೇ ಪದೇ ಮಾಡಿದಾಗ, ಅವರು ಗಾಣದೆತ್ತಿನಂತೆ ಆಗುತ್ತಾರೆ. ಯಾವುದೇ ಹೊಸ ಆಲೋಚನೆಗಳು ಅವರಲ್ಲಿ ಹೊರಹೊಮ್ಮುವುದಿಲ್ಲ. ಮಕ್ಕಳಾಗಿರುವಾಗಲೇ ಅವರಿಗೆ ವಿಭಿನ್ನ ಚಟುವಟಿಕೆಗಳಲ್ಲಿ ತರಬೇತಿ ನೀಡಬೇಕಾಗುತ್ತದೆ. ಅದು ಅವರಲ್ಲಿ ಆಸಕ್ತಿಯನ್ನು ಸೃಷ್ಟಿಸುತ್ತದೆ.

◆ ಸವಾಲಿನದ್ದಲ್ಲದ ಸರಳ ಗುರಿಗಳು ಬೆಳವಣಿಗೆಗೆ ದಾರಿ ತೋರಿಸುವುದಿಲ್ಲ. ಅವರಿಗೆ ಉನ್ನತ ಗುರಿಗಳನ್ನು ತೋರಿಸಿ. ಅವರು ಅವುಗಳ ಕಡೆಗೆ ಓಡುತ್ತಲೇ ಇರುತ್ತಾರೆ.

◆ ಅವರು ಉನ್ನತ ಗುರಿಗಳನ್ನು ಸಾಧಿಸಿದಾಗ, ಅವರಿಗೆ ಅದರ ಫಲ ಮತ್ತು ಪ್ರಯೋಜನಗಳು ಸಿಗಬೇಕು. ಉತ್ತಮ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗೆ ಅವನು ಬಯಸುವ ಶಿಕ್ಷಣವನ್ನು ನೀಡಬೇಕು. ಕೆಲಸದಲ್ಲಿ ಪ್ರತಿಭೆಯನ್ನು ತೋರಿಸುವ ಯುವಕನಿಗೆ ಸೂಕ್ತ ಪ್ರೋತ್ಸಾಹ, ಸಂಬಳ ಹೆಚ್ಚಳ ಮತ್ತು ಬಡ್ತಿಗಳು ಸಿಗಬೇಕು. ಇಲ್ಲದಿದ್ದರೆ, ಅದರಲ್ಲಿರುವ ಆಸಕ್ತಿ ಬೇಗನೆ ಕಣ್ಮರೆಯಾಗುತ್ತದೆ.

●

RAMRAJ
COTTON
CULTURE OF INDIA

ENES
TEXTILE MILLS
Ramraj-V-Tower, 10, Sengunthapuram,
Mangalam Road, Tirupur - 641 604.
Ph : 0421 - 4304147,
web : www.ramrajcotton.in

ರಾಮ್‌ರಾಜ್
ಕಾಟನ್
ಭಾರತೀಯ ಸಂಸ್ಕೃತಿ

ದಾನಗಳಲ್ಲಿ ವಸ್ತ್ರದಾನ ಶ್ರೇಷ್ಠವಾದುದು

ಪ್ರೀತಿಯಿಂದ,

ಬಾಳ್ಗೆ ಸಮೃದ್ಧಿಯೊಂದಿಗೆ.

ದಾನಗಳಲ್ಲಿ ಅನ್ನದಾನ, ಗೋದಾನ, ಭೂದಾನ ಹೀಗೆ ಹದಿನಾರು ಬಗೆಯ ದಾನಗಳಿದ್ದರೂ, ಮನುಷ್ಯರಾದವರು ತಮ್ಮ ಜೀವಕ್ಕಿಂತ ಹೆಚ್ಚಿನದೆಂದು ಭಾವಿಸುವ, ಅವರ 'ಮಾನ'ವನ್ನು ಕಾಪಾಡುವ ವಸ್ತ್ರಗಳನ್ನು ದಾನವಾಗಿ ನೀಡುವುದು ಅತ್ಯುತ್ತಮವೆಂದು ಪರಿಗಣಿಸಲಾಗಿದೆ,

ನಮ್ಮ ವೇದಗಳು ವಸ್ತ್ರದಾನದ ಬಗ್ಗೆ ಬಹಳ ಚೆನ್ನಾಗಿ ವಿವರಿಸುತ್ತವೆ. ಎಲ್ಲಾ ದೇವತೆಗಳೂ ಹೊಸವಸ್ತ್ರಗಳಲ್ಲಿ ವಾಸವಾಗಿರುತ್ತಾರಂತೆ. 'ಅಂಚು'ಗಳಿರುವ ವಸ್ತ್ರಗಳನ್ನು ದಾನ ಮಾಡುವಾಗ.... ದಾನ ಮಾಡುವವರು ಮತ್ತು ಅವರ ವಂಶಸ್ಥರು ದೀರ್ಘಕಾಲ ಬದುಕಲಿ ಎಂದು ಆ ವಸ್ತ್ರಗಳಲ್ಲಿ ವಾಸಿಸುವ ದೇವತೆಗಳು ಹರಸುತ್ತಾರಂತೆ! ಆ ವಸ್ತ್ರಗಳನ್ನು ದಾನ ಪಡೆಯುವವರೂ, ನೀಡುವವರನ್ನು ಹೀಗೆಯೇ ಹರಸುವಾಗ ಆ ಹಾರೈಕೆಗಳು ದುಪ್ಪಟ್ಟಾಗುತ್ತವೆ. ಹೀಗೆ ಹಾರೈಕೆಗಳು ಹಲವು ಪಟ್ಟು ಹೆಚ್ಚಾಗುವುದರಿಂದ ವಸ್ತ್ರ ದಾನ ಮಾಡುವವರಿಗೆ ಅದು ಹಲವು ಬಗೆಯ ಒಳಿತುಗಳನ್ನು ತರುತ್ತದೆ.

ನೇಯ್ಗೆಯ ಮೂಲಕವೂ, ನೇಕಾರರ ಮೂಲಕವೂ ನಾವು ಅನೇಕ ತತ್ವಗಳನ್ನು ತಿಳಿಯಬಹುದು. ಪುರುಷರಲ್ಲೂ ಸ್ತ್ರೀತನವಿರುತ್ತದೆ, ಮಹಿಳೆಯರಲ್ಲೂ ಪುರುಷತನವಿರುತ್ತದೆ. ಇದನ್ನು ವಿಜ್ಞಾನ ನಿರೂಪಿಸುವುದಕ್ಕಿಂತ ಎಷ್ಟೋ ಮೊದಲೇ ನಮ್ಮ ಆಧ್ಯಾತ್ಮ ಸಿದ್ಧಾಂತಗಳು 'ಅರ್ಧನಾರೀಶ್ವರ' ಪರಿಕಲ್ಪನೆಯ ಮೂಲಕ ಇದನ್ನು ನಮಗೆ ತಿಳಿಸಿಕೊಟ್ಟಿವೆ. ಧೋತಿಯಾಗಿರಲಿ ಅಥವಾ ಸೀರೆಯಾಗಿರಲಿ, ಇವೆರಡರಲ್ಲೂ ಸಣ್ಣಸಣ್ಣದಾದ ಅಡ್ಡವಾಗಿರುವ ನೂಲಿನ ಎಳೆಗಳೂ(ಊಡೆ) ಹಾಗೂ ನೇರವಾದ ಉದ್ದನೆಯ ಎಳೆ(ಪಾವು)ಗಳೂ ಇರುತ್ತವೆ. ವಸ್ತ್ರಗಳಲ್ಲಿ ಹೀಗೆ ಉದ್ದವಾಗಿರುವ ನೂಲಿನ ಎಳೆಯನ್ನು ಸ್ತ್ರೀ ಎಂದೂ; ಅದರ ನಡುವೆ ಅಡ್ಡವಾಗಿ ಬರುವ ಸಣ್ಣ ಸಣ್ಣ ಎಳೆಯನ್ನು ಗಂಡು ಎಂದೂ ಗುರುತಿಸಲಾಗುತ್ತದೆ. ಜೀವನದಲ್ಲಿ ಮಹಿಳೆಯರೇ ಅತಿ ಮುಖ್ಯ ಪಾತ್ರವನ್ನು ವಹಿಸುತ್ತಾರೆ ಎಚಿಬುದನ್ನು ಇದು ಸಾಂಕೇತಿಕವಾಗಿ ತೋರಿಸುತ್ತದೆ. ಆ ಕಾರಣದಿಂದಾಗಿಯೇ ಕೌಟುಂಬಿಕ ಜೀವನದಲ್ಲಿ ನಡೆಯುವ ಎಲ್ಲಾ ಮಂಗಳಕರ ಚಟುವಟಿಕೆಗಳಲ್ಲೂ ಮಹಿಳೆಯರಿಗೇ ಮೊದಲ ಆದ್ಯತೆ ನೀಡಲಾಗುತ್ತದೆ. 'ಲೇಡೀಸ್ ಫರ್ಸ್ಟ್' ಎನ್ನುವ ಇಂಗ್ಲಿಷ್ ಗಾದೆಯೂ ಇದನ್ನನುಸರಿಸಿಯೇ ಹುಟ್ಟಿಕೊಂಡಿರುವುದು.

ಗಂಡು ಮತ್ತು ಹೆಣ್ಣು ಇಬ್ಬರೂ ಸೇರಿ ನೇಯುವುದೇ ಕೌಟುಂಬಿಕ ಜೀವನ ಎಂಬುದು ನಿಜವಾದ ಮಾತು. ಈ ತತ್ವವನ್ನೇ ಧೋತಿ, ಸೀರೆ ಇತ್ಯಾದಿ ವಸ್ತ್ರಗಳೂ ವ್ಯಕ್ತಪಡಿಸುತ್ತವೆ. ಈ ಕಾರಣದಿಂದಾಗಿಯೇ ಹಬ್ಬಹರಿದಿನಗಳು ಮತ್ತು ಶುಭ ಸಂದರ್ಭಗಳಲ್ಲಿ ಪರಸ್ಪರ ಧೋತಿ, ಸೀರೆ ಇತ್ಯಾದಿ ವಸ್ತ್ರಗಳನ್ನು ದಾನ ನೀಡುವ ಸಾಂಪ್ರದಾಯವು ನಮ್ಮಲ್ಲಿ ರೂಢಿಗೆ ಬಂದಿರುವುದು.

ಪ್ರಪಂಚದಲ್ಲೇ ಒತ್ತೊತ್ತಾಗಿ ಹೆಣೆದ ಮೊದಲ ಅಂತರಜಾಲ ಸೇವೆ ಎಂಬುದು ಈ ಸೀರೆ ಮತ್ತು ಪಂಚೆಗಳ ಹೆಣಿಗೆಯೇ ಆತದೆ. ಅದುದರಿಂದಲೇ ಬದುಕಿನ ಪೂರ್ವಾಪರಗಳಿಗೆ ಸಂಬಂಧಿಸಿದ ಎಲ್ಲಾ ಪ್ರಾಚೀನ ಆಚರಣೆಗಳಲ್ಲೂ ವಸ್ತ್ರಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಇವುಗಳೊಂದಿಗೆ ದಾನಗಳಲ್ಲಿ ವಸ್ತ್ರ ದಾನವು ಶ್ರೇಷ್ಠವಾದುದು ಎಂಬುದನ್ನೂ ರೂಢಿಗೆ ತರಲಾಗಿದೆ.

ಸಮೃದ್ಧಿಯೊಂದಿಗೆ ಬಾಳಿರಿ ಎಂದು ಸಂತೋಷದಿಂದ ಹಾರೈಸುತ್ತೇವೆ!

ಇಂತೀ

ರಾಮರಾಜ್ ಗ್ರೂಪ್

LITTLE STARS KIDS DHOTIS + SHIRTS
GENXT READYMADE POCKET DHOTIS
lagnaa PURE SILK DHOTIS | SHIRTS
LINEN PARK PURE LINEN SHIRTS & FABRICS
CULTURE CLUB MATCHING DHOTIS & SHIRTS

ಕೆಲಸವೇ

ನಿಮ್ಮ ಆಸಕ್ತಿಯಾಗಿ ಬದಲಾಗಲಿ!

ಒಂದು ಕ್ಷೇತ್ರದಲ್ಲಿ ಒಬ್ಬರಿಗೆ ಆಸಕ್ತಿ ಇರುತ್ತದೆ... ಆದರೆ ಅವರು ಅಧ್ಯಯನ ಮಾಡಿದ ಕ್ಷೇತ್ರ ಬೇರೆಯದಾಗಿರುತ್ತದೆ... ಅವರು ಮಾಡುವ ಕೊನೆಯ ಕೆಲಸವೆಂದರೆ ಎರಡಕ್ಕೂ ಸಂಬಂಧವಿಲ್ಲದ ಕ್ಷೇತ್ರದಲ್ಲಿ ಕೆಲಸ ಮಾಡುವುದು. ಅನೇಕ ಭಾರತೀಯ ಯುವಕರಿಗೆ ಇದು ಸಂಭವಿಸುತ್ತದೆ. ತಮ್ಮ ಅಧ್ಯಯನದಲ್ಲಿ ಆಸಕ್ತಿ ಬೆಳೆಸಿಕೊಂಡು ಕೆಲಸ ಮಾಡುವವರು ಹೊಳೆಯುತ್ತಾರೆ. ಅದನ್ನೂ ಮೀರಿ, ತಮಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಹೇಗಾದರೂ ಪ್ರವೇಶಿಸಿ ಅಲ್ಲಿ ಕೆಲಸ ಮಾಡುವವರು ಹೆಚ್ಚಿನ ಎತ್ತರವನ್ನು ತಲುಪುತ್ತಾರೆ. ಅಂತಹ ಕೆಲವು ಸಾಧಕರು ಇದೋ ಇಲ್ಲಿದ್ದಾರೆ:

ಎಲಾನ್ ಮಸ್ಕ್ : ತಂತ್ರಜ್ಞಾನದ ಬಗ್ಗೆ ಉತ್ಸಾಹ ಹೊಂದಿರುವ ಕ್ರಿಯಾಶೀಲ ವ್ಯಕ್ತಿ ಎಲಾನ್ ಮಸ್ಕ್. ಇವರು ವಿಶೇಷವಾಗಿ, ಚಿಕ್ಕ ವಯಸ್ಸಿನಿಂದಲೂ ಎಲೆಕ್ಟ್ರಿಕ್ ಕಾರುಗಳು ಮತ್ತು ಬಾಹ್ಯಾಕಾಶ ವಾಹನಗಳನ್ನು ನಿರ್ಮಿಸುವಲ್ಲಿ ಆಸಕ್ತಿ ಹೊಂದಿದ್ದರು. ಆ ಉತ್ಸಾಹವೇ ಅವರನ್ನು ಸ್ಪೇಸ್ ಎಕ್ಸ್ ಸಂಸ್ಥೆಯನ್ನು ರಚಿಸಲು ಪ್ರೇರೇಪಣೆ ನೀಡಿತು. ಇಂದು, ಆ ಕಂಪನಿಯು ಅನೇಕ ಉಪಗ್ರಹಗಳನ್ನು ನಿರ್ಮಿಸಿ ಬಾಹ್ಯಾಕಾಶಕ್ಕೆ ಉಡಾಯಿಸುತ್ತಿದೆ. ಅಮೇರಿಕನ್ ಬಾಹ್ಯಾಕಾಶ ಸಂಸ್ಥೆ ನಾಸಾ ತನ್ನ ಬಾಹ್ಯಾಕಾಶ ಯೋಜನೆಗಳಿಗೆ ಎಲಾನ್ ಮಸ್ಕ್ ಅವರ ಕಂಪನಿಯನ್ನು ಬಳಸಿಕೊಳ್ಳುತ್ತದೆ. ಅದೇ ರೀತಿ, ಅವರು ರಚಿಸಿದ ಟೆಸ್ಲಾ ಕಾರು, ಚಾಲಕರಹಿತ ತಂತ್ರಜ್ಞಾನ ಹೊಂದಿರುವ ಎಲೆಕ್ಟ್ರಿಕ್ ಕಾರುಗಳು ಕೂಡ ಅಮೆರಿಕದಲ್ಲಿ ಸಂಚಲನ ಮೂಡಿಸಿದೆ.

ರೇ ಕ್ರಾಕ್ : ವಿಶ್ವಪ್ರಸಿದ್ಧ ಆಹಾರ ಕಂಪನಿ ಮೆಕ್‌ಡೊನಾಲ್ಡ್ ಅನ್ನು ವಿಶ್ವಪ್ರಸಿದ್ಧಗೊಳಿಸಿದ ವ್ಯಕ್ತಿ ರೇ ಕ್ರಾಕ್. ಅಮೆರಿಕದ ಒಂದು ಸಣ್ಣ ಪಟ್ಟಣದಲ್ಲಿ ಬರ್ಗರ್‌ಗಳನ್ನು ಮಾರಾಟ ಮಾಡುತ್ತಿದ್ದ ಒಂದು ಸಣ್ಣ ಬೇಕರಿಯಂತಹ ಕಂಪನಿಯನ್ನು ಪ್ರಪಂಚದಾದ್ಯಂತ ನೂರಕ್ಕೂ ಹೆಚ್ಚು ದೇಶಗಳಿಗೆ ಇವರು ವಿಸ್ತರಿಸಿದರು. ಈ ಕಂಪನಿಯನ್ನು ಬೇರೆ ಯಾರೋ ಇಬ್ಬರು ಆರಂಭಿಸಿದ್ದರು. ಅದಕ್ಕೆ ಮೆಕ್‌ಡೊನಾಲ್ಡ್ ಎಂಬ ಹೆಸರಿಟ್ಟು ಅದನ್ನು ಯಶಸ್ವೀ ಬ್ರ್ಯಾಂಡ್ ಆಗಿ ಪರಿವರ್ತಿಸಿದವರು ಮತ್ತು ಅನೇಕ ನಗರಗಳಲ್ಲಿ ಅದರ ಶಾಖೆಗಳನ್ನು ತೆರೆದವರು ರೇ ಕ್ರಾಕ್. ತಮ್ಮ 50ನೇ ವಯಸ್ಸಿನ ನಂತರ ಅವರು ತಮ್ಮಲ್ಲಿದ್ದ ಉತ್ಸಾಹದ ಕಾರಣದಿಂದ ಇದನ್ನು ಸಾಧಿಸಿದರು. ಇಂದು, ಪ್ರಪಂಚದಾದ್ಯಂತದ ಮೆಕ್‌ಡೊನಾಲ್ಡ್ ಶಾಖೆಗಳಲ್ಲಿ ಒಂದು ಮಿಲಿಯನ್‌ಗಿಂತಲೂ ಹೆಚ್ಚು ಜನರು ಕೆಲಸ ಮಾಡುತ್ತಿದ್ದಾರೆ. ಅದರಿಂದಲೇ ಅದರ ಭವ್ಯತೆಯನ್ನು ಅರ್ಥ ಮಾಡಿಕೊಳ್ಳಬಹುದು.



ಬಿಲ್ ಗೇಟ್ಸ್ : ಚಿಕ್ಕ ವಯಸ್ಸಿನಲ್ಲಿ ಸರಿಯಾಗಿ ಓದು ತಲೆಗೆ ಹತ್ತದಿದ್ದರೂ, ಬಿಲ್ ಗೇಟ್ಸ್ ಅವರಿಗೆ ಕಂಪ್ಯೂಟರ್ ಬಗ್ಗೆ ಅಪಾರ ಆಸಕ್ತಿ ಇತ್ತು. ಅವರು ಓದಿದ ಶಾಲೆಯು ಅವರ ಉತ್ಸಾಹವನ್ನು ಕಂಡು ಅದರಲ್ಲೇ ಅವರು ಮುಂದುವರೆಯಲು ಅಗತ್ಯವಾದ ಅವಕಾಶ ಮಾಡಿಕೊಟ್ಟಿತು. ಅವರು ತರಗತಿಗಳನ್ನು ಬಿಟ್ಟು ಪ್ರಯೋಗಾಲಯದಲ್ಲಿ ಕುಳಿತು ಕಂಪ್ಯೂಟರ್‌ಗಳ ಬಗ್ಗೆ ಸಂಶೋಧನೆ ನಡೆಸುತ್ತಿದ್ದರು. ಚಿಕ್ಕ ವಯಸ್ಸಿನಲ್ಲೇ ಅವರು ಕಂಪ್ಯೂಟರ್ ಪ್ರೋಗ್ರಾಂಗಳನ್ನು ಬರೆದರು. ವಿಡಿಯೋ ಗೇಮ್‌ಗಳನ್ನು ರಚಿಸಿದರು. ಮುಂದೆ ಕಂಪ್ಯೂಟರ್‌ಗಳು ವಾನ್ ವಾನ್ ಂಂ ವಸ್ತುವಾಗುತ್ತವೆ ಎಂದು ಭವಿಷ್ಯ ನುಡಿದರು ಮತ್ತು ನಂತರ ಅವರು ಮೈಕ್ರೋಸಾಫ್ಟ್ ಎನ್ನುವ ಸಂಸ್ಥೆಯನ್ನು ಸ್ಥಾಪಿಸಿದರು. ಇಂದು, ಅವರು ವಿಶ್ವದ ಅತ್ಯಂತ ಶ್ರೀಮಂತ ವ್ಯಕ್ತಿಗಳಲ್ಲಿ ಒಬ್ಬರು.



ಓಪ್ರಾ ವಿನ್‌ಫ್ರೇ : ಶ್ರೀಮಂತ ಕುಟುಂಬದಲ್ಲಿ ಜನಿಸಿದರೂ, ಚಿಕ್ಕ ವಯಸ್ಸಿನಿಂದಲೂ, ಓಪ್ರಾ ವಿನ್‌ಫ್ರೇ ಕಥೆಗಳನ್ನು ಹೇಳುವುದರಲ್ಲಿ ಮತ್ತು ಇತರರೊಂದಿಗೆ ಸಂವಹನ ನಡೆಸುವುದರಲ್ಲಿ ಆಸಕ್ತಿ ಹೊಂದಿದ್ದಳು.

ಇಂತಹ ಆಸಕ್ತಿ ಯಾರನ್ನಾದರೂ ಸಾಧಕರನ್ನಾಗಿ ಮಾಡುತ್ತದೆಯೇ ಎಂದು ಆಶ್ಚರ್ಯಪಡುವವರು, ಓಪ್ರಾ ಅವರ ಕಥೆಗಳನ್ನು ಓದಿ ನೋಡಬೇಕು. ಜೀವನದ ಅನುಭವಗಳನ್ನು ಆಕರ್ಷಕರೀತಿಯಲ್ಲಿ ಹೇಳುವುದು, ಪ್ರಸಿದ್ಧ ಸೆಲೆಬ್ರಿಟಿಗಳನ್ನು ಸಂದರ್ಶಿಸುವುದು ಇತ್ಯಾದಿಗಳಿಗಾಗಿ ಇವರು ಪ್ರಪಂಚದಾದ್ಯಂತ ದೂರದರ್ಶನ ನಿರೂಪಕಿಯಾಗಿ ಪ್ರಸಿದ್ಧರಾಗಿದ್ದಾರೆ. ಅವರಿಕದ ಅಧ್ಯಕ್ಷರಿಂದ ಹಿಡಿದು ಹಾಲಿವುಡ್ ನಟಿಯರವರೆಗೆ ಅನೇಕರು ಇವರಿಂದ ಸಂದರ್ಶನ ಪಡೆದಾಗ ಹೆಮ್ಮೆ ಪಡುತ್ತಾರೆ. ತಮ್ಮ ಉತ್ಸಾಹವನ್ನು ಕಾರ್ಯರೂಪಕ್ಕಿಳಿಸಲು ಬಯಸುವ ಸಾಮಾನ್ಯ ಜನರಿಗೆ ಓಪ್ರಾ ಸಹ ಒಂದು ಅತ್ಯುತ್ತಮ ಮಾದರಿ.

ಹೋವಾರ್ಡ್ ಶುಲ್ಟ್ಸ್ : ವಿಶ್ವಪ್ರಸಿದ್ಧ ಕಾಫಿ ಷಾಪ್ ಆದ ಸ್ಟಾರ್‌ಬಕ್ಸ್‌ನ ಸರಪಳಿ ಶಾಖೆಗಳನ್ನು ಆರಂಭಿಸಿದವರು ಇವರು. ಕಾಫಿಯನ್ನು ಪ್ರಪಂಚದಾದ್ಯಂತ ಎಲ್ಲರೂ ಮೆಚ್ಚುತ್ತಾರೆ ಎಂಬುದನ್ನು ಅರಿತುಕೊಂಡ ಇವರು ಅಮೆರಿಕದ ಸಿಯಾಟಲ್ ಸಿಟಿ ಮಾರುಕಟ್ಟೆಯಲ್ಲಿ ಮೊದಲು ಒಂದು ಸಣ್ಣ ಅಂಗಡಿಯನ್ನು ಖರೀದಿಸಿದರು. ನಂತರ ಅವರು ಅನೇಕ ಸ್ಥಳಗಳಲ್ಲಿ ಅದರ ಶಾಖೆಗಳನ್ನು ತೆರೆಯಲು ಪ್ರಯತ್ನಿಸಿದರು. ಬ್ಯಾಂಕ್ ಸಾಲಕ್ಕಾಗಿ ಅವರ ಅರ್ಜಿಗಳು ಕನಿಷ್ಠ 200 ಬಾರಿ ತಿರಸ್ಕರಿಸಲ್ಪಟ್ಟಿರಬೇಕು. ಛಲ ಬಿಡದೆ ಅವರು ಪ್ರಯತ್ನಿಸಿದರು. ಪರಿಚಯಸ್ಥರಿಂದ ಸಾಲಗಳನ್ನು ಪಡೆದರು ಮತ್ತು ಅದರಿಂದ ಕಂಪನಿಯನ್ನು ವಿಸ್ತರಿಸಿದರು. ಇಂದು, ಪ್ರಪಂಚದಾದ್ಯಂತ 80ಕ್ಕೂ ಹೆಚ್ಚು ದೇಶಗಳಲ್ಲಿ ಸುಮಾರು 36 ಸಾವಿರ ಸ್ಟಾರ್‌ಬಕ್ಸ್ ಶಾಖೆಗಳಿವೆ. ಅಡೆತಡೆಗಳಿಂದ ಕುಗ್ಗದೆ ಉತ್ಸಾಹವನ್ನು ಕಳೆದುಕೊಳ್ಳದೆ ಮುಂದುವರೆದ ವ್ಯಕ್ತಿಯ ಸಾಧನೆಯ ಗುರುತು ಇದು.

ಮೇರಿ ಕೇ ಆಶ್ : ಬಡ ಕುಟುಂಬದಲ್ಲಿ ಜನಿಸಿ, 17ನೇ ವಯಸ್ಸಿನಲ್ಲೇ ಮದುವೆಯಾಗಿ, ಸತತವಾಗಿ ಮೂರು ಮಕ್ಕಳನ್ನು ಹೆತ್ತು, ನಂತರ ಗಂಡನಿಂದ ವಿಚ್ಛೇದನ ಪಡೆದ ಯುವತಿಯ ಜೀವನ ಹೇಗಿರುತ್ತದೆ? ಆರಂಭದಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡುವ ಮೂಲಕ ತನ್ನ ಮಕ್ಕಳನ್ನು ಬೆಳೆಸಲು ಮೇರಿ ಕೇ ಆಶ್ ಹೆಣಗಾಡಿದಳು. ಆ ದಿನಗಳಲ್ಲಿ ಅವಳು ತಾನು ಮಾರಾಟ ಮಾಡುವ ಸಾಮರ್ಥ್ಯವನ್ನು ಹೊಂದಿದ್ದೇನೆಂಬುದನ್ನು ಅರಿತುಕೊಂಡಳು. ಅವಳು ಮಾರಾಟ ಪ್ರತಿನಿಧಿಯಾಗಿ ಯಶಸ್ಸನ್ನು ಸಾಧಿಸಿದ್ದಳು. ಅವಳು ಮಾರಾಟದಲ್ಲಿ ಆಸಕ್ತಿಯನ್ನು ಹೊಂದಿದ್ದರೂ, ಅವಳು ಮಹಿಳೆಯಾಗಿದ್ದರಿಂದ ಅವಳನ್ನು ನಿರ್ಲಕ್ಷಿಸಲಾಯಿತು ಮತ್ತು ಅವಳಿಗೆ ಉನ್ನತ ಹುದ್ದೆಗಳನ್ನು ನೀಡಲು ನಿರಾಕರಿಸಲಾಯಿತು. ಕಡೆಗೆ ಅವಳು, ತನ್ನ 45ನೇ ವಯಸ್ಸಿನಲ್ಲಿ ತನ್ನದೇ ಆದ ಕಂಪನಿಯನ್ನು ಪ್ರಾರಂಭಿಸಿದಳು, 'ಮಾರಾಟದಲ್ಲಿ ಆಸಕ್ತಿ ಹೊಂದಿರುವ ನಾವೇ ನಮ್ಮ ಉತ್ಪನ್ನಗಳನ್ನು ಸಹ ಉತ್ಪಾದಿಸೋಣ' ಎಂದು ಯೋಚಿಸಿದ ಅವರು ಸ್ವತಃ ತಾವೇ ಉತ್ಪನ್ನಗಳನ್ನು ಸಿದ್ಧಗೊಳಿಸಿದರು. ಇಂದು, ಐದು ಸಾವಿರ ಜನರು ಅವರು ಸ್ಥಾಪಿಸಿರುವ 'ಮೇರಿ ಕೇ ಕಾಸ್ಮೆಟಿಕ್ಸ್ ಕಂಪನಿ'ಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವಳನ್ನು 'ಅಮೇರಿಕನ್ ಇತಿಹಾಸದಲ್ಲಿ ಶ್ರೇಷ್ಠ ಮಹಿಳೆ' ಎಂದು ಹೊಗಳಲಾಗುತ್ತದೆ.

ಟೋನಿ ರಾಬಿನ್ಸ್: ಟೋನಿ ರಾಬಿನ್ಸ್‌ಗೆ ಏಳು ವರ್ಷಗಳಾಗಿದ್ದಾಗ ಅವನ ಪೋಷಕರು ವಿವಾಹ ವಿಚ್ಛೇದನ ಪಡೆದುಕೊಂಡರು. ಟೋನಿ ರಾಬಿನ್ಸ್ ಅವರ ನಾಲ್ಕು ಮಕ್ಕಳಲ್ಲಿ ಹಿರಿಯವನು. ವಿಚ್ಛೇದನ ಪಡೆದ ಅವನ ತಾಯಿ ಮರುಮದುವೆಯಾದರು. ಅವನು ಚಿಕ್ಕವನಿದ್ದಾಗ ಅವರೊಂದಿಗೇ ಬೆಳೆದನು. ಸದಾ ಬೈಯುವ ತಾಯಿ ಮತ್ತು ಬೆದರಿಕೆ ಹಾಕುವ ಮಲ ತಂದೆಯ ನಡುವೆ ಅವನು ತನ್ನ ಕಿರಿಯ ಸಹೋದರ ಸಹೋದರಿಯರಿಗಾಗಿ ಅಡುಗೆ ಮಾಡಿ ಕೊಟ್ಟು, ನೋಡಿಕೊಂಡು, ಅವರನ್ನು ತಾನೇ ಬೆಳೆಸಿದನು. ತಮ್ಮ ಜೀವನ ಸಾಗಿಸಲು ಅವನು ಸಣ್ಣಪುಟ್ಟ ಕೆಲಸಗಳನ್ನೂ ಮಾಡುತ್ತಿದ್ದನು. ಅವನು ಶಾಲಾ ವಿದ್ಯಾಭ್ಯಾಸವನ್ನು ಸಹ ಮುಗಿಸಲಿಲ್ಲ. ಆದರೆ ಅವನಿಗೆ ಮಾತನಾಡುವುದರಲ್ಲಿ ತುಂಬಾ ಆಸಕ್ತಿ ಇತ್ತು. ಅದಕ್ಕಾಗಿಯೇ ಅವನು ಮಾರಾಟ ಪ್ರತಿನಿಧಿಯಾದನು. ತನ್ನ 26ನೇ ವಯಸ್ಸಿಗೆ, ಆ ವೃತ್ತಿಯ ಮೂಲಕ ಅವನು ಕೋಟ್ಯಾಧಿಪತಿಯಾಗಿದ್ದನು. ಈಗ ಅವನು ಆತ್ಮವಿಶ್ವಾಸದ ಭಾಷಣಕಾರ. ಜೀವನವು ನಿಮ್ಮ ಮೇಲೆ ಎಷ್ಟೇ ಕಷ್ಟಗಳನ್ನು ತಂದೊಡ್ಡಿದರೂ, ನಿಮ್ಮ ಉತ್ಸಾಹವು ನಿಮ್ಮನ್ನು ಹೇಗೆ ಮೇಲಕ್ಕೆತ್ತುತ್ತದೆ ಎಂಬುದಕ್ಕೆ ಟೋನಿ ರಾಬಿನ್ಸ್ ಒಂದು ಅತ್ಯುತ್ತಮ ಉದಾಹರಣೆ.

ಧೋನಿಯವರ ಬಳಿಯಿಂದ ಕಲಿಯಿರಿ ಆಸಕ್ತಿಯನ್ನು!

ಭಾರತೀಯ ಕ್ರಿಕೆಟ್ ಜಗತ್ತಿನ ಅಪ್ರತಿಮ ನಾಯಕ, ಅನೇಕ ವಿಜಯಗಳನ್ನು ಗಳಿಸಿದ ಕ್ರಿಕೆಟ್ ಲೋಕದ ನಾಯಕ ಮಹೇಂದ್ರ ಸಿಂಗ್ ಧೋನಿ ಅವರನ್ನು 'ಕ್ಯಾಪ್ಟನ್ ಕೂಲ್' ಎಂದು ಕರೆಯಲಾಗುತ್ತಿತ್ತು. ಏಕೆಂದರೆ ಅವರು ಯಾವುದೇ ಪರಿಸ್ಥಿತಿಯಲ್ಲಿಯೂ ಆತಂಕ ಅಥವಾ ಉದ್ವಿಗ್ನತೆಯನ್ನು ಅನುಭವಿಸದೆ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ನಿವೃತ್ತಿಯ ನಂತರವೂ ಅವರನ್ನು ಭಾರತೀಯರು ಆರಾಧಿಸುತ್ತಾರೆ. ಧೋನಿ, ಸಚಿನ್ ತೆಂಡೂಲ್ಕರ್ ಅವರಂತೆ ಕ್ರಿಕೆಟ್ ತಂತ್ರಗಳನ್ನು ತಿಳಿದಿರುವ ಕ್ರಿಕೆಟಿಗನಲ್ಲ. ಅವರೇ ಒಮ್ಮೆ ಹೇಳಿದ್ದರು: 'ನಾನು ಸಾಮಾನ್ಯವಾಗಿ ಎಲ್ಲರೂ ಆಡುವ ಅದೇ ಶಾಟ್‌ಗಳನ್ನು ಆಡುತ್ತೇನೆ. ಅದಕ್ಕಾಗಿಯೇ ಎಲ್ಲರೂ ನನ್ನನ್ನು ಇಷ್ಟಪಡುತ್ತಾರೆ' ಎಂದು. ಆದರೆ, ಮೈದಾನದಲ್ಲಿ ಗೆಲ್ಲಲು ಏನು ಮಾಡಬೇಕೆಂದು ತಿಳಿದಿರುವವರು ಧೋನಿಯಂತೆ ಬೇರೆ ಯಾರೂ ಇಲ್ಲ. ಅವರ ಉತ್ಸಾಹವೇ ಅವರನ್ನು ಆ ಎತ್ತರಕ್ಕೆ ಕೊಂಡೊಯ್ದಿತು.

ಧೋನಿಯನ್ನು ತಮ್ಮ ನಾಯಕ ಎಂದು ಆರಾಧಿಸುವ ಮಕ್ಕಳು ಧೋನಿಯಿಂದ ಕ್ರಿಕೆಟ್ ಅನ್ನು ಮಾತ್ರವಲ್ಲದೆ, ಜೀವನಕ್ಕೆ ಅಗತ್ಯವಾದ ಈ ಗುಣಗಳನ್ನೂ ಸಹ ಕಲಿಯಬಹುದು. 'ಏಳು' ಎಂಬ ಸಂಖ್ಯೆಯನ್ನು ಮುದ್ರಿಸಿರುವ ಭಾರತೀಯ ತಂಡದ ಉಡುಪೇ ಧೋನಿಯವರ ಗುರುತು. ಆ ಸಂಖ್ಯೆ ಏಳು ಎಂಬುದು ಕೂಡ ಸಾಂಕೇತಿಕವಾದುದು. ಅದರಿಂದ ಕಲಿಯಬಹುದಾದ ಏಳು ಪಾಠಗಳು...

◆ ಯಾವುದೇ ಕೆಲಸವನ್ನಾಗಲೀ ಯಶಸ್ವಿಯಾಗಿ ಆರಂಭಿಸುವವರು ಬಹಳ ಜನ ಇರುತ್ತಾರೆ. ಆದರೆ ಅದನ್ನು ಯಶಸ್ವಿಯಾಗಿ ಮುಗಿಸುವವರು ಬಹಳ ಕಡಿಮೆ ಜನರು. ಇನ್ನು ಅನೇಕ ಜನರು ತಮ್ಮ ಹಾದಿಯನ್ನು ಅರ್ಧ ದಾರಿಯಲ್ಲೇ ಬದಲಾಯಿಸಿಕೊಳ್ಳುತ್ತಾರೆ, ಸೋಲನ್ನು ಒಪ್ಪಿಕೊಂಡು ಪಕ್ಕಕ್ಕೆ ಸರಿಯುತ್ತಾರೆ. ಬದ್ಧತೆಯಲ್ಲಿ ದೃಢವಾಗಿ ಉಳಿದುಕೊಂಡು ಕೊನೆಯ ಸೆಕೆಂಡ್‌ವರೆಗೆ ಮೈದಾನದಲ್ಲಿ ಹೋರಾಡಿ ಯಶಸ್ಸನ್ನು ಸಾಧಿಸುವ ಕೆಲವೇ ಕೆಲವು ಜನರಲ್ಲಿ ಧೋನಿ ಕೂಡ ಪ್ರಮುಖರಾದವರು. ಅವರನ್ನು 'ದಿ ಗ್ರೇಟ್ ಫಿನಿಶರ್' ಎಂದು ಕರೆಯಲಾಗುತ್ತದೆ. ಪೂರ್ಣ ಗಮನದಿಂದ, ವಿಚಲಿತರಾಗದೆ ಒಂದು ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸುವುದು ಅಪರೂಪದ ಮತ್ತು ಅದ್ಭುತ ಗುಣ. ಖಂಡಿತ, ನಾವು ಅದನ್ನು ಬೆಳೆಸಿಕೊಳ್ಳಬೇಕು.

◆ ಮಹೇಂದ್ರ ಸಿಂಗ್ ಧೋನಿ ಒಬ್ಬ ಸಾಧಾರಣ ಪಂಪ್ ಆಪರೇಟರ್‌ನ ಮಗನಾಗಿ ಜನಿಸಿದರು. ಕ್ರಿಕೆಟ್‌ನ ಮೇಲಿದ್ದ ಅವರ ಉತ್ಸಾಹ ಮತ್ತು ಅವರು ಅದರಲ್ಲಿ ಸಾಧಿಸಿದ ಪ್ರತಿಭೆ ಅವರಿಗೆ

ರೈಲ್ವೆಯಲ್ಲಿ ಕೆಲಸ ಸಿಗುವಂತೆ ಮಾಡಿತು. ಪಂಪ್ ಆಪರೇಟರ್‌ನ ಮಗ ರೈಲ್ವೆಯಲ್ಲಿ ಕೆಲಸ ಮಾಡುವುದೇ ಅತ್ಯಂತ ದೊಡ್ಡ ಬೆಳವಣಿಗೆ. ಆದರೆ ಧೋನಿಯ ಕನಸುಗಳು ಅದನ್ನೂ ಮೀರಿ ಇನ್ನೂ ದೊಡ್ಡದಾಗಿದ್ದವು. ಅವನು ತನ್ನ ಕನಸನ್ನು ನನಸಾಗಿಸಲು ಸಾಧ್ಯವಾದದ್ದು, ತನಗೆ ಕೆಲಸ ಸಿಕ್ಕಿದ್ದಕ್ಕಷ್ಟೇ ತೃಪ್ತಿಪಡದೆ ತನ್ನ ಕನಸನ್ನು ಸಾಧಿಸಲು ಶ್ರಮಿಸುತ್ತಿದ್ದುದರಿಂದ ಮಾತ್ರ. 'ದೊಡ್ಡ ಕನಸು ಕಾಣು' ಎಂಬುದನ್ನು ಧೋನಿ ತಮ್ಮ ಜೀವನದುದ್ದಕ್ಕೂ ನಮಗೆ ನೆನಪಿಸುತ್ತಾರೆ.

◆ ಧೋನಿ ಯಾರ ಪ್ರತಿಭೆಯನ್ನೂ ನೋಡಿ ಅಸೂಯೆ ಪಡುತ್ತಿರಲಿಲ್ಲ. ಒಬ್ಬರ ಬಳಿ ಹೋಗಿ ಅವರು ಅದನ್ನು ಹೇಗೆ ಮಾಡಿದರು ಎಂದು ಕೇಳಲು ಎಂದಿಗೂ ಹಿಂಜರಿಯುತ್ತಿರಲಿಲ್ಲ. ಧೋನಿಯ ಬಗ್ಗೆ ಯೋಚಿಸಿದಾಗ, ಹೆಲಿಕಾಪ್ಟರ್ ಶಾಟ್ ನೆನಪಿಗೆ ಬರುತ್ತದೆ. ನೀವು ಅದನ್ನು ತಿರುಗಿಸಿದರೆ, ಚೆಂಡು ಸಿಕ್ಸರ್‌ಗೆ ಹಾರುತ್ತದೆ. ಧೋನಿ ಆ ಶಾಟ್ ಅನ್ನು ತನ್ನ ಸ್ನೇಹಿತನಿಂದ ಕಲಿತರು. ನಮಗೆ ತಿಳಿದಿರುವುದನ್ನು ತಿಳಿದಿಲ್ಲದವರಿಗೆ ಕಲಿಸುವುದು ಮತ್ತು ನಮಗೆ ತಿಳಿದಿಲ್ಲದಿರುವುದನ್ನು ಇತರರಿಂದ ಕಲಿಯುವುದು ಅವಶ್ಯಕ.

◆ ಎಂ.ಎಸ್. ಧೋನಿ ತಮಗಿಂತ ಹಿರಿಯರು ಮತ್ತು ಅನುಭವಿಗಳನ್ನು ಗೌರವಿಸುವ ಶ್ರೇಷ್ಠ ಗುಣವನ್ನು ಹೊಂದಿರುವ ವ್ಯಕ್ತಿ. ಭಾರತದ ಅತ್ಯುತ್ತಮ ನಾಯಕರಲ್ಲಿ ಒಬ್ಬರಾದ ಗೌರವ್ ಗಂಗೂಲಿ, ಧೋನಿ ನೇತೃತ್ವದಲ್ಲಿ ತಮ್ಮ ಕೊನೆಯ ಪಂದ್ಯವನ್ನು ಆಡಿದರು. ಅವರಿಗೆ ಗೌರವ ಸಲ್ಲಿಸುವ ಸಂಕೇತವಾಗಿ, ಧೋನಿ ಆಟದ ಕೊನೆಯ ನಿಮಿಷಗಳಲ್ಲಿ ಗಂಗೂಲಿಗೆ ಬ್ಯಾಟಿಂಗ್ ಜವಾಬ್ದಾರಿಗಳನ್ನು ಹಸ್ತಾಂತರಿಸಿದರು ಮತ್ತು ಅವರಲ್ಲಿ ಧನ್ಯತೆಯ ಭಾವನೆಯನ್ನು ಮೂಡಿಸಿದರು. 'ನಾವು ಎಷ್ಟೇ ಎತ್ತರವಾಗಿದ್ದರೂ, ವಯಸ್ಸು ಮತ್ತು ಅನುಭವವನ್ನು ಗೌರವಿಸಬೇಕು' ಎಂದು ಧೋನಿ ಸ್ಪಷ್ಟಪಡಿಸುತ್ತಾರೆ.

◆ ತಂಡವನ್ನು ಹಲವು ಗೆಲುವುಗಳತ್ತ ಕೊಂಡೊಯ್ದಿದ್ದರೂ, ಅವರು ಎಂದಿಗೂ ನಾಯಕ ಎಂದು ಭಾವಿಸಲಿಲ್ಲ. ಅವರು ಟ್ರೋಫಿಯನ್ನು ಗೆದ್ದ ಕ್ಷಣ, ಅವರು ತಮ್ಮ ತಂಡದ ಆಟಗಾರರನ್ನು ಕರೆದು ಅವರಿಗೆ ಹಸ್ತಾಂತರಿಸುತ್ತಿದ್ದರು. ಅಷ್ಟೇ ಅಲ್ಲ, ಗೆಲುವಿನ ಸಮಯದಲ್ಲಿ ಅವರು ತಮ್ಮ ತಂಡದ ಆಟಗಾರರನ್ನು ಮುಂದೆ ಇರಿಸಿ ತಾವು ಹಿಂದೆ ನಿಲ್ಲುತ್ತಿದ್ದರು. ಅವರು ಸೋತಾಗ, ತಾವು ಮುಂದೆ ಹೆಜ್ಜೆ ಎತ್ತಿಟ್ಟು ಅದರ ಜವಾಬ್ದಾರಿಯನ್ನು ತಾವು ತೆಗೆದುಕೊಳ್ಳುತ್ತಿದ್ದರು. ಈ ನಿಸ್ವಾರ್ಥ ಗುಣವನ್ನು ಎಲ್ಲರೂ ಅವರಿಂದ ಕಲಿಯಬೇಕು.

◆ ಧೋನಿ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ನಾ, ಟಾಪ್ ಆರ್ಡರ್ ಬ್ಯಾಟ್ಸ್‌ಮನ್ನಾ, ಕೆಳ ಕ್ರಮಾಂಕದ ಬ್ಯಾಟ್ಸ್‌ಮನ್ನಾ, ವಿಕೆಟ್ ಕೀಪರ್ರಾ, ನಾಯಕನಾ, ವೈಟ್-ಬಾಲ್ ಆಟಗಾರನಾ ಅಥವಾ ರೆಡ್-ಬಾಲ್ ಆಟಗಾರನಾ?, 'ಅವರ ವಿಶೇಷತೆ ಏನು?' ಎಂದು ಕೇಳಿದರೆ, ಉತ್ತರ 'ಎಲ್ಲವೂ'! ಅವರು ಇಷ್ಟೇ ಸಾಕು ಎಂದು ಭಾವಿಸಿ ಸುಮ್ಮನೆ ಕುಳಿತುಕೊಳ್ಳುವುದಿಲ್ಲ, ಅವರು ಎಲ್ಲವನ್ನೂ ಪ್ರಯತ್ನಿಸುತ್ತಾರೆ, ಸೂಕ್ಷ್ಮ ವ್ಯತ್ಯಾಸಗಳನ್ನು ಕಲಿಯುತ್ತಾರೆ ಮತ್ತು ಅವುಗಳಲ್ಲಿ ಶ್ರೇಷ್ಠರಾಗುತ್ತಾರೆ. ಧೋನಿ ಅದನ್ನು ಕರಗತ ಮಾಡಿಕೊಂಡಿದ್ದಾರೆ. ಪರಿಸ್ಥಿತಿಗೆ ಅನುಗುಣವಾಗಿ ವೇಗ ಮತ್ತು ಬುದ್ಧಿವಂತಿಕೆಯನ್ನು ಸರಿಯಾದ ಪ್ರಮಾಣದಲ್ಲಿ ಸಂಯೋಜಿಸುವ ಅವರ ಸಾಮರ್ಥ್ಯ ಮತ್ತು ಹಾಗೆ ಮಾಡುವಲ್ಲಿ ಅವರ ಅಚಲ ಗಮನವು ಧೋನಿಯನ್ನು ಉನ್ನತ ಸ್ಥಾನಕ್ಕೆ ಏರಿಸುತ್ತದೆ.



◆ ಧೋನಿ ತಮ್ಮ ಆರೋಗ್ಯದ ಬಗ್ಗೆ ತುಂಬಾ ಕಾಳಜಿ ವಹಿಸುತ್ತಾರೆ. ಅವರು ಯಾವಾಗಲೂ ಪೌಷ್ಟಿಕಾಂಶ ಭರಿತ ಆಹಾರವನ್ನೇ ಸೇವಿಸುತ್ತಾರೆ. ಅದರಿಂದ ಅವರು ಹೊಡೆಯುವ ಚೆಂಡುಗಳು ಎಲ್ಲಾ ದಿಕ್ಕುಗಳಿಗೂ ಹಾರುತ್ತವೆ. ಧೋನಿಗಿಂತ ವೇಗವಾಗಿ ಓಡಬಲ್ಲ ಆಟಗಾರ ತಂಡದಲ್ಲಿ ಇಲ್ಲ. ಓಟದಲ್ಲಿ ಕಿರಿಯ ಆಟಗಾರರನ್ನು ಸಹ ಅವರು ಸೋಲಿಸಬಲ್ಲರು ಧೋನಿ. ಗೆಲುವಿನ ಗುರಿಯತ್ತ ಸಾಗುವ ನಮ್ಮ ಪ್ರಯಾಣದಲ್ಲಿ ಮಾನಸಿಕ ಆರೋಗ್ಯ ಎಷ್ಟು ಮುಖ್ಯವೋ, ದೈಹಿಕ ಆರೋಗ್ಯವೂ ಅಷ್ಟೇ ಮುಖ್ಯ! ●

ಓದುಗರ ಪತ್ರಗಳು

'ಬಿಳುಪು ಭಾವನೆಗಳು' ಸಂಚಿಕೆಯ ಯಶಸ್ವೀ ಮನುಷ್ಯರ ವಿಶೇಷಾಂಕವನ್ನು ಓದಿದೆ. ಸಂಚಿಕೆಯ ಪ್ರತಿ ಪುಟದಲ್ಲೂ ಯಶಸ್ಸನ್ನು ಸಾಧಿಸಲು, ಅಭಿವೃದ್ಧಿ ಹೊಂದಲು ಅಗತ್ಯವಾದ ಮಾಹಿತಿಗಳು ತುಂಬಿದ್ದವು. ಜಗತ್ತಿನ ಅತಿ ಶ್ರೇಷ್ಠ ಯಶಸ್ವೀ ಮನುಷ್ಯರೆಂದು ಹೆಸರು ಗಳಿಸಿರುವ ವಾರನ್ ಪಫೆಟಿನ್ ಅವರ ಜೀವನ ವಿಧಾನವನ್ನೂ, ಯಶಸ್ಸನ್ನು ಗಳಿಸಲು ಅಗತ್ಯವಾದ ಆಲೋಚನೆಗಳನ್ನೂ ಅತ್ಯಂತ ಸುಂದರವಾಗಿ ತಿಳಿಸಿರುವ ರಾಮ್‌ರಾಜ್ ಕಾಟನ್ ಸಂಸ್ಥೆಯ ಪತ್ರ ಮನದಲ್ಲಿ ಆಳವಾಗಿ ಹುದುಗಿ ಹೋಗಿದೆ.

– ಎನ್.ಎಲ್.ಶಿವಕುಮಾರ್, ಹಾಸನ.

'ಯಾವುದರಲ್ಲೇ ಆಗಲಿ, ಯಶಸ್ಸನ್ನು ಗಳಿಸಲು ಹೆಚ್ಚು ಶ್ರಮ ಪಡಬೇಕು' ಎನ್ನುವ ಸಂಸ್ಥೆಯ ಪತ್ರ, ಯಶಸ್ಸಿಗೆ ತೋರಿಸುವ ದಾರಿದೀಪದಂತಿತ್ತು. ಗಮನ ಚೆದುರದಂತಹ ದುಡಿಮೆ, ಯಶಸ್ವೀ ವ್ಯಕ್ತಿಗಳನ್ನಾಗಿಸುವುದು ಯಾವುದು... ಇಂತಹ ಹಲವು ಶೀರ್ಷಿಕೆಗಳಲ್ಲಿ, ನಾವು ಬದುಕಿನಲ್ಲಿ ಯಶಸ್ಸನ್ನು ಅನುಭವಿಸಲು ನೆರವಾಗುವಂತಹ 'ಬಿಳುಪು ಭಾವನೆಗಳು' ಸಂಚಿಕೆಯು ಅತ್ಯುಪಯುಕ್ತವಾಗಿತ್ತು.

– ಶ್ರೀಮತಿ ಉಮಾದೇವಿ, ಕನಕಪುರ.

ಹುಟ್ಟುವಾಗಲೇ ಯಾರೂ ಯಶಸ್ವೀ ಮನುಷ್ಯರಾಗಿ ಹುಟ್ಟುವುದಿಲ್ಲ. ಕಠಿಣವಾಗಿ ದುಡಿದು, ಪ್ರಯತ್ನ ಪಟ್ಟು ಸಾಧಕರಾಗಿ ಬದಲಾಗುತ್ತಾರೆ. ಅಂತಹ ಯಶಸ್ವೀ ಮನುಷ್ಯರ ಬಗ್ಗೆ ಹಲವು ಮಾಹಿತಿಗಳೊಡನೆ ಮೂಡಿ ಬಂದಿರುವ 'ಬಿಳುಪು' ಸಂಚಿಕೆಯ ವಿಶೇಷಾಂಕವು ಒಂದು ಅದ್ಭುತವಾದ ಸಂಚಿಕೆಯಾಗಿದೆ.

– ಜಿ.ಸತ್ಯನಾರಾಯಣ, ಧಾರವಾಡ.

ಆಸಕ್ತಿಯಿಂದ ದೊರಕುವ ಅರಿವು!

ಮರಣದಂಡನೆ ಶಿಕ್ಷೆಗೆ ಗುರಿಯಾಗಿ ಜೈಲಿನಲ್ಲಿದ್ದಾಗಲೂ, ಹುತಾತ್ಮ ಭಗತ್ ಸಿಂಗ್ ಓದುವುದನ್ನು ಮುಂದುವರೆಸಿದರು. ಗಲ್ಲಿಗೇರಿಸಲ್ಪಡುವ ಹಿಂದಿನ ದಿನವೂ ಅವರು ಶಾಂತವಾಗಿ ಪುಸ್ತಕ ಓದುತ್ತಿದ್ದರು. ನಾಳೆ ಸಾಯುತ್ತೇನೆ ಎಂಬುದು ತಿಳಿದಿದ್ದರೂ, ತಮ್ಮ ಅರಿವನ್ನು ವಿಸ್ತರಿಸಿಕೊಳ್ಳುವ ಕೆಲಸವನ್ನು ಅವರು ಮಾಡಿದರು.

ತಮ್ಮ ಕೆಲಸದ ಬಗ್ಗೆ ಉತ್ಸಾಹ ಹೊಂದಿರುವ ಜನರು ತಮ್ಮ ಗುರಿಗಳನ್ನು ಹೊಂದಿಸಿಕೊಳ್ಳುವುದು ಮತ್ತು ಅವುಗಳನ್ನು ಸಾಧಿಸುವುದು ಹೀಗೆಯೇ. ಅವರು ತಮಗೆ ಆಸಕ್ತಿ ಇರುವ ವಿಷಯಗಳನ್ನು ಸಂಶೋಧಿಸುತ್ತಾರೆ ಮತ್ತು ಅಧ್ಯಯನ ಮಾಡುತ್ತಾರೆ, ಅವರು ಕಲಿಯುತ್ತಾರೆ. ಅವರು ಅದರಲ್ಲಿ ಪರಿಣಿತರಾಗಲು ಬಯಸುತ್ತಾರೆ. ಉದಾಹರಣೆಗೆ ಕಾಫಿಯನ್ನು ಸವಿಯಲು ಮತ್ತು ಅದರ ಗುಣಮಟ್ಟವನ್ನು ತಿಳಿಸುವುದಕ್ಕಾಗಿಯೇ ತಜ್ಞರು ಇರುತ್ತಾರೆ. ಕೇವಲ ಒಂದು ಸಿಪ್ ಕುಡಿ–

ಆಸಕ್ತಿಯನ್ನು ಅರಿಯುವುದು ಹೇಗೆ?

ಅನೇಕ ಜನರಿಗೆ ತಾವು ಯಾವುದರ ಬಗ್ಗೆ ಉತ್ಸುಕರಾಗಿದ್ದೇವೆಂದೇ ತಿಳಿದಿರುವುದಿಲ್ಲ. ಅದನ್ನು ಹೇಗೆ ಅರಿಯುವುದು? ನೀವು ಯಾವುದನ್ನು ಕಳೆದುಕೊಂಡಾಗ ನಿಮಗೆ ಅದರ ಬಗ್ಗೆ ಖಾಲಿತನ ಮತ್ತು ದುಃಖವಾಗುತ್ತದೆಯೋ, ಅದರ ಬಗ್ಗೆಯೇ ನೀವು ಆಸಕ್ತಿ ಹೊಂದಿರುತ್ತೀರಿ. ಆಹಾರ, ನಿದ್ರೆ ಮತ್ತು ಬಟ್ಟೆಗಳಂತಹ ದೈನಂದಿನ ವಿಷಯಗಳನ್ನು ತ್ಯಜಿಸಿ. ಸ್ನೇಹಿತರೊಂದಿಗೆ ಚಾಟ್ ಮಾಡುವುದು, ಪುಸ್ತಕ ಓದುವುದು, ನೀವು ಆನಂದಿಸುವ ಕೆಲಸವನ್ನು ಮಾಡುವುದು, ಯಾರಿಗಾದರೂ ಕಲಿಸುವುದು, ಸಮುದಾಯ ಸೇವೆ ಮಾಡುವುದು, ಪ್ರಯಾಣಿಸುವುದು, ವಾಹನ ಚಲಾಯಿಸುವುದು... ನೀವು ಕೆಲವು ದಿನಗಳವರೆಗೆ ಅಂತಹದ್ದನ್ನು ಮಾಡದಿದ್ದರೆ, ನೀವು ಏನನ್ನಾದರೂ ಕಳೆದುಕೊಂಡಂತೆ ನಿಮಗೆ ಅನಿಸುತ್ತದೆ ಎಂದಾದರೆ ಅದರ ಬಗ್ಗೆ ನೀವು ಹೆಚ್ಚು ಉತ್ಸುಕರಾಗಿದ್ದೀರಿ.

ಒಬ್ಬ ವ್ಯಕ್ತಿಗೆ ಕಾರು ಓಡಿಸುವುದು ಇಷ್ಟವಾಗಬಹುದು. ದಿನಕ್ಕೆ ಎಂಟು ಗಂಟೆಗಳಂತೆ, ವಾರದಲ್ಲಿ ಆರು ದಿನಗಳು ಕಾರು ಓಡಿಸಿಯೂ ಒಬ್ಬ ವ್ಯಕ್ತಿಗೆ ಅದರಲ್ಲಿ ಬೇಸರವೇ ಇಲ್ಲ ಎಂದಾದರೆ, ಅವರಿಗೆ ಅದರಲ್ಲಿ ಹೆಚ್ಚು ಆಸಕ್ತಿ ಇದೆ ಎಂದೇ ಅರ್ಥ. ಹೀಗೆ ಒಬ್ಬ ವ್ಯಕ್ತಿಯು ಯಾವುದೇ ರೀತಿಯ ಚಟುವಟಿಕೆಯಲ್ಲಿ ಆಸಕ್ತಿ ಹೊಂದಿದ್ದರೂ, ಆ ಬಗ್ಗೆ ಅವರು ತಮ್ಮನ್ನು ತಾವೇ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು.

ಐದು ಅಥವಾ ಹತ್ತು ವರ್ಷಗಳ ನಂತರವೂ ನನಗೆ ಇದರಲ್ಲಿ ಆಸಕ್ತಿ ಹೀಗೆ–ಯೇ ಇರುತ್ತದೆಯೇ? ಈ ಆಸಕ್ತಿ ನನಗೆ ಏನು ತರುತ್ತದೆ? ಹಣವೋ ಅಥವಾ ಕೇವಲ ಸಂತೋಷವೋ? ಕೇವಲ ಸಂತೋಷವಾಗಿದ್ದರೆ, ಹಣ ಗಳಿಸಲು ನಾನು ಏನು ಮಾಡಬೇಕು? ಈ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಿ ಅದಕ್ಕೆ ತಕ್ಕಂತೆ ನಿಮ್ಮ ಆಸಕ್ತಿಯನ್ನು ಅನುಸರಿಸಿ.

ಕೆಲವು ಆಸಕ್ತಿಗಳು ಕೇವಲ ತೃಪ್ತಿ ನೀಡುತ್ತವೆಯೇ ಹೊರತು, ಅವು ಹಣ ಸಂಪಾದಿಸಿ ಕೊಡಲಾರವು. ಕೆಲವು ಆಸಕ್ತಿಗಳು ದುಬಾರಿಯೂ ಆಗಿರಬಹುದು. ಯಾರಾದರೂ ಪಿಯಾನೋ ನುಡಿಸುವುದರಲ್ಲಿ ಆಸಕ್ತಿ ಹೊಂದಿದ್ದರೆ, ಅದನ್ನು ಖರೀದಿಸುವುದರಿಂದ

ದ ಕೂಡಲೇ, ಆ ಕಾಫಿ ಬೀಜಗಳನ್ನು ಯಾವ ಮಣ್ಣಿನಲ್ಲಿ ಬೆಳೆಸಲಾಯಿತು, ಅವುಗಳ ಗುಣಮಟ್ಟ ಏನು ಮತ್ತು ಜನರು ಅವುಗಳನ್ನು ಎಷ್ಟು ಇಷ್ಟಪಡುತ್ತಾರೆ ಎಂಬುದನ್ನು ಅವರು ತಿಳಿಸುವಷ್ಟು ಪರಿಣಿತರಾಗಿರುತ್ತಾರೆ. ಕೆಲವರು, ಸಾಂಬಾರ್ ಕುದಿಯುತ್ತಿರುವಾಗ, ಅದರ ಪರಿಮಳವನ್ನು ಆಸ್ವಾದಿಸಿಯೇ 'ಸ್ವಲ್ಪ ಉಪ್ಪು ಕಡಿಮೆಯಾಗಿರುವಂತಿದೆ" ಎಂದು ಹೇಳುವವರೂ ಇದ್ದಾರೆ. ಆಸಕ್ತಿಯೇ ಅವರನ್ನು ಅಂತಹ ತಜ್ಞರನ್ನಾಗಿ ಮಾಡುತ್ತದೆ.

ಆಸಕ್ತಿಯೊಂದಿಗೆ ಪ್ರಬುದ್ಧರಾಗಿರಿ!

ಆಸಕ್ತಿಯಿಂದ ಜೀವಿಸಿ

ಯಾವುದನ್ನು ಮಾಡುವುದರಲ್ಲಿ ನಿಮಗೆ ಸಾಮರ್ಥ್ಯ ಇದೆಯೋ, ಯಾವುದು ನಿಮಗೆ ಹಣ ಸಂಪಾದಿಸಿ ನೀಡುತ್ತದೆಯೋ, ನಿಮ್ಮ ಯಾವ ಕಾರ್ಯ ಈ ಸಮಾಜಕ್ಕೂ ಉಪಯುಕ್ತವಾಗಿರುತ್ತದೆಯೋ, ಯಾವುದರಲ್ಲಿ ನಿಮಗೆ ಆಸಕ್ತಿ ಇದೆಯೋ... ಈ ನಾಲ್ಕೂ ವಿಷಯಗಳನ್ನೂ ಸರಿಯಾಗಿ ಗಮನಿಸಬೇಕು. ಈ ನಾಲ್ಕನ್ನೂ ಮಾಡಬೇಕು. ಒಬ್ಬ ವ್ಯಕ್ತಿ ಈ ನಾಲ್ಕನ್ನೂ ಒಳಗೊಂಡಿರಬೇಕು. ಅಪರೂಪಕ್ಕೆ ಕೆಲವರಲ್ಲಿ ಆಸಕ್ತಿ ಮತ್ತು ಸಾಮರ್ಥ್ಯ ಎರಡೂ ಒಂದೇ ಕ್ಷೇತ್ರದಲ್ಲಿರುತ್ತದೆ. ಅಲ್ಲದೆ ಅದು ಅವರಿಗೆ ಹಣವನ್ನೂ ಸಂಪಾದಿಸಿ ಕೊಡುತ್ತದೆ. ಅದರ ಮೂಲಕ ಅವರು ಸಮಾಜಕ್ಕೂ ಸಹಾಯ ಮಾಡುತ್ತಾರೆ. ಎಲ್ಲರಿಗೂ ಎಲ್ಲವೂ ಇಂತಹ ಅವಕಾಶ ದೊರಕದು.

ನಿಮ್ಮ ಜೀವನವನ್ನು ಯೋಜಿಸಿ ಮತ್ತು ಈ ಸಮಯದೊಳಗೆ ನೀವು ಸಾಧಿಸಲು ಬಯಸುವ ಗುರಿಗಳನ್ನು ವ್ಯಾಖ್ಯಾನಿಸಿ. ಅವುಗಳನ್ನು ಸಾಧಿಸಲು ಕೌಶಲ್ಯ ಮತ್ತು ಜ್ಞಾನವನ್ನು ಬೆಳೆಸಿಕೊಳ್ಳಿ. ಸ್ಪಷ್ಟವಾಗಿ ವರ್ತಿಸಿ ಮತ್ತು ಆ ಕ್ರಿಯೆಯಲ್ಲಿ ನಿರಂತರ ಪ್ರಯತ್ನ ಮತ್ತು ದೃಢನಿಶ್ಚಯವನ್ನು ತೋರಿಸಿ. ನೀವು ಬಯಸಿದ್ದನ್ನು ಸಾಧಿಸಬಹುದು

ಆಸಕ್ತಿ ಬೇರೆ... ಸಾಮರ್ಥ್ಯ ಬೇರೆ...!

ನಿಮಗೆ ಯಾವುದು ಹೆಚ್ಚು ಇಷ್ಟ? ನೀವು ಏನು ಚೆನ್ನಾಗಿ ಮಾಡಬಹುದು? ಈ ಎರಡು ಪ್ರಶ್ನೆಗಳಿಗೆ ಕೆಲವೇ ಕೆಲವು ಜನರು ಮಾತ್ರ ಒಂದೇ ಉತ್ತರವನ್ನು ನೀಡಬಲ್ಲರು. ಅನೇಕ ಜನರು ಕ್ರಿಕೆಟ್ ಅನ್ನು ಇಷ್ಟಪಡುತ್ತಾರೆ. ಆದರೆ ಅವರು ಅದನ್ನು ಚೆನ್ನಾಗಿ ಆಡಲು ಸಾಧ್ಯವಿಲ್ಲ. ಹಾಡುಗಾರಿಕೆ ಮತ್ತು ನೃತ್ಯವು ಅನೇಕ ಜನರಿಗೆ ನೆಚ್ಚಿನ, ಆಸಕ್ತಿಯ ಚಟುವಟಿಕೆಗಳಾಗಿರುತ್ತವೆ, ಆದರೆ ಅವರ ಧ್ವನಿ ಚೆನ್ನಾಗಿರುವುದಿಲ್ಲ. ಅವರು ನೃತ್ಯದಲ್ಲಿ ಯಾವುದೇ ತರಬೇತಿಯನ್ನು ಪಡೆಯದೆಯೂ ಇರಬಹುದು.

ಕೆಲವರು ಒಂದು ನಿರ್ದಿಷ್ಟ ವಿಷಯದಲ್ಲಿ ಅಸಾಧಾರಣ ಪ್ರತಿಭೆಯನ್ನು ಹೊಂದಿರಬಹುದು, ಆದರೆ ಅವರಿಗೆ ಆ ಚಟುವಟಿಕೆಯಲ್ಲಿ ಆಸಕ್ತಿ ಇಲ್ಲದಿರಬಹುದು. ಒಂದು ದಿನ ಮಾತ್ರ ಕುಳಿತು ಓದಿಯೇ, 60 ಅಂಕಗಳನ್ನು ಪಡೆದು ಉತ್ತೀರ್ಣರಾಗುವ ವಿದ್ಯಾರ್ಥಿಗಳಿದ್ದಾರೆ. ಅವರು ವರ್ಷ ಪೂರ್ತಿ ಕುಳಿತು ಓದಿದರೆ ರಾಜ್ಯದಲ್ಲೇ ಮೊದಲಿಗರಾಗಬಹುದು. ಆದರೆ ಅವರು ಆ ಕಡೆ ಆಸಕ್ತಿ ತೋರಿಸುವುದಿಲ್ಲ. ಉತ್ತಮ ಓಟದ ಕೌಶಲ್ಯ ಹೊಂದಿರುವ, ಸರಿಯಾಗಿ ತರಬೇತಿ ನೀಡಿದರೆ ಪದಕಗಳನ್ನು ಗೆಲ್ಲಬಲ್ಲ ಸಾಮರ್ಥ್ಯವಿದ್ದರೂ ಕೆಲವರು ಅದರಲ್ಲಿ ಆಸಕ್ತಿ ತೋರಿಸುವುದಿಲ್ಲ, ಬೇರೇನಾದರೂ ಮಾಡುತ್ತಾರೆ. ಆಸಕ್ತಿ ಮತ್ತು ಪ್ರತಿಭೆ ಹೊಂದಿಕೆಯಾಗದ ವಾತಾವರಣದಲ್ಲಿ ಒಬ್ಬರು ಏನು ಮಾಡಬಹುದು? ಅವರಿಗೆ ಆಸಕ್ತಿ ಇರುವ ಕಡೆಗೆ ಹೋಗುವುದು ಉತ್ತಮ.

ತಮಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಅವರು ಸುಲಭವಾಗಿ ಪ್ರತಿಭೆಯನ್ನು ಬೆಳೆಸಿಕೊಳ್ಳಬಹುದು. ಅವರು ಪ್ರತಿಭೆಯನ್ನು ತೋರಿಸುವ ಕ್ಷೇತ್ರದಲ್ಲಿ ಆಸಕ್ತಿಯಿಂದ ತೊಡಗಿಸಿಕೊಳ್ಳದಿದ್ದರೆ, ಅವರು ಎಂದಿಗೂ ಮುಂದೆ ಬರಲು ಸಾಧ್ಯವೇ ಇಲ್ಲ.

ಆಸಕ್ತಿಯೇ ಹಣ ಸಂಪಾದಿಸಿ ಕೊಡುತ್ತದೆಯೇ?!

ಹಿಡಿದು ಕಲಿಯುವವರೆಗೆ ಎಲ್ಲವೂ ದುಬಾರಿಯಾಗಿಯೇ ಇರುತ್ತವೆ. ಎಲ್ಲರೂ ಇದನ್ನು ಮಾಡುವುದರಿಂದ ಆ ಮೂಲಕ ಹಣ ಸಂಪಾದಿಸಲು ಸಾಧ್ಯವಿಲ್ಲ. ಇಂತಹ ಹಲವು ಉದಾಹರಣೆಗಳಿವೆ.

ಎಷ್ಟೋ ಜನರು ಹಣ ಸಂಪಾದಿಸಲು ಒಂದು ಉದ್ಯೋಗ ಅಥವಾ ವೃತ್ತಿಯನ್ನು ಮಾಡುತ್ತಾರೆ. ಅವರು ಅದರಲ್ಲಿ ತಮಗೆ ದೊರಕುವ ತಮ್ಮ ಆದಾಯದ ಒಂದು ಭಾಗವನ್ನು ತಮಗೆ ಇಷ್ಟವಾದ ವಿಷಯಕ್ಕೆ ಖರ್ಚು ಮಾಡುತ್ತಾರೆ. ಅದರಲ್ಲಿ ಯಾವುದೇ ತಪ್ಪಿಲ್ಲ.

ಆಸಕ್ತಿಯೇ ಅಡಿಪಾಯ!

ಪ್ರಸಿದ್ಧ ವಾಸ್ತುಶಿಲ್ಪಿ ಕ್ರಿಸ್ಟೋಫರ್ ರೆನ್. ಅವರ ಜೀವನದಲ್ಲಿ ನಡೆದ ಒಂದು ಘಟನೆಯ ಬಗ್ಗೆ ತುಂಬ ಜನ ಮಾತನಾಡುತ್ತಾರೆ. ಲಂಡನ್ ನಗರವು ಮಹಾ ಬೆಂಕಿಯಿಂದ ನಾಶವಾದಾಗ, ಹಳೆಯ ಕಟ್ಟಡಗಳನ್ನು ಪುನರ್ನಿರ್ಮಿಸುವ ಕೆಲಸ ನಡೆಯಿತು. ರೆನ್ ಪ್ರಾಚೀನ ಸೇಂಟ್ ಪೌಲ್ಸ್ ಕ್ಯಾಥೆಡ್ರಲ್ ಅನ್ನು ಪುನರ್ನಿರ್ಮಿಸಿದರು.

ಆ ಸಮಯದಲ್ಲಿ ಒಂದು ದಿನ ರೆನ್ ಕೆಲಸದ ಸ್ಥಳಕ್ಕೆ ಹೋದರು. ಅವರು ಮೊದಲು ನೋಡಿದ ಕೆಲಸಗಾರನನ್ನು "ನೀವು ಏನು ಮಾಡುತ್ತಿದ್ದೀರಿ?" ಎಂದು ಕೇಳಿದರು. ಅವನು "ನಾನು ಕೆಲಸ ಮಾಡುತ್ತಿದ್ದೇನೆ" ಎಂದು ಹೇಳಿದ. ಎರಡನೇ ಕೆಲಸಗಾರನನ್ನು ಕೇಳಿದಾಗ, ಅವನು "ನಾನು ಗೋಡೆ ಕಟ್ಟಲು ಕಲ್ಲುಗಳನ್ನು ಹಾಕುತ್ತಿದ್ದೇನೆ" ಎಂದು ಹೇಳಿದ. ಮೂರನೇ ಕೆಲಸಗಾರ "ನಾನು ದೇವರಿಗಾಗಿ ಚರ್ಚ್ ನಿರ್ಮಿಸುತ್ತಿದ್ದೇನೆ" ಎಂದು ಹೇಳಿದ.

ಮೂರನೆಯ ಕೆಲಸಗಾರ ಮಾತ್ರ ಉತ್ಸಾಹದಿಂದ ಕೆಲಸ ಮಾಡುವವನು ಎಂದು ಹಲವರು ಭಾವಿಸಬಹುದು. ಆದರೆ ಅದು ಸತ್ಯವಲ್ಲ. ಉಳಿದಿಬ್ಬರಿಗೆ ತಮ್ಮ ಕೆಲಸದ ಉದಾತ್ತ ಉದ್ದೇಶ ತಿಳಿದಿಲ್ಲದಿರಬಹುದು. ಆದರೆ ಅವರು ತಮ್ಮ ಪೂರ್ಣ ಪ್ರಯತ್ನವನ್ನು ಮಾಡುತ್ತಿರುವುದರಿಂದ ಅವರೂ ಉತ್ಸಾಹಭರಿತ ಕೆಲಸಗಾರರು ಮತ್ತು ಮೂವರೂ ಒಂದೇ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಅವರ ದೃಷ್ಟಿಕೋನಗಳು ಮಾತ್ರ ವಿಭಿನ್ನವಾಗಿವೆ. 'ನಾನು ಕೆಲಸ ಮಾಡುತ್ತೇನೆ' ಎಂದು ಹೇಳುವವನು ಅಚ್ಚುಕಟ್ಟಾಗಿ ಕಲ್ಲುಗಳನ್ನು ಹಾಕುವಲ್ಲಿ ಮತ್ತು ಗೋಡೆ ನಿರ್ಮಿಸುವಲ್ಲಿ ಪರಿಣತನಾಗಿರಬಹುದು. ಎರಡನೆಯ ವ್ಯಕ್ತಿಯೂ ಹಾಗೆಯೇ. ಇವರಲ್ಲಿರುವ ಒಂದೇ ಸಮಸ್ಯೆ ಎಂದರೆ ಅವರಿಗೆ ತಮ್ಮ ಕೆಲಸವನ್ನು ಒಟ್ಟಾರೆಯಾಗಿ ನೋಡುವ ದೃಷ್ಟಿ ಇಲ್ಲದಿರುವುದು.

ಒಬ್ಬ ಮ್ಯಾನೇಜರ್ ತನ್ನ ಬಳಿ ಕೆಲಸ ಮಾಡುವ ಪ್ರತಿಯೊಬ್ಬರಲ್ಲಿಯೂ ಉತ್ಸಾಹ ತುಂಬಲು ಸಾಧ್ಯವಿಲ್ಲ, ಆದರೆ ಅವರು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬಹುದು.

"ಒಬ್ಬ ವ್ಯಕ್ತಿ ತನ್ನ ಕೆಲಸವನ್ನು ಎಷ್ಟೇ ಪ್ರೀತಿಸಿದರೂ, ಆ ಕೆಲಸವಾಗಲಿ ಅಥವಾ ಕಂಪನಿಯಾಗಲಿ ಕೆಲಸಗಾರನನ್ನು ಪ್ರೀತಿಸುವುದಿಲ್ಲ" ಎಂದು ಹೇಳುವುದುಂಟು. ಅದು ನಿಜವಲ್ಲ. ಉತ್ಸಾಹದಿಂದ ತಮ್ಮ ಕೆಲಸವನ್ನು ಮಾಡುವ ಯಾರಿಗಾದರೂ ಪ್ರತಿಯಾಗಿ ಪ್ರತಿಫಲ ಸಿಗುತ್ತದೆ. ಕೆಲವೊಮ್ಮೆ, ಅದನ್ನು ನೇರವಾಗಿ ಪಡೆಯದಿರಬಹುದು.

ಕಾಲಕ್ಕೆ ತಕ್ಕಂತೆ ಉದ್ಯೋಗಗಳು ಮತ್ತು ವೃತ್ತಿಗಳು ಬದಲಾಗುತ್ತಿವೆ. ಈ ಮೊದಲು, ಪೈಪ್‌ಗಳನ್ನು ಹಾಕಲು ಒಂದು ಗುಂಪಿನ ಜನರು ಗುಂಡಿ ತೋಡಬೇಕಾಗುತ್ತಿತ್ತು. ಪೋಕ್‌ಲೈನ್, ಕ್ರೇನ್‌ಗಳಂತಹ ಯಂತ್ರಗಳ ಪರಿಚಯದ ನಂತರ, ಆ ಕೆಲಸಕ್ಕೆ ಇನ್ನು ಮುಂದೆ ಜನರ ಅಗತ್ಯವಿಲ್ಲ ಎಂದಾಯಿತು. 25 ವರ್ಷಗಳ ಹಿಂದೆ ಎಸ್‌ಟಿಡಿ ಬೂತ್ ನಡೆಸುವುದು ಲಾಭದಾಯಕ ವ್ಯವಹಾರವಾಗಿತ್ತು, ಆದರೆ ಮೊಬೈಲ್ ಫೋನ್‌ಗಳ ಆಗಮನದೊಂದಿಗೆ ಅವು ಕಣ್ಮರೆಯಾದವು. ಹಾಗೆಯೇ ಇಂದು ಇರುವ ಅನೇಕ ಉದ್ಯೋಗಗಳು ಇನ್ನೂ 25 ವರ್ಷಗಳಲ್ಲಿ ಕಣ್ಮರೆಯಾಗಬಹುದು ಎಂದು ತಂತ್ರಜ್ಞಾನ ತಜ್ಞರು ಹೇಳುತ್ತಾರೆ. ಅವುಗಳನ್ನು ಬದಲಾಯಿಸಲು ಹೊಸ ಉದ್ಯೋಗಗಳು ಹೊರಹೊಮ್ಮಬಹುದು. ಕಂಪ್ಯೂಟರ್ ಉದ್ಯಮವು ಭವಿಷ್ಯದಲ್ಲಿ ಇಷ್ಟು ಕೋಟಿ ಜನರಿಗೆ ಉದ್ಯೋಗವನ್ನು ಒದಗಿಸುತ್ತದೆ ಎಂದು 50 ವರ್ಷಗಳ ಹಿಂದೆ ಯಾರೂ ಊಹಿಸಿರಲಿಲ್ಲ, ಅಲ್ಲವೇ?

ನೀವು ಯಾವುದೇ ಕೆಲಸ ಮಾಡಿದರೂ, ಅದನ್ನು ಉತ್ಸಾಹದಿಂದ ಮಾಡುವುದು ಮತ್ತು ಕಾಲದ ಬದಲಾವಣೆಗಳಿಗೆ ಹೊಂದಿಕೊಳ್ಳಲು ಕಲಿಯುವುದು ನಿಮ್ಮನ್ನು ಯಾವಾಗಲೂ ಅರ್ಹರನ್ನಾಗಿ ಮಾಡುತ್ತದೆ. ನಿಮ್ಮ ಕೌಶಲ್ಯಗಳು ಮತ್ತು ಪ್ರಪಂಚದ ನಿರೀಕ್ಷೆಗಳು ಹೊಂದಿಕೆಯಾಗಬೇಕು. ಅದು ನಿಮಗೆ ಆದಾಯ ಮತ್ತು ಬಡ್ತಿಯನ್ನು ನೀಡುವ ಕೆಲಸವಾಗಿರುತ್ತದೆ. ಅದರಲ್ಲಿ ಆಸಕ್ತಿ ಬೆಳೆಸಿಕೊಳ್ಳುವುದರಿಂದ ನಿಮಗೆ ಜೀವನದಲ್ಲಿ ಶಾಂತಿ ಸಿಗುತ್ತದೆ. ●

ಅದು ಒಳಗಿದೆ!

ಸಾರ್ವಜನಿಕ ಪರೀಕ್ಷೆಗಳನ್ನು ಬರೆಯುವ ಸ್ಥಳದಲ್ಲಿ ವಿವಿಧ ಬಗೆಯ ವಿದ್ಯಾರ್ಥಿಗಳನ್ನು ಕಾಣಬಹುದು. ಕೆಲವರು ಪರೀಕ್ಷೆಯ ಸಮಯ ಮುಗಿಯುವ ಐದು ನಿಮಿಷಗಳ ಮೊದಲೇ ತಮ್ಮ ಉತ್ತರಗಳನ್ನು ಬರೆದು ಮುಗಿಸುತ್ತಾರೆ ಮತ್ತು ನಂತರ ಎಲ್ಲವನ್ನೂ ಬರೆದಿದ್ದೇವೆಯೇ ಎಂದು ಖಚಿತಪಡಿಸಿಕೊಳ್ಳಲು ಅವುಗಳನ್ನು ಪರಿಶೀಲಿಸುತ್ತಾರೆ. ಈ ವಿದ್ಯಾರ್ಥಿಗಳು ಪರೀಕ್ಷೆಯನ್ನು ಎಚ್ಚರಿಕೆಯಿಂದ ಬರೆಯುತ್ತಾರೆ. ಇನ್ನು ಕೆಲವರು ಮೇಲ್ವಿಚಾರಕರು ಬಂದು ತಮ್ಮ ಉತ್ತರ ಪತ್ರಿಕೆಗಳನ್ನು ಕಿತ್ತುಕೊಂಡು ಹೋಗುವವರೆಗೂ ಬರೆಯುತ್ತಲೇ ಇರುತ್ತಾರೆ. ಈ ವಿದ್ಯಾರ್ಥಿಗಳು ಪರೀಕ್ಷೆಯನ್ನು ಆತಂಕದಿಂದ ಬರೆಯುತ್ತಾರೆ.

ಕೆಲವು ವಿದ್ಯಾರ್ಥಿಗಳು, ಗಂಟೆ ಬಾರಿಸಿದಾಗ, ಕೂಡಲೇ ತಮ್ಮ ಉತ್ತರ ಪತ್ರಿಕೆಗಳನ್ನು ಮಡಚಿ ಮೇಲ್ವಿಚಾರಕರಿಗೆ ಒಪ್ಪಿಸುತ್ತಾರೆ. ಅವರು ಏನನ್ನೂ ಪರಿಶೀಲಿಸುವ ಅಗತ್ಯವಿಲ್ಲ. ಅವರು ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದಿರುತ್ತಾರೆ. ಅವರು ಮೂರು ಗಂಟೆಗಳಲ್ಲಿ ಪರೀಕ್ಷೆಯನ್ನು ಹೇಗೆ ಬರೆಯಬೇಕೆಂದು ನಿಖರವಾಗಿ ಯೋಜಿಸಿರುತ್ತಾರೆ. ಅದಕ್ಕಾ–ಗಿಯೇ ಅವರು ಸಮಯಕ್ಕೆ ಸರಿಯಾಗಿ ಬರೆಯಲು ಸಾಧ್ಯವಾಗುತ್ತದೆ. ಏಕೆಂದರೆ ಅವರು ಬಹಳ ಉತ್ಸಾಹದಿಂದ ಪರೀಕ್ಷೆಯನ್ನು ಬರೆಯಲು ಬಂದಿದ್ದಾರೆ. ಅವರ ಮನಸ್ಸಿನಲ್ಲಿ ಎಲ್ಲವೂ ಪರಿಪೂರ್ಣವಾಗಿರುತ್ತದೆ.



ಆದರೆ, ಈ ಸಮಾಜವು ಯಾವುದೇ ಕೆಲಸವನ್ನು ಅಷ್ಟು ಉತ್ಸಾಹದಿಂದ ಮಾಡುವವರನ್ನು ತಪ್ಪಾಗಿ ನಿರ್ಣಯಿಸುತ್ತದೆ. ಮಾನವ ಸಮಾಜ ಕಂಡ ಅತ್ಯಂತ ಶ್ರೇಷ್ಠ ಸಂಗೀತ ಪ್ರತಿಭೆ 'ಮೊಜಾರ್ಟ್'. ಅವರು ಉತ್ಸಾಹ ಮತ್ತು ಪ್ರತಿಭೆಯಿಂದ ರಚಿಸಿದ ಸಂಗೀತ ಸಂಯೋಜನೆಗಳು ಜಗತ್ತನ್ನೇ ಆಕರ್ಷಿಸಿದವು. ಆದರೆ, ಮೊಜಾರ್ಟ್‌ನ ತಂದೆ ಅವರನ್ನು ಬಾಲ್ಯದಲ್ಲಿ ಸೋಮಾರಿ ಎಂದು ಪರಿಗಣಿಸಿದ್ದರು. ಅವರು ಮೊಜಾರ್ಟ್‌ನನ್ನು ಹಲವು ಬಾರಿ ಗದರಿಸಿದ್ದರು. ಒಮ್ಮೆ, ತಮ್ಮ ಮಗನಿಗೆ ಬರೆದ ಪತ್ರದಲ್ಲಿ, 'ನಿನ್ನ ಆತ್ಮಸಾಕ್ಷಿಯನ್ನು ಕೇಳಿ ನೋಡು! ಸೋಮಾರಿತನ ನಿನ್ನ ಜನ್ಮಸಿದ್ಧ ಹಕ್ಕು ಎಂದು ನೀನೇ ಅರ್ಥ ಮಾಡಿಕೊಳ್ಳುವೆ' ಎಂದು ಬರೆದಿದ್ದರು.

ವಾಸ್ತವವಾಗಿ ಮೊಜಾರ್ಟ್ ಸೋಮಾರಿಯಾಗಿರಲಿಲ್ಲ! ಅವನು ಏನೇ ಮಾಡಿದರೂ, ಅವನು ಅದನ್ನು ಉತ್ಸಾಹ ಮತ್ತು ಗಂಭೀರತೆಯಿಂದ ಮಾಡುತ್ತಿದ್ದ. ಅವನ ಇಡೀ ಮನಸ್ಸು ಆ ಕೆಲಸದಲ್ಲಿ ನಿರತವಾಗಿರುತ್ತಿತ್ತು. ಆದ್ದರಿಂದ ಅವನು ಯಾವುದೇ ಕೆಲಸವನ್ನಾಗಲೀ ಕೊನೆಯ ಕ್ಷಣದವರೆಗೆ ಮಾಡುತ್ತಿದ್ದ. ಕೊನೆಯ ಕ್ಷಣದಲ್ಲಿ ಎಲ್ಲವನ್ನೂ ಮುಗಿಸುತ್ತಿದ್ದುದರಿಂದ ಅವನಿಗೆ ಆ ಹೆಸರು ಬಂದಿತ್ತು. ಆದರೆ ವಾಸ್ತವದಲ್ಲಿ, ಅವನು ಎಲ್ಲವನ್ನೂ ಸಂಪೂರ್ಣವಾಗಿ ಮತ್ತು ಸರಿಯಾಗಿ ಮಾಡುವ ವ್ಯಕ್ತಿಯಾಗಿದ್ದ.

ಒಮ್ಮೆ ಮೊಜಾರ್ಟ್ ಆಸ್ಟ್ರಿಯನ್ ಚಕ್ರವರ್ತಿ ಎರಡನೇ ಜೋಸೆಫ್ ಅವರ ಆಸ್ಥಾನದಲ್ಲಿ ಸಂಗೀತ ಕಚೇರಿಯನ್ನು ನೀಡಿದ್ದ. ಸಂಗೀತ ಕಚೇರಿ ಪ್ರಾರಂಭವಾಗುವ ಒಂದು ನಿಮಿಷದ ಹಿಂದಿನವರೆಗೂ ಅವನು ಅದಕ್ಕೆ ತಕ್ಕ ಸಂಗೀತದ ಬಗ್ಗೆ ಯೋಚಿಸುತ್ತಲೇ ಇದ್ದ. ಆದ್ದರಿಂದ ಅವನು ಅದನ್ನು ಮೊದಲೇ ಬರೆದಿಡಲು ಸಾಧ್ಯವಾಗಲಿಲ್ಲ. ವೇದಿಕೆಯ ಮೇಲೆ ತಮ್ಮ ಮುಂದೆ ಇದ್ದ ಬೋರ್ಡ್ ಮೇಲೆ ಬಿಳಿ ಕಾಗದದ ಹಾಳೆಯನ್ನು ಇಟ್ಟು, ಅದರ ಮೇಲೆ ಸಂಗೀತವನ್ನು ಬರೆಯಲಾಗಿದೆ ಎಂಬಂತೆ ನಟಿಸಿ, ಅದನ್ನು ನುಡಿಸುವಂತೆ ನಟಿಸಿದ. ಆದರೆ ಅದು ಅವರು ನೀಡಿದ ಅತ್ಯುತ್ತಮ ಸಂಗೀತ ಕಚೇರಿಯಾಗಿತ್ತು.

ಪ್ರದರ್ಶನದ ನಂತರ, ಮೊಜಾರ್ಟ್ ಅವರನ್ನು ಅಭಿನಂದಿಸಲು ವೇದಿಕೆಗೆ ಬಂದ ರಾಜ, ಅಲ್ಲಿ ಮೊಜಾರ್ಟ್ ಹಿಡಿದಿದ್ದ ಹಾಳೆಯ ಮೇಲಿನ ಸಂಗೀತವನ್ನು ಕುತೂಹಲದಿಂದ ನೋಡಿದ. ಅಲ್ಲಿ ಖಾಲಿ ಕಾಗದದ ಹಾಳೆ ಇರುವುದನ್ನು ನೋಡಿ ಆಘಾತಕ್ಕೊಳಗಾದ ರಾಜ, "ಹಾಳೆಯ ಮೇಲೆ ಯಾವುದೇ ಸಂಗೀತವಿಲ್ಲದೆ ನಿಮ್ಮ ಸಂಗೀತ ಎಲ್ಲಿಂದ ಬಂತು?" ಎಂದು ಕೇಳಿದ. ಮೊಜಾರ್ಟ್ ತನ್ನ ತಲೆಯನ್ನು ತೋರಿಸಿ "ಇಲ್ಲಿಂದ" ಎಂದ.

ನೀವು ಆಸಕ್ತಿ ಹೊಂದಿದ್ದರೆ, ಎಲ್ಲವೂ ನಿಮ್ಮ ಮನಸ್ಸಿನಲ್ಲಿ ಅಚ್ಚೊತ್ತುತ್ತದೆ.

ಮಕ್ಕಳಲ್ಲಿ ಆಸಕ್ತಿಯನ್ನು ಬೆಳೆಸೋಣ!

ಒಂದು ಸಣ್ಣ ಪಟ್ಟಣದಲ್ಲಿ ಒಂದು ಮರಗೆಲಸದ ಅಂಗಡಿ ಇತ್ತು. ಅದು ಅವರ ಕುಟುಂಬದ ವ್ಯವಹಾರವಾಗಿತ್ತು. "ನನ್ನ ನಂತರ ನೀನು ಇದನ್ನು ಮಾಡಬೇಕು" ಎಂದು ತಂದೆ ತಮ್ಮ ಏಕೈಕ ಮಗನಿಗೆ ಚಿಕ್ಕ ವಯಸ್ಸಿನಿಂದಲೇ ಹೇಳುತ್ತಿದ್ದರು. ಅವನೂ ಈ ವ್ಯಾಪಾರವನ್ನು ಕಲಿತರೂ, ಅವನಿಗೆ ಅದರಲ್ಲಿ ಅಂತಹ ಆಸಕ್ತಿಯೇನೂ ಇರಲಿಲ್ಲ. ತಾನು ಇದರಲ್ಲಿ ಬೆಳೆಯಲು ಸಾಧ್ಯವಿಲ್ಲ ಎಂದೇ ಆತ ನಂಬುತ್ತಿದ್ದ.

ಶಾಲಾ ದಿನಗಳಿಂದಲೂ ಅವನಿಗೆ ಅಡುಗೆ ಮಾಡುವುದು ತುಂಬಾ ಇಷ್ಟ. ಅವನ ತಾಯಿಗೆ ಆರೋಗ್ಯ ಸರಿಯಿಲ್ಲದ ಕಾರಣ, ಅವನು ಯಾವಾಗಲೂ ಮನೆಯಲ್ಲಿ ತಾನೇ ಅಡುಗೆ ಮಾಡುತ್ತಿದ್ದ. ತನಗೆ ಅದರಲ್ಲಿ ಆಸಕ್ತಿ ಇದೆ ಎಂದು ಅವನು ಅರಿತುಕೊಂಡ. ತಂದೆಯ ಮರಣದ ನಂತರ, ಅವನು ಧೈರ್ಯದಿಂದ ಮರದ ಅಂಗಡಿಯನ್ನು ಮಾರಿ ಒಂದು ಸಣ್ಣ ರೆಸ್ಟೋರೆಂಟ್ ಅನ್ನು ಪ್ರಾರಂಭಿಸಿದ. ಅವನ ರುಚಿಕರವಾದ ಅಡುಗೆಯನ್ನು ತಿನ್ನಲು ದೊಡ್ಡ ಜನಸಮೂಹವೇ ಅಲ್ಲಿಗೆ ಬರತೊಡಗಿತು. ಮದುವೆಯಂತಹ ವಿಶೇಷ ಸಂದರ್ಭಗಳಲ್ಲಿ ಅಡುಗೆ ಮಾಡಲು ಸಹ ಅವನನ್ನು ಆಹ್ವಾನಿಸಿದರು. ಕ್ರಮೇಣ, ರೆಸ್ಟೋರೆಂಟ್ ಬೆಳೆಯಿತು ಮತ್ತು ಇಂದು ಅದು ಆ ನಗರದ ಅತಿದೊಡ್ಡ ಹೋಟೆಲ್ ಆಗಿ ಬೆಳೆದಿದೆ. ಅವನು 500 ಜನರಿಗೆ ಉದ್ಯೋಗ ನೀಡಿದ್ದಾನೆ.

ಈ ಕಥೆಯು, ಮಕ್ಕಳನ್ನು "ಭವಿಷ್ಯದಲ್ಲಿ ನೀವು ಇದನ್ನೇ ಮಾಡಲು ಬಯಸಬೇಕು" ಎಂದು ಒತ್ತಡ ಹಾಕಿ ಹೇಳುವ ಮೂಲಕ ಲಗಾಮು ಹಿಡಿದ ಕುದುರೆಗಳಂತೆ ಓಡಾಡಿಸುವ ಬದಲಿಗೆ, ನಾವು ಅವರ ಆಸಕ್ತಿಗಳನ್ನು ಕಂಡುಕೊಂಡು ಆ ದಿಕ್ಕಿನಲ್ಲಿ ಮಾರ್ಗದರ್ಶನ ಮಾಡಬೇಕು ಎಂದು ದೊಡ್ಡವರಿಗೆ ಕಲಿಸುತ್ತದೆ. ಮಕ್ಕಳ ಆಸಕ್ತಿಗಳನ್ನು ಗುರುತಿಸಿ ಪೋಷಿಸಲು ನಾವು ಏನು ಮಾಡಬೇಕು?

◆ ಅನೇಕ ಪೋಷಕರು ತಮ್ಮ ಮಕ್ಕಳು ಯಶಸ್ವಿಯಾದಾಗ ಮಾತ್ರ ಹೊಗಳುತ್ತಾರೆ. "ಸೂಪರ್, ನೀನು ಉತ್ತಮ ಅಂಕಗಳನ್ನು ಗಳಿಸಿದ್ದೀಯ; ತುಂಬಾ ಒಳ್ಳೆಯದು, ನೀವು ಓಟದಲ್ಲಿ ಪ್ರಥಮ ಬಹುಮಾನ ಪಡೆದಿದ್ದೀಯ" ಎಂದು ಹೇಳುವ ಮೂಲಕ ಮಾತ್ರ ಅವರ ಯಶಸ್ಸನ್ನು ಹೊಗಳುವುದು ಸೂಕ್ತವಲ್ಲ. ಅವರು ಕೆಲವು ವಿಷಯಗಳಲ್ಲಿ ಪ್ರಯತ್ನಿಸಿ ವಿಫಲರಾಗಿರಬಹುದು. ಆ ಪ್ರಯತ್ನವನ್ನು ಕೂಡ ಪ್ರಶಂಸಿಸಿ. ಅನೇಕ ಶಾಲೆಗಳಲ್ಲಿ, ಅವರು ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸಿದರೆ, ಅವರಿಗೆ 'ಭಾಗವಹಿಸಿದ್ದಾರೆ' ಎಂದು ಪ್ರಮಾಣಪತ್ರವನ್ನು ನೀಡಲಾಗುತ್ತದೆ. ಇದು ಮಕ್ಕಳನ್ನು ಪ್ರೇರೇಪಿಸುವ ಪ್ರಯತ್ನವಾಗಿದೆ. ಅವರ ಪ್ರಯತ್ನಗಳು ಮತ್ತು ಪ್ರಗತಿಯನ್ನು ಯಾವಾಗಲೂ ಹೀಗೆ ಪ್ರಶಂಸಿಸಿ.

◆ ಮಕ್ಕಳು ಹೊಸದನ್ನು ಪ್ರಯತ್ನಿಸುವಾಗ, "ನಿಮಗೆ ಇದು ತಿಳಿದಿಲ್ಲ, ಗೊತ್ತಿಲ್ಲ" ಎಂದು ಹೇಳಿ ಅವರನ್ನು ತಡೆಯಬೇಡಿ. ಇದು ಅವರ ಬೆಳವಣಿಗೆಗೆ ಸಹಾಯ ಮಾಡುವುದಿಲ್ಲ. ಬದಲಿಗೆ ಅವರನ್ನು ಪ್ರೋತ್ಸಾಹಿಸಿ. ಅಪಾಯಗಳನ್ನು ತೆಗೆದುಕೊಳ್ಳುವಲ್ಲಿರುವ ಅವರ ಧೈರ್ಯವನ್ನು ಹೊಗಳಿ. ಯಶಸ್ಸು ಮಾತ್ರ ಹೊಗಳುವ ವಿಷಯವಲ್ಲ.

◆ ನಿಮ್ಮ ಮಕ್ಕಳಲ್ಲಿ 'ನಾನು ಇದನ್ನು ಮಾಡಬಲ್ಲೆ' ಎಂಬ ಮನಸ್ಥಿತಿಯನ್ನು ಬೆಳೆಸಿ. 'ಇದು ಅಸಾಧ್ಯ' ಎಂದು ಹೇಳಿ ಅವರನ್ನು ಹಿಮ್ಮೆಟ್ಟಿಸಬಾರದು. ಕಠಿಣ ಪರಿಶ್ರಮದ ನಂತರ ನೀವು ಸಾಧಿಸಿದ ಸಾಧನೆಗಳ ಕೆಲವು ಕಥೆಗಳನ್ನು ಅವರಿಗೆ ಹೇಳಿ. ಅವರನ್ನು ಪ್ರೋತ್ಸಾಹಿಸಿ. ಅವರು ಅದನ್ನು ಎಲ್ಲಿ ಕಲಿಯಬಹುದು ಎಂದು ಮಾರ್ಗದರ್ಶನ ಮಾಡಿ. ಅದನ್ನು ಹೇಗೆ ಉತ್ತಮವಾಗಿ ಮಾಡಬೇಕೆಂದು ಅವರಿಗೆ ಮಾರ್ಗದರ್ಶನ ಮಾಡಿ. ಅವರ ಭಯವನ್ನು ತೆಗೆದು ಹಾಕಿ.

◆ ಮಕ್ಕಳಲ್ಲಿ ವಿಧವಿಧವಾದ ಭಯಗಳಿರುತ್ತವೆ. ಆ ಭಯಗಳಿಂದ ಅವರು ಭಯಭೀತರಾಗಬಾರದು. ಪೋಷಕರು ಮಕ್ಕಳಿಗೆ ಅಂತಹ ಸಂದರ್ಭಗಳಲ್ಲಿ ಮಾರ್ಗದರ್ಶನ ನೀಡಬೇಕು. ಅವರು ತಮ್ಮ ಭಯವನ್ನು ನಿವಾರಿಸಿಕೊಂಡು ಮುಂದೆ ಸಾಗುವಾಗಲೆಲ್ಲಾ ಅದನ್ನು ಬರೆದಿಟ್ಟುಕೊಳ್ಳಿ. ಅವರಿಗೆ ಆಗಾಗ್ಗೆ ಅದನ್ನು ಹೇಳಿ. ಅದು ಅವರನ್ನು ಧೈರ್ಯಶಾಲಿಗಳನ್ನಾಗಿ ಮಾಡುತ್ತದೆ.



◆ ಧೈರ್ಯ ಮತ್ತು ಕುತೂಹಲವನ್ನು ಬೆಳೆಸಲು ಮಕ್ಕಳಿಗೆ ಸರಿಯಾದ ಪ್ರಶ್ನೆಗಳನ್ನು ಕೇಳಿ. "ನೀವು ಮೊದಲು ಮಾಡಲು ಹೆದರುತ್ತಿದ್ದ ಕೆಲಸವನ್ನು ಈಗ ಮಾಡುವುದು ಸುಲಭವಾಗುತ್ತಿದೆಯೇ?", "ನೀವು ಏನನ್ನಾದರೂ ಮಾಡಲು ಹೆದರುತ್ತೀರಾ ಮತ್ತು ಆ ಭಯವನ್ನು ಹೋಗಲಾಡಿಸಲು ನಾನು ನಿಮಗೆ ಹೇಗೆ ಸಹಾಯ ಮಾಡಬಹುದು?", "ನೀವು ತುಂಬಾ ಹೆದರುತ್ತಿದ್ದೀರಿ, ನೀವು ಇದನ್ನು ಮಾಡಿದರೆ ಯಾವ ಕೆಟ್ಟ ವಿಷಯಗಳು ಸಂಭವಿಸುತ್ತವೆ ಎಂದು ನೀವು ಭಾವಿಸುತ್ತೀರಿ ಮತ್ತು ಆ ಭಯಕ್ಕೆ ಯಾವುದೇ ಪುರಾವೆಗಳಿವೆಯೇ?", "ನಿಮ್ಮ ಸ್ನೇಹಿತರು ಹೆದರುತ್ತಿದ್ದರೆ ನೀವು ಅವರನ್ನು ಹೇಗೆ ಸಮಾಧಾನಪಡಿಸುತ್ತೀರಿ?" ಇತ್ಯಾದಿ ಪ್ರಶ್ನೆಗಳನ್ನು ಅವರ ಬಳಿ ಕೇಳಿ.

◆ ಕೇವಲ ಸಲಹೆ ನೀಡುವುದು ನಿಷ್ಪ್ರಯೋಜಕ. ಅದು ಅವರ ಮನಸ್ಸನ್ನು ಬದಲಾಯಿಸುವುದಿಲ್ಲ. ಬದಲಾಗಿ, ಸಂಭಾಷಣೆ ನಡೆಸಿ. ಅವರು ಹಿಂಜರಿಕೆಯಿಲ್ಲದೆ ತಮ್ಮ ಭಯವನ್ನು ಹಂಚಿಕೊಳ್ಳಲು ಬಿಡಿ. ನೀವು ಕೋಪ ಅಥವಾ ಕಿರಿಕಿರಿಯಿಂದ ಅವರಿಗೆ ಅಡ್ಡಿಪಡಿಸಿದರೆ, ಅವರು ಮಾತನಾಡುವುದನ್ನು ನಿಲ್ಲಿಸುತ್ತಾರೆ.

◆ ಯಾವುದನ್ನೂ ಒತ್ತಾಯಿಸಬೇಡಿ. 'ಈಜುಕೊಳದೊಳಗೆ ಇಳಿಯಲು ಹೆದರುವ ಮಗುವನ್ನು ಬಲವಂತವಾಗಿ ತಳ್ಳಿದರೆ, ಅವರು ತಾವಾಗಿಯೇ ಈಜಲು ಕಲಿಯುತ್ತಾರೆ" ಎಂದು ಹಳ್ಳಿಗಳಲ್ಲಿ ಹೇಳುತ್ತಾರೆ. ಆದರೆ ಈ ಒರಟು ವರ್ತನೆ ಮಗುವಿಗೆ ನೀರಿನ ಮೇಲಿರುವ ಭಯವನ್ನು ಹೆಚ್ಚಿಸುತ್ತದೆ. ಪೋಷಕರು ತಾವು ಈಜುವ ಮೂಲಕ ಮತ್ತು "ಇದು ಎಷ್ಟು ಮಜವಾಗಿದೆ ಎಂದು ನಿನಗೆ ತಿಳಿದಿದೆಯೇ?" ಎಂದು ಹೇಳುವ ಮೂಲಕ ಅವರ ಆಸಕ್ತಿಯನ್ನು ಉತ್ತೇಜಿಸಬಹುದು. ಅವರನ್ನು ಆಳವಿಲ್ಲದ ಪ್ರದೇಶದಲ್ಲಿ ಸ್ವಲ್ಪ ಸಮಯದವರೆಗೆ ನೀರಿನಲ್ಲಿ ಆಟವಾಡಲು ಬಿಡಬಹುದು. ಕ್ರಮೇಣ, ಅವರ ಆಸಕ್ತಿ ಬೆಳೆಯುತ್ತದೆ. ಅದರ ಬದಲಿಗೆ ಅವರನ್ನು ಸುಮ್ಮನೆ ನೀರಿಗೆ ತಳ್ಳಿ ಒತ್ತಾಯಿಸಿದರೆ, ಅವರು ಅದನ್ನು ದ್ವೇಷಿಸುತ್ತಾರೆ.

◆ ನಿಮ್ಮ ಮಗುವಿಗೆ ಗಣಿತದ ಬಗ್ಗೆ ಭಯವಿದೆಯೇ? ಮನೆಯಲ್ಲಿ ನೀವೂ ಪಕ್ಕದಲ್ಲಿ ಕುಳಿತುಕೊಂಡು, ಮಾರ್ಗದರ್ಶನ ಮಾಡಿ, ಗಣಿತ ಮಾಡಲು ಅವರನ್ನು ಕೇಳಿ. ಅವರು ಹೊಸ ಶಿಕ್ಷಕರಿಗೆ ಹೆದರುತ್ತಾರೆಯೇ? ನಿಮ್ಮನ್ನು ಆ ಶಿಕ್ಷಕರಂತೆ ಕಲ್ಪಿಸಿಕೊಂಡು ಅವರೊಂದಿಗೆ ಸಂಭಾಷಣೆ ನಡೆಸಲು ಹೇಳಿ. ಅವರು ಯಾವುದಕ್ಕೆ ಹೆದರುತ್ತಾರೋ ಅದನ್ನು ಅಭ್ಯಾಸ ಮಾಡಿದರೆ ಅವರ ಭಯ ಹೋಗುತ್ತದೆ ಎಂದು ಅವರಿಗೆ ತಿಳಿವಳಿಕೆ ಹೇಳಿ.

◆ ನಿಮ್ಮ ಮಗು ಬೈಕ್ ಓಡಿಸಲು ಕಲಿಯಲು ಹೆದರುತ್ತಿದೆಯೇ? ಅವರು ಹಿಂದೆ ಭಯಪಡುತ್ತಿದ್ದ ಯಾವುದೋ ವಿಷಯದ ಬಗ್ಗೆ ಈಗ ಉತ್ಸುಕರಾಗಿರಬಹುದು. ಅವರಿಗೆ ಆ ಒಂದು ಉದಾಹರಣೆ ನೀಡಿ. ಬೈಕ್ ಸವಾರಿ ಮಾಡುವುದರಿಂದ ಸಿಗುವ ಆನಂದದ ಬಗ್ಗೆ ಹೇಳಿ. "ನಿನ್ನ ಎಲ್ಲಾ ಸ್ನೇಹಿತರೂ ನಿನ್ನ ಧೈರ್ಯದ ಬಗ್ಗೆ ನೀನು ಹೆಮ್ಮೆ ಪಡಬಹುದು" ಎಂದು ಹೇಳುವ ಮೂಲಕ ಅವರನ್ನು ಪ್ರೋತ್ಸಾಹಿಸಿ. ಅವರಿಗೆ ಆಸಕ್ತಿ ಮೂಡುತ್ತದೆ.

◆ ಮಕ್ಕಳನ್ನು ಇತರರೊಂದಿಗೆ ಹೋಲಿಸಿ ಅವಮಾನಿಸಬಾರದು. ಅದೇ ಸಮಯದಲ್ಲಿ, ಅವರಲ್ಲಿ ಆರೋಗ್ಯಕರ ಸ್ಪರ್ಧಾತ್ಮಕ ಪ್ರಜ್ಞೆಯನ್ನು ತುಂಬುವುದರಲ್ಲಿ ಯಾವುದೇ ತಪ್ಪಿಲ್ಲ. "ನೀವು ಚೆನ್ನಾಗಿ ಓಡುವುದನ್ನು ಅಭ್ಯಾಸ ಮಾಡಬೇಕು ಮತ್ತು ಶಾಲೆಗೆ ಓಟದಲ್ಲಿ ಮೊದಲು ಬರಬೇಕು" ಎಂದು ಹೇಳುವುದು ಅವರನ್ನು ಪ್ರೋತ್ಸಾಹಿಸುತ್ತದೆ ಮತ್ತು ಅವರಲ್ಲಿ ಆಸಕ್ತಿಯನ್ನು ಹುಟ್ಟು ಹಾಕುತ್ತದೆ.

◆ ಮಕ್ಕಳು ಬೆಳೆದಂತೆ ಅನೇಕ ವಿಷಯಗಳನ್ನು ಅವರು ಕಲಿಯಬೇಕಾಗುತ್ತದೆ. ಅವರಿಗೆ ಎಲ್ಲವನ್ನೂ ಸಕಾರಾತ್ಮಕವಾಗಿ ವಿವರಿಸಿ. 'ನಾನು ಇದನ್ನು ಮಾಡಬಹುದೇ' ಎಂಬ ಬಗ್ಗೆ ಅವರಿಗೆ ಸ್ವಲ್ಪ ಸಂದೇಹವಿದ್ದರೂ, ಅವರೊಂದಿಗೆ ಸಕಾರಾತ್ಮಕವಾಗಿ ಮಾತನಾಡಿ ಮತ್ತು ಅವರ ಆತ್ಮವಿಶ್ವಾಸವನ್ನು ಬೆಳೆಸಿ. ಇದು ಅವರಲ್ಲಿ ಕುತೂಹಲವನ್ನು ಹುಟ್ಟು ಹಾಕುತ್ತದೆ. ಇದು ಅವರೊಳಗೆ ಉತ್ಸಾಹದ ಭಾವನೆಯನ್ನು ಉಂಟು ಮಾಡುತ್ತದೆ ಮತ್ತು ಅವರು ಉತ್ಸಾಹದಿಂದ ಏನನ್ನಾದರೂ ಮಾಡುವಂತೆ ಮಾಡುತ್ತದೆ.

◆ ಮಕ್ಕಳು ಸ್ವತಂತ್ರವಾಗಿ ಯೋಚಿಸುವ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಅವರು ಯಾವಾಗಲೂ ತಮ್ಮ ಪೋಷಕರಿಂದ ಮಾರ್ಗದರ್ಶನವನ್ನು ನಿರೀಕ್ಷಿಸಬಾರದು. ಅವರು ಎಲ್ಲದರ ಬಗ್ಗೆಯೂ ಯೋಚಿಸಿ ಸ್ವತಂತ್ರವಾಗಿ ನಿರ್ಧಾರಗಳನ್ನು ತೆಗೆದುಕೊಂಡಾಗ, ಅವರಲ್ಲಿ ಕುತೂಹಲ ಸಹಜವಾಗಿಯೇ ಮೂಡುತ್ತದೆ.

ಕೆಲಸವನ್ನು ಆಸಕ್ತಿಯಿಂದ ಮಾಡಿ!

"ನಾನು ಬಯಸಿದ ಕೆಲಸ ಸಿಗಲಿಲ್ಲ. ಹಾಗಾಗಿ ಸಿಕ್ಕ ಕೆಲಸವನ್ನು ನಾನು ಮಾಡುತ್ತೇನೆ" ಎಂಬ ಆಲೋಚನೆಯೊಂದಿಗೆ ಕೆಲಸಕ್ಕೆ ಹೋಗುವ ಅನೇಕ ಜನರು ಆ ಕೆಲಸಕ್ಕೆ ಎಂದಿಗೂ ಅಂಟಿಕೊಳ್ಳುವುದಿಲ್ಲ. ಅವರು ಇಲ್ಲಿರುವ ಜನಸಮೂಹದಲ್ಲಿ ಒಬ್ಬರಾಗಿ "ನಾನು ಕೂಡ ಕೆಲಸ ಮಾಡುತ್ತೇನೆ" ಎಂದು ಯೋಚಿಸುವ ಮೂಲಕ ಸಮಯ ಕಳೆಯುತ್ತಾರೆ. ಯಾವುದೇ ಭಾವನೆಯಿಲ್ಲದೆ "ನಾನು ಈ ಕಂಪನಿಯಲ್ಲಿ ಈ ಕೆಲಸ ಮಾಡುತ್ತಿದ್ದೇನೆ" ಎಂದು ಹೇಳುವುದಕ್ಕೂ ಮತ್ತು "ಈ ಕಂಪನಿಯಲ್ಲಿ ನನಗೆ ಅಂತಹ ಜವಾಬ್ದಾರಿ ಇದೆ" ಎಂದು ಸಂತೋಷದಿಂದ ಹೇಳುವುದಕ್ಕೂ ವ್ಯತ್ಯಾಸವಿದೆ.

ಬೇರೆ ಯಾವುದೇ ಕಾರಣವಿಲ್ಲದೆ ಕೆಲಸ ಮಾಡುವವರು ಅದನ್ನು ಕೇವಲ ಜೀವನೋಪಾಯಕ್ಕಾಗಿ ಮಾಡುತ್ತಾರೆ. ಉದ್ಯೋಗವನ್ನೇ ತಮ್ಮ ಗುರುತು ಮತ್ತು ಜೀವನವೆಂದು ಪರಿಗಣಿಸುವವರು ಅದನ್ನು ಉತ್ಸಾಹದಿಂದ ಮಾಡುತ್ತಾರೆ. ಅಷ್ಟು ಉತ್ಸಾಹದಿಂದ ಮಾಡುವವರಿಗೆ ಜೀವನದಲ್ಲಿ ಏನು ಸಿಗುತ್ತದೆ?

- ಸರಾಸರಿ ಜನರು ಉದ್ಯೋಗವನ್ನು ಕೇವಲ ಆದಾಯ ಗಳಿಸುವ ಅವಕಾಶ ಎಂದು ಭಾವಿಸುತ್ತಾರೆ. ಉತ್ಸಾಹದಿಂದ ಅದನ್ನು ಮಾಡುವವರು ಅದನ್ನು ತಮ್ಮ ಜೀವನದುದ್ದಕ್ಕೂ ಅದು ತಮಗೆ ಮೌಲ್ಯ ಮತ್ತು ಗುರುತನ್ನು ನೀಡುವ ವಿಷಯವೆಂದು ಗೌರವಿಸುತ್ತಾರೆ. ಆದ್ದರಿಂದ ಉತ್ಸಾಹದಿಂದ ಆ ಕೆಲಸವನ್ನು ಮಾಡುತ್ತಾರೆ.
- ಸರಾಸರಿ ಜನರು ಒಂದು ಕೆಲಸವನ್ನು ತತ್ಕಾಲದ ಕೆಲಸ ಎಂದು ಮಾತ್ರ ಪರಿಗಣಿಸುತ್ತಾರೆ. ಅವರಿಗೆ ಆ ಕೆಲಸದ ಬಗ್ಗೆ ಯಾವುದೇ ಬಾಂಧವ್ಯವಿರುವುದಿಲ್ಲ. ಉತ್ಸಾಹಭರಿತ ಉದ್ಯೋಗಿಗಳು ಮಾತ್ರ ಯಾವಾಗಲೂ ಆ ಕೆಲಸದ ಬಗ್ಗೆ ಯೋಚಿಸುತ್ತಿರುತ್ತಾರೆ.
- ಒಂದು ಕೆಲಸಕ್ಕೆ ಸೇರಿದ ನಂತರವೂ, ಸರಾಸರಿ ಜನರು ಆ ಕೆಲಸಕ್ಕೆ ಬೇಕಾದ ಕೌಶಲ್ಯ, ತಂತ್ರಗಳು ಮತ್ತು ತರಬೇತಿಯನ್ನು ಪಡೆಯಲು ಆಸಕ್ತಿ ತೋರಿಸುವುದಿಲ್ಲ. ಮತ್ತೊಂದೆಡೆ, ಉತ್ಸಾಹಭರಿತ ಜನರು ಆ ಕೆಲಸಕ್ಕೆ ಬೇಕಾದ ಎಲ್ಲಾ ತರಬೇತಿಯನ್ನೂ, ಲಭ್ಯವಿರುವಲ್ಲೆಲ್ಲಾ ಹೋಗಿ ಕಲಿಯುತ್ತಾರೆ.
- ಕೆಲಸದಿಂದ ಸಿಗುವ ಏಕೈಕ ಲಾಭ ಹಣ ಎಂದು ಭಾವಿಸುವವರು ಸರಾಸರಿ ಜನರು. ಉತ್ಸಾಹಭರಿತ ಜನರಿಗೆ, ಆ ಕೆಲಸದಿಂದ ಸಿಗುವ ಅನುಭವ ಮತ್ತು ತೃಪ್ತಿ ಪ್ರಾಥಮಿಕ ಪರಿಗಣನೆಯಾಗಿರುತ್ತದೆ, ಆದಾಯವು ದ್ವಿತೀಯ ಪರಿಗಣನೆಯಾಗಿರುತ್ತದೆ.
- ಸರಾಸರಿ ಜನರು ತಮ್ಮ ಉದ್ಯೋಗಗಳಲ್ಲಿ ಹೆಚ್ಚಿನ ಬೆಳವಣಿಗೆ ಪಡೆಯುವುದಿಲ್ಲ. ಕಂಪನಿಗಳು ಆವರು ಆ ಕೆಲಸಕ್ಕೆ ಸರಿಯಾದವರಲ್ಲ ಎಂದು ಕಂಡುಕೊಳ್ಳುತ್ತವೆ. ಆದರೆ ಹೆಚ್ಚುವರಿ ಕೌಶಲ್ಯದಿಂದ ತಮ್ಮ ಕೆಲಸಗಳನ್ನು ಮಾಡುವವರಿಗೆ ಆ ಕಂಪನಿಯ ಕೊಡುಗೆ ನೀಡುತ್ತದೆ. ಹೀಗಾಗಿ ಆಸಕ್ತಿಯುಳ್ಳ ಜನರು ಬಡ್ತಿ ಮತ್ತು ಸಂಬಳ ಹೆಚ್ಚಳವನ್ನು ಪಡೆಯುತ್ತಾರೆ.
- ಕಂಪನಿಗಳು ಸರಾಸರಿ ಜನರ ಆಗಮನವನ್ನು ದೊಡ್ಡ ಶಕ್ತಿಯಾಗಿ ಅಥವಾ ಅವರ ನಿರ್ಗಮನವನ್ನು ನಷ್ಟವಾಗಿ ನೋಡುವುದಿಲ್ಲ. ಆದರೆ ಯಾವುದೇ ಕಂಪನಿಯು ಆಸಕ್ತಿದಾಯಕ ಉದ್ಯೋಗಿಗಳನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ಅವರು ಹೊರಟು ಹೋದರೂ ಸಹ, ಅವರನ್ನು ಹೇಗಾದರೂ ಮರಳಿ ಕರೆತರಲು ಪ್ರಯತ್ನಿಸುತ್ತಾರೆ.

Owned, Published by K.R. NAGARAJAN, Published from 10, Senguntapuram Mangalam Road, TIRUPUR - 641 604 &
Printed by B. ASHOK KUMAR at RATHNA OFFSET PRINTERS, 40, Peters Road, Royapettah, Chennai - 600 014. Editor : T.J. GNANAVEL



SUKRA SUPER FINE COTTON VESTS | ROMEX SUPERIOR BANIANS | RISE-UP PREMIUM BANIANS | ACOSTE LUXURY INNERWEARS | Breeze Eye Let Vests | WinStripe STRIPED BANIANS | ARCHERY GYM VEST | COMPACT PREMIUM COTTON RIB VESTS | LITTLE STARS KIDS INNERWEARS

Available at Ramraj Showrooms and All Leading Textile Shops | Shop Online at www.ramrajcotton.in

Bilupu Monthly - Postal Registration No.TN/TRU/30/2024-26. Registered with the Registrar of Newspapers for India under No.TNKAN/2017/74564. Day of Publishing 01-12-2025. Posted at Tirupur BPC on 5th of every month.